

ಕಲ್ಕತ್ತೆಯಲ್ಲಿ ನಡೆದ ಕೋಮು ಸೌಹಾರ್ದದ
ಮೌನ ಮೆರವಣಿಗೆಯಲ್ಲಿ ಕಾಂ. ಜ್ಯೋತಿ ಬಸು

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 | ಸಂಚಿಕೆ 44 | ನವಂಬರ್ 4, 1990 | ರೂ. 1.50

ಧರ್ಮದ ಹೆಸರಲ್ಲಿ ಸ್ವಾರ್ಥದ ಆಟ ನಿಲ್ಲಿಸಬೇಕು

ಎಡಪಕ್ಷಗಳ ಮನವಿ

ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ದಕ್ಷತೆ ಹಾಗೂ ಬಹಳ ಎಚ್ಚರಿಕೆಯಿಂದ ಬಿ.ಜೆ.ಪಿ. ಕರೆಕೊಟ್ಟಿದ್ದ ಹಿಂಸಾತ್ಮಕ ಕರಸೇವೆಯನ್ನು ತಡೆಹಿಡಿದ ರೀತಿಗೆ ಹಾಗೂ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸಿದುದಕ್ಕೆ ಎಡಪಕ್ಷಗಳು ಅವರನ್ನು ಅಭಿನಂದಿಸಿವೆ.

ಅಕ್ಟೋಬರ್ 30ರಂದು ನವದೆಹಲಿಯಲ್ಲಿ ಸಿ.ಪಿ.ಐ(ಎಂ), ಸಿ.ಪಿ.ಐ., ಆರ್.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕ್ ಪಕ್ಷಗಳ ಮುಖಂಡರು ನವದೆಹಲಿಯಲ್ಲಿ ಸಭೆ ಸೇರಿದ ನಂತರ ನೀಡಿದ ಹೇಳಿಕೆಯಲ್ಲಿ ಶ್ರೀಯುತ ಮುಲಾಯಮ್ ಸಿಂಗ್ ಯಾದವರನ್ನು ಶ್ಲಾಘಿಸಿದ್ದಾರೆ ಹಾಗೂ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಎಲ್ಲಾ ನೆರವು ನೀಡಿದುದನ್ನು ಸ್ವಾಗತಿಸಿದ್ದಾರೆ.

ಆದರೆ ವಿ.ಹೆಚ್.ಪಿ., ಬಿ.ಜೆ.ಪಿ.ಯ ಸಾವಿರಾರು ಕರಸೇವಕರು ಶಿಲಾನ್ಯಾಸದ ಸ್ಥಳಕ್ಕೆ ಹಾಗೂ ಬಾಬ್ರಿ ಮಸೀದಿಯ ಜಾಗಕ್ಕೆ ನುಗ್ಗಿ ಮಸೀದಿಯನ್ನು ಕೆಡವಿ ಕರಸೇವಾ ನಡೆದಿದೆ ಎಂಬ ಸುಳ್ಳು ಪ್ರಚಾರವನ್ನು ಆರಂಭಿಸಿ ಕೋಮುದಳ್ಳುರಿಯನ್ನು ಎಲ್ಲಾ ಕಡೆ ಹಬ್ಬಿಸಲು ಸತತ ಪ್ರಯತ್ನ ನಡೆಸಿದ್ದಾರೆ ಇದರ ಪರಿಣಾಮವಾಗಿ ದೇಶದ ಕೆಲವೆಡೆ ಹಿಂಸಾತ್ಮಕ ಗಲಭೆಗಳು, ಸಾವು ನೋವುಗಳು ವರದಿಯಾಗಿವೆ.

ಈ ಹಿನ್ನಲೆಯಲ್ಲಿ ವಿ.ಹೆಚ್.ಪಿ ಹಾಗೂ ಬಿಜೆಪಿ ಅಕ್ಟೋಬರ್ 31ರಂದು ಪ್ರತಿಭಟನಾ ದಿನವಾಗಿ ಆಚರಿಸಲು ಕರೆ ಕೊಟ್ಟು ಕೋಮು ಜ್ವಾಲೆಯನ್ನು ದೇಶದ ಎಲ್ಲಾ ಕಡೆ ಹಬ್ಬಿಸಿ ಮುಂದುವರಿಸಲು ಪಣತೊಟ್ಟಿದೆ. ಈ ಎಲ್ಲಾ ವಿದ್ಯಮಾನಗಳನ್ನು ಪರಿಶೀಲಿಸಿದಾಗ ವಿಹೆಚ್‌ಪಿ ಹಾಗೂ ಬಿಜೆಪಿಯು ತನ್ನ ಸ್ವಾರ್ಥಸಾಧನೆಗಾಗಿ ಪೂರ್ವನಿಯೋಜಿತವಾದ ಮತ್ತು ವ್ಯವಸ್ಥಿತವಾದ, ದೇಶದ ಐಕ್ಯತೆಗೆ ಮಾರಕವಾದ, ಕೋಮು ಸೌಹಾರ್ದತೆ ಮತ್ತು ಶಾಂತಿಗೆ ಭಂಗ ತರುವ, ಹಾಗೂ ಜಾತ್ಯಾತೀತ ಮೌಲ್ಯಗಳಿಗೆ ತಿಲಾಂಜಲಿಯನ್ನೀಯುವ ಅಪಾಯಕಾರಿಯಾದ ಆಟದಲ್ಲಿ ಮಗ್ನವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಎಡಪಕ್ಷಗಳು ವಿಹೆಚ್‌ಪಿ, ಬಿಜೆಪಿಯ ಕೋಮು ಪ್ರಚೋದನೆಯನ್ನು ತೀವ್ರವಾಗಿ ಖಂಡಿಸಿ, ದೇಶದ ಎಲ್ಲಾ ಜಾತ್ಯಾತೀತ ರಾಜಕೀಯ ಪಕ್ಷಗಳು, ಶಾಂತಿಯನ್ನು ಪ್ರೀತಿಸುವ ದೇಶಾಭಿಮಾನಿ ನಾಗರೀಕರು ಮುಂದೆ ಬಂದು ದೇಶದ ಐಕ್ಯತೆಯನ್ನು ಹಾಗೂ ವಿಹೆಚ್‌ಪಿ, ಬಿಜೆಪಿಯು ಧರ್ಮದ ಹೆಸರಿನಲ್ಲಿ ನಡೆಸುತ್ತಿರುವ ಸ್ವಾರ್ಥಸಾಧಕತನದ ಆಟವನ್ನು ನಿಲ್ಲಿಸುವುದು ಇವತ್ತಿನ ಅತೀ ಪ್ರಮುಖವಾದ ಕಾರ್ಯವಾಗಿದೆ ಎಂದು ಹೇಳಿವೆ.

ಎಡಪಕ್ಷಗಳು ಈ ಮೂಲಕ ನಿಜವಾದ ರಾಮಭಕ್ತರಿಗೆ ಮನವಿಯನ್ನು ಮಾಡುತ್ತಾ ಈ ದೇಶದಲ್ಲಿ ರಾಮದೇವರ ದೇವಸ್ಥಾನ ಕಟ್ಟಲಿಕ್ಕೆ ಯಾರದೂ ವಿರೋಧವಿಲ್ಲ. ಅದೇ ಸಂದರ್ಭದಲ್ಲಿ ಅಲ್ಪ ಸಂಖ್ಯಾತರ ಭಾವನೆಗಳಿಗೆ ಧಕ್ಕೆ ತರುವ ಮಸೀದಿಗೆ ಹಾನಿ ಬಾರದಂತೆ ಈ ಕೆಲಸ ನಿರ್ವಹಿಸಬೇಕಾಗಿದೆ ಎಂದು ಮನವಿ ಮಾಡಿದೆ.

ಬಿ.ಜೆ.ಪಿ. ಬಂದ್‌ನಲ್ಲಿ ವ್ಯಾಪಕ ಹಿಂಸಾಚಾರ

ದೇಶದ ಹಲವೆಡೆ ಹಲವಾರು ಸಾವು ನೋವು ತಂದ ಬಿ.ಜೆ.ಪಿ. ಕರೆ ನೀಡಿದ ಬಂದ್‌ನಲ್ಲಿ ಅತ್ಯಂತ ಹೆಚ್ಚು ದುಷ್ಪರಿಣಾಮ ಆಗಿರುವುದು ಬಿ.ಜೆ.ಪಿ. ನೇತೃತ್ವದ ಸರಕಾರವಿರುವ ರಾಜಸ್ಥಾನದಲ್ಲಿ ಜಯಪುರದಲ್ಲಿ ಅಲ್ಪಸಂಖ್ಯಾತರ ವಿರುದ್ಧ ವ್ಯವಸ್ಥಿತ ಆಕ್ರಮಣ, ಲೂಟಿ, ಸುಲಿಗೆ ನಡೆಯಿತು. ಸತ್ತವರ ಅಧಿಕೃತ ಸಂಖ್ಯೆ 9. ಆದರೆ ರಾಜ್ಯದ ಜೋಧಪುರ, ಜಯಪುರ, ಬೀವರ್, ನಾಗೌರ್, ಕೋಟಾಗಳಲ್ಲಿ ನಡೆದ ಹಿಂಸಾಚಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಪ್ರಾಣ ಹಾನಿಯಾಗಿದೆ.

ಈ ಕೋಮು ಹಿಂಸಾಚಾರಕ್ಕೆ ಬಿ.ಜೆ.ಪಿ. ನೇತೃತ್ವದ ಸರಕಾರವೇ ಹೊಣೆ ಎಂದು ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಅಕ್ಟೋಬರ್ 25 ರಂದು ನೀಡಿದ ಹೇಳಿಕೆಯಲ್ಲಿ ತಿಳಿಸಿದೆ ಬಂದ್ ದಿನ ಜಾಗರೂಕರಾಗಿರುವ ಬದಲು ಪೋಲೀಸರು ಗೂಂಡಾಗಳೊಂದಿಗೆ ಶಾಮೀಲಾದರು. ತನ್ನ ಕ್ರಿಮಿನಲ್ ಬೇಜವಾಬ್ದಾರಿತನದಿಂದಾಗಿ

ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಖಂಡನೆ

ಅಲ್ಪಸಂಖ್ಯಾತರನ್ನು ಈ ಸರಕಾರ ಬರ್ಬರ ಹಿಂಸೆಗೆ ಒಳಪಡಿಸಿದಂತಾಗಿದೆ. ಇಂತಹ ಸರಕಾರ ಕೋಮುಸೌಹಾರ್ದ, ಕಾನೂನು ವ್ಯವಸ್ಥೆಯನ್ನು ಪಾಲಿಸುತ್ತದೆಂದು ವಿಶ್ವಾಸ ಪಡಲು ಸಾಧ್ಯವಿಲ್ಲ. ಆದ್ದರಿಂದ ತಕ್ಷಣ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಗಲಭೆ ಪೀಡಿತ ಪ್ರದೇಶಗಳಲ್ಲಿ ಜನರ ಜೀವಗಳ, ಆಸ್ತಿಪಾಸ್ತಿಯ ರಕ್ಷಣೆಗೆ ಸಾಕಷ್ಟು ಭದ್ರತಾ ಪಡೆಗಳನ್ನು ಕಳಿಸಬೇಕೆಂದು ಪಿ.ಬಿ. ಒತ್ತಾಯಿಸಿದೆ. ಬಿ.ಜೆ.ಪಿ./ವಿ.ಹೆಚ್.ಪಿ. ಕುಮ್ಮಕ್ಕಿನಿಂದ ಮತ್ತಷ್ಟು ಗಲಭೆಗಳಾಗದಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾಗೃತರಾಗಿರಬೇಕೆಂದು ಅದು ಮನವಿ ಮಾಡಿದೆ.

ಪರಿಸ್ಥಿತಿಯ ಅಧ್ಯಯನ ನಡೆಸಲು ಸಿ.ಪಿ.ಐ(ಎಂ)ನ ನಿಯೋಗವೊಂದು ಜಯಪುರಕ್ಕೆ ಹೋಗಿದೆ. ಕಾಂ. ಮಹ್ಮದ್ ಅಮೀನ್ ಹಾಗೂ ಶಿವಪತ್ ಸಿಂಗ್ ಈ ನಿಯೋಗದ ಸದಸ್ಯರು.

ಜಯಪುರದ ಭಯಾನಕ ಕೋಮು ಹಿಂಸಾಚಾರ "ಬಿ.ಜೆ.ಪಿ. ನೇತೃತ್ವದ ಸರಕಾರವೇ ಹೊಣೆ"

ಅಯೋಧ್ಯೆಯಲ್ಲಿ ಹುಚ್ಚೆದ್ದಿದ್ದ ಕರ ಸೇವಕರಿಂದ ನ್ಯಾಯಾಲಯದ ಆಜ್ಞೆಯ ಉಲ್ಲಂಘನೆಯಾಗುವುದನ್ನು ತಡೆಯುವಾಗ ನಡೆದ ಗೋಲೀಬಾರಿನಲ್ಲಿ ಆರು ಜನ ಸತ್ತದ್ದಕ್ಕೆ ಮುಖ್ಯಮಂತ್ರಿ ಮುಲಾಯಮ್ ಸಿಂಗ್ ಯಾದವ್ ರಾಜೀನಾಮೆ ನೀಡ ಬೇಕೆಂದು ಬೊಬ್ಬಿಡುವ ಬಿ.ಜೆ.ಪಿ.ತನ್ನ ಬೆನ್ನಹಿಂದೆಯೇ 83 ಕ್ಕೂ ಹೆಚ್ಚು ಹೆಣ ಬಿದ್ದಿರುವುದು ಮರೆತಿದೆ. ರಾಜಸ್ಥಾನದ ಅದರ ಸರ್ಕಾರದ ಬೇಜವಾಬ್ದಾರಿ ವರ್ತನೆಯಿಂದಾಗಿ ಅಕ್ಟೋಬರ್ 24 ರಂದು ಅಷ್ಟೊಂದು ಮುಗ್ಧ ಜೀವಿಗಳು ಕೋಮು ಜ್ವಾಲೆಗೆ ಆಹುತಿಯಾದವು. ಸಿ.ಪಿ.ಐ. (ಎಂ) ಸಂಸತ್‌ಸದಸ್ಯರ ಅಧ್ಯಯನ ತಂಡದ ವರದಿ ಇಲ್ಲಿದೆ.

ಬಿ.ಜೆ.ಪಿ.ಯ ಅಕ್ಟೋಬರ್ 24 ರ ಬಂದ್‌ನಲ್ಲಿ ರಾಜಸ್ಥಾನದ ರಾಜಧಾನಿ ಜಯಪುರದಲ್ಲಿ ನಡೆದ ದಾರುಣ ಘಟನೆಗಳಿಗೆ ಬಿ.ಜೆ.ಪಿ. ನೇತೃತ್ವದ ರಾಜ್ಯಸರಕಾರವೇ ಅಂದು ಸಂಘಟಿತ ಗ್ಯಾಂಗ್ ಗಳಿಂದ ಭದ್ರತೆ ನೀಡಲಿಲ್ಲ. ಎಂಬುದು ಸ್ಪಷ್ಟ ಎಂದು ಸಿ.ಪಿ.ಐ.(ಎಂ)ನ ಇಬ್ಬರು ಸಂಸತ್ ಸದಸ್ಯರ ತಂಡ ಅಭಿಪ್ರಾಯ ಪಟ್ಟಿದೆ.

ಅಂದಿನ ಗಲಭೆಗಳಲ್ಲಿ 83 ಮಂದಿ ಸತ್ತಿದ್ದಾರೆಂದು ಸ್ಥಳೀಯ ಪತ್ರಿಕೆಗಳು ವರದಿಮಾಡಿವೆ. ನಿಜವಾಗಿ ಸತ್ತವರ ಸಂಖ್ಯೆ ಇನ್ನೂ ಹೆಚ್ಚಿರಬೇಕೆಂದು ಈ ತಂಡದ ಸದಸ್ಯರಾದ ಮಹಮ್ಮದ್ ಅಮೀನ್ ಮತ್ತು ಶಿವಪತ್‌ಸಿಂಗ್ ಮಕಸ್ಸರ್ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಕೆಲವು ಹೆಣಗಳನ್ನು ರಾಜಸ್ಥಾನ್ ಸಶಸ್ತ್ರ ಪಡೆ (ಆರ್.ಎ.ಸಿ.)ಯವರೇ ಸ್ಮಶಾನ ಕ್ಕೊಯ್ದು ಸುಟ್ಟರೆಂದು ಅಲ್ಲಿ ಆಪಾದನೆಯಿದೆ ಎಂದು ಅವರು ತಿಳಿಸಿದ್ದಾರೆ.

ಸವಾಯಿ ಮಾನಸಿಂಗ್ ಆಸ್ಪತ್ರೆಗೆ ಸಿ.ಪಿ.ಐ(ಎಂ) ಎಂ.ಪಿ.ಗಳ ತಂಡ ಭೇಟಿ ನೀಡಿದಾಗ ಅಲ್ಲಿ 250 ಕ್ಕೂ ಹೆಚ್ಚು ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿದ್ದರು. ಅವರ ಕಥೆಗಳು ಕರುಣಾಜನಕ. ಆರ್.ಎ.ಸಿ. ಪಡೆಗಳು ಹಲ್ಲೆಮಾಡಿ, ಗುಂಡು ಹಾರಿಸಿದರೆಂದು ಅವರಲ್ಲಿ ಹೆಚ್ಚಿನವರು ಹೇಳಿದರು. ಗಲಭೆಕೋರರು ಅನುಸರಿಸಿದ ಒಂದು ವಿಧಾನ ಎಂದರೆ ಮನೆಗಳಿಗೆ ಬೆಂಕಿ ಹಚ್ಚುವುದು, ಮನೆಯಲ್ಲಿದ್ದವರು ಹೊರಗೆ ಬಂದಾಗ ಮತ್ತೆ ಅವರನ್ನು ಹಿಡಿದು ಬೆಂಕಿಗೆ ಎಸೆಯುವುದು ಸಾವುಗಳು ವರದಿಯಾಗಿರುವುದು ಹೆಚ್ಚಾಗಿ ಕರ್ಫ್ಯೂ ಇದ್ದ ಪ್ರದೇಶಗಳಲ್ಲಿ. ಆ ಪ್ರದೇಶಗಳಲ್ಲಿ ಜನರನ್ನು ಮಾತನಾಡಿಸಲು ಅಲ್ಲಿಯ ಆಡಳಿತ ಬಿಡಲಿಲ್ಲ ಎಂದು ತಂಡ ತಿಳಿಸಿದೆ.

ಇದು ಜಯಪುರದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದ ಮೂರನೇ ಕೋಮು ದಂಗೆ. ಹಿಂದಿನ ಎಲ್ಲಾ ಕೋಮು ಉನ್ಮಾದದ ದಾಖಲೆಗಳನ್ನು ಮುರಿದ ಧಂಗೆಯಿದು.

ಅಕ್ಟೋಬರ್ 12 ರಿಂದ ಪರಿಸ್ಥಿತಿ ಹದಗೆಡಲಾರಂಭಿಸಿತ್ತು. ಅಂದು ನಗರದ ಛೋಟ ಚೋಪಾರ್ ಎಂಬಲ್ಲಿ ಬಿ.ಜೆ.ಪಿ.ಯ ಸಾರ್ವಜನಿಕ ಸಭೆ ನಡೆಯಿತು. ಮುಖ್ಯಮಂತ್ರಿ ಭೈರೋಸಿಂಗ್ ಶೇಖಾವತ್ ಮತ್ತು ಬಿ.ಜೆ..ಪಿ.ಯ ರಾಜ್ಯ ಅಧ್ಯಕ್ಷ ಘನಶ್ಯಾಮ್ ತಿವಾರಿ ಮತ್ತಿತರು ಅಂದು ಉತ್ತೇಜನಕಾರಿ ಭಾಷಣ ಮಾಡಿದರು.

"ಶಕ್ತಿಯಿದ್ದರೆ ರಥಯಾತ್ರೆ ನಿಲ್ಲಿಸಿ ತೋರಿಸಲಿ" ಎಂದು ಮುಖ್ಯಮಂತ್ರಿ ಶೇಖಾವತ್ ಕೇಂದ್ರ ಗೃಹಮಂತ್ರಿಗಳನ್ನು ಎಚ್ಚರಿಸಿದ್ದರೆಂದು ವರದಿಯಾಗಿದೆ. ಸಂಘರ್ಷದ ಬಹಿರಂಗ ಕರೆ ನೀಡಲಾಯಿತು.

ಪುಟ 8 ಕ್ಕೆ

ಏನು ನಡೆದಾದೋ

ಏನು ನಡೆದಾದೋ, ಇನ್ನೇನು ನಡಿತಾದೋ
ಧರ್ಮದಮಲಿನಲಿ ಹೆಣಗಳ ಮ್ಯಾಲೆ
ರಥವು ಹೊಂಟಾದೋ
ರಾಮನ ರಥವು ಹೊಂಟಾದೋ
ರಾಮಜ್ಯೋತಿಯ ನೆಪದಲಿ ದೇಶಕ್ಕೆ
ಕೊಳ್ಳಿಯ ಇಟ್ಟಾರೋ
ಅವರು ಕೊಳ್ಳಿಯ ಇಟ್ಟಾರೋ
ಹಿಡಿ, ಹೊಡಿ, ಬಡಿ, ಕಡಿ ಎಂಬ ಮಂತ್ರವ
ಬೋಧನೆ ಮಾಡ್ಯಾರೋ
ಅವರು ಬೋಧನೆ ಮಾಡ್ಯಾರೋ ॥ ೧ ॥

ಬುದ್ಧ, ಬಸವ, ಗಾಂಧಿ ತತ್ವಗಳ
ಗಾಳಿಗೆ ತೂರ್‍ಯಾರೋ
ಅವರು ಗಾಳಿಗೆ ತೂರ್‍ಯಾರೋ
ಚಾಕು, ಚೂರಿಗಳ ಮೆರವಣಿಗೆಯಲಿ
ಹೆಣಗಳು ಬಿದ್ದಾವೋ
ಬಡವರ ಹೆಣಗಳು ಬಿದ್ದಾವೋ
ಹರಿದ ರಕ್ತದ ಹೊಳೆಗಳ ನೋಡಿ
ನೆಲದವ್ವ ಅತ್ತಾಳೋ
ಅಯ್ಯೋ ನೆಲದವ್ವ ಅತ್ತಾಳೋ ॥ ೨ ॥

ನಮ್ಮಕ್ಕ ತಂಗ್ಯಾರ ಕುಂಕುಮ ಅಳಿಸಿ
ತಾಳಿಯ ಹರಿದಾರೋ
ಮಕ್ಕಳು ಮರಿಗಳು ಅನಾಥರಾಗಿ
ಗೋಳಾಡಿ ಅತ್ತಾರೋ
ಅಯ್ಯೋ ಗೋಳಾಡಿ ಅತ್ತಾರೋ
ಹೆಣಗಳ ಮ್ಯಾಲೆ ಕೋಮುವಾದಿಗಳು
ಕುಣಿದಾಡಿ ನಲಿದಾರೋ
ಅವರು ಕುಣಿದಾಡಿ ನಲಿದಾರೋ ॥ ೩ ॥

— ಕ್ಯಾಲಕೊಣ್ಣೆ ಚನ್ನಬಸವ

ವಿರೋಧ ಪಕ್ಷಗಳ ಸಭೆ- ಜಾತೀಯತೆಯ ವಿರುದ್ಧ ಹೋರಾಡಲು ಕರೆ

ಜನತಾದಳ, ಜನತಾ ಪಕ್ಷ, ಸಿ.ಪಿ.ಐ. ಕನ್ನಡ ಚಳುವಳಿ ಪಕ್ಷಗಳ ಪ್ರತಿ ನಿಧಿಗಳ ಸಭೆ 26-10-90 ರಂದು ಸೇರಿ ದೇಶದ ಬದಲಾದ ರಾಜಕೀಯ ಪರಿಸ್ಥಿತಿ ಜಾತೀಯ ಗಲಭೆಗಳ ಕುರಿತು ಚರ್ಚೆ ಮಾಡಿ ಕೆಲವು ನಿರ್ಣಯಗಳನ್ನು ಕೈಗೊಂಡಿತು.

ಬಿ.ಜೆ.ಪಿ.ಯವರು ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ವಿ.ಪಿ. ಸಿಂಗ್‌ರವರು ನವೆಂಬರ್ 7 ರಂದು ಲೋಕಸಭೆಯನ್ನ ಕರೆಯಲು ಕೈಗೊಂಡ ನಿರ್ಣಯವನ್ನು ಸ್ವಾಗತಿಸುತ್ತಾ, ನಮ್ಮದೇಶದ ಸಂವಿಧಾನದ ಜಾತ್ಯಾತೀತತೆಯನ್ನು ರಕ್ಷಿಸುವ ಸಲುವಾಗಿ ಮತೀಯ ಶಕ್ತಿಗಳ ವಿರುದ್ಧ, ಜಾತ್ಯಾತೀತ ಶಕ್ತಿಗಳ ಬಲಸಂವರ್ಧನೆಗೊಳಿಸುವ ಸಲುವಾಗಿ ಕೈಗೊಂಡಕ್ರಮವನ್ನು ಸ್ವಾಗತಿಸುತ್ತದೆ. ಜಾತೀಯ ಶಕ್ತಿಗಳು ದೇಶದಲ್ಲಿ ಕ್ರೂರ ಕರ್ಮಕಾಂಡ ನಡೆಸಿರುವಾಗ ಅದನ್ನೆದುರಿಸಲು ಜಾತ್ಯಾತೀತ ಶಕ್ತಿಗಳು ಕೂಡಲೇ ಮುಂದಾಗದಿದ್ದರೆ ಈಗಾಗಲೇ ಕಾಶ್ಮೀರ, ಪಂಜಾಬಗಳಲ್ಲಿ ಪ್ರತ್ಯೇಕತಾವಾದಿ- ಛಿದ್ರಕಾರೀ ಶಕ್ತಿಗಳು ದೇಶದ ಐಕ್ಯತೆಸಮಗ್ರತೆಗೆ ಅಪಾಯ ತಂದೊಡ್ಡಿರುವಾಗ ದೇಶಕ್ಕೆ ಇನ್ನೂ ಹೆಚ್ಚಿನ ಗಂಡಾಂತರ ಉಂಟಾಗುವುದರಲ್ಲಿ ಸಂಶಯವಿಲ್ಲ.

ಈ ಮತೀಯ ಶಕ್ತಿಗಳ ವಿರುದ್ಧ ನಾವು ಎದುರು ಚಳುವಳಿ ಮಾಡಬೇಕು. ನಮ್ಮ ದೇಶದ ಹಾಗೂ ರಾಜ್ಯದ ಜಾತ್ಯತೀತ ಪ್ರಜಾಪ್ರಭುತ್ವಶಕ್ತಿಗಳೂ, ರಾಜಕೀಯ ಪಕ್ಷಗಳು ಹಾಗೆಯೇ ದೇಶದ ಜಾತ್ಯತೀತತೆಯ ಮೇಲೆ ವಿಶ್ವಾಸ ವಿಶ್ವಾಸವಿಟ್ಟವರೆಲ್ಲಾ ಒಂದಾಗಿ ಈ ಅಪಾಯಕಾರಿ ಶಕ್ತಿಗಳನ್ನೆದುರಿಸಲು ಮುಂದಾಗದಿದ್ದರೆ ದೇಶಧ ಜಾತ್ಯಾತೀತತೆಗೆ ಅಪಾಯ ಉಂಟಾಗುತ್ತದೆ.

ಆದ್ದರಿಂದ ಕರ್ನಾಟಕದ ಜನತೆ ಒಂದಾಗಿ ಜಾತೀಯ ಶಕ್ತಿಗಳನ್ನು ಸೋಲಿಸಲು ಮುಂದಾಗಬೇಕೆಂದು ನಾವು ಕರೆಕೊಡುತ್ತೇವೆ.

ಇಡೀ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಜಾತೀಯ ಸೌಹಾರ್ದತೆಯನ್ನು ಉಂಟು ಮಾಡುವ ಸಲುವಾಗಿ 29-10-90 ರಂದು ಬೆಂಗಳೂರಿನ ನ್ಯಾಶನಲ್ ಪಾರ್ಕಿನಲ್ಲಿ ಒಂದು ದಿವಸದ ಉಪವಾಸ ಕೈಗೊಳ್ಳಬೇಕೆಂದು ನಿರ್ಣಯಿಸಿತು. ಹಾಗೆಯೇ ರಾಜ್ಯಮಟ್ಟದಲ್ಲಿ, ಈ ಕಾರ್ಯಕ್ರಮವನ್ನು ಮುಂದುವರಿಸುವ 9 ಜನರ ಕಮಿಟಿ ನೇಮಿಸಲಾಗಿದೆ. ಪಿ.ಜಿ.ಆರ್. ಸಿಂಧ್ಯ, ಆರ್.ವಿ. ದೇಶಪಾಂಡೆ(ಜ.ದ) ರಾಮಚಂದ್ರ ರಾವ್. ಸೂರ್ಯನಾರಾಯಣರಾವ್, ಸಿ.ಪಿ.ಐ.(ಎಂ), ಎಂ.ಸಿ. ವೆಂಕಟರಾಮು, ಪಿ.ರಾಮನ್ (ಸಿ.ಪಿ.ಐ), ಬೈರೇಗೌಡ, ವಿ.ಸಿ. ಉಗ್ರಪ್ಪ (ಜನತಾ), ವಾಟಾಳ ನಾಗರಾಜ್ (ಕನ್ನಡ ಚಳುವಳಿ) ಅವರನ್ನೊಳಗೊಂಡ ಕಮಿಟಿ ರಚಿಸಲಾಯಿತು. ಸಿ.ಪಿ.ಐ. (ಎಂ)ಪರವಾಗಿ ಸೂರ್ಯನಾರಾಯಣರಾವ್., ಎನ್.ಕೆ.ಉಪಾಧ್ಯಾಯ ಸಿ. ನಂಜುಂಡಪ್ಪ ಭಾಗವಹಿಸಿದರು.

ಸಂಜೆ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮೇಲಿನ ನಿರ್ಣಯ ವಿವರಿಸಿದ್ದಲ್ಲದೆ. 25 ರಂದು ನಡೆದ ವಿಧಾನ ಸಭೆಯಲ್ಲಿ ವಾಟಾಳ್ ನಾಗರಾಜ್ ಅವರ ಮೇಲೆ ಕಾಂಗ್ರೆಸ್ಸಿನವರು ನಡೆಸಿದ ಆಕ್ರಮಣಕಾರಿ ಕೃತಿಯನ್ನು ಖಂಡಿಸಲಾಯಿತು. ಲೋಕಾಯುಕ್ತದ ಅಧಿಕಾರವನ್ನು ಮೊಟಕುಗೊಳಿಸುವ, ಜಿಲ್ಲಾ ಪರಿಷತ್ತಿಗೆ ತಿದ್ದುಪಡಿಸಿ ತರುವ ಕ್ರಮಗಳನ್ನು ಖಂಡಿಸಲಾಯಿತು. ಎಸ್.ಸೂರ್ಯನಾರಾಯಣ ರಾವ್ ಮತ್ತು ಎನ್.ಕೆ.ಉಪಾಧ್ಯಾಯರು. ಸಿ.ಪಿ.ಐ. (ಎಂ) ಪರವಾಗಿ ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದರು.

ಮಂಡಲ, ಮಂದಿರ-ಮಸೀದೆ: ಬೆಂಗಳೂರಿನಲ್ಲಿ ವಿಚಾರ ಸಂಕಿರಣ

ಪಂಜಾಬ್, ಕಾಶ್ಮೀರ, ಅಸ್ಸಾಂನಲ್ಲಿ ನಡೆದಿರುವ ರಕ್ತಪಾತವನ್ನು ತಡೆಗಟ್ಟುವ ಬದಲು ರಾಮಜ್ಯೋತಿ ಎಂಬ ಕೊಳ್ಳಿ ದೇಶದ ಮೂಲೆ-ಮೂಲೆಯಲ್ಲಿ ಬೆಂಕಿಯ ಕಿಡಿ ಹೊತ್ತಿಸುತ್ತಾ , ಹೋಗುತ್ತಿದೆ. ಧರ್ಮಾಂಧತೆ ಮತ್ತು ಜಾತ್ಯಾತೀತತೆಯ ನಡುವೆ ಸಮರ ನಡೆಯುತ್ತಿದೆ ಎಂದು 'ಐಕ್ಯರಂಗ' ದ ಜಿ.ಎನ್. ನಾಗರಾಜ್ ಹೇಳಿದರು.

ಅವರು ಡಿ.ವೈ.ಎಫ್.ಐ. ನ ಶ್ರೀರಾಮಪುರ ಘಟಕದ ಅಕ್ಟೋಬರ್ 10 ರಂದು ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಹೀಗೆಂದರು. ಇತ್ತೀಚೆಗೆ ಉದ್ಭವಿಸಿರುವ ಮಂಡಲ್ ಪರ-ವಿರೋಧ ಚಳುವಳಿಗಳು, ಕೋಮು ಗಲಭೆಗಳನ್ನು ಕುರಿತಂತೆ ನಾಗರಿಕರು ವಿಮರ್ಶಾತ್ಮಕ ಚರ್ಚೆನಡೆಸಲು ಅನುವಾಗುವ ಸೂಕ್ತ ನಿಲುವನ್ನು ಮಂಡಿಸಲು ಇದನ್ನು ಏರ್ಪಡಿಸಲಾಗಿತ್ತು.

ಮುಂದುವರಿದು ಮಂಡಲ್ ವರದಿಯ ಬಗೆಗೆ ಮಾತನಾಡುತ್ತಾ ಅವರು ಮೀಸಲಾತಿ 4 ಸಾವಿರ ವರ್ಷಗಳಿಂದಲೇ ಇದೆ. ಮೇಲ್ಜಾತಿಯ ಪರವಾಗಿ ಎಂದರು. ಭಾರತಕ್ಕೆ ಭೇಟಿ ನೀಡಿದ್ದ ನೆಲ್ಸನ್ ಮಂಡೇಲ್ ಈ ವರದಿಯನ್ನು ಸ್ವಾಗತಿಸಿ, ಅಂತಹದನ್ನು ನಮ್ಮ ದೇಶದಲ್ಲಿ ಜ್ಯಾರಿಗೆ ತರುವುದಾಗಿ ಯೋಚಿಸುತ್ತಿದ್ದಾರೆ. ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಬಂದಿದ್ದ ವಿಧಾನ ಪರಿಷತ್ ಸದಸ್ಯ ಹಾಗೂ ದಲಿತ ಕವಿ ಡಾ. ಸಿದ್ದಲಿಂಗಯ್ಯ ಮಂಡಲ ವರದಿಯನ್ನು ಸ್ವಾಗತಿಸುತ್ತಾ, ಮೀಸಲಾತಿ ತಪ್ಪೇ ಎಂದು ಪ್ರಶ್ನಿಸಿದ ಕೆಳವರ್ಗದವರ ಪ್ರತಿಭೆಯನ್ನು ತುಳಿಯಲಾಗಿದೆ ಎಂದು ನುಡಿದರು. ಜ್ಞಾನ ಎಂದರೆ ಬಾಯಿ ಪಾಠ ವಲ್ಲ, ಜೀವನ ಎಂದರು. ರಥಯಾತ್ರೆ ಕೈಗೊಂಡಿರುವವರಿಗೆ ಬಾಬರಿ ಮಸೀದೆಯನ್ನು ಮೊದಲಿದ್ದಂತೆ ಮಾಡಬೇಕಿದ್ದರೆ, ಮೊದಲಿದ್ದದ್ದು ಮೈದಾನವಲ್ಲವೇ ಎಂದು ವ್ಯಂಗ್ಯವಾಗಿ ನುಡಿದರು. ರಥಯಾತ್ರೆಗೂ, ಮಂಡಲ್ ವರದಿಗೂ ಸಂಭಂಧವಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಆರ್ಥಿಕವಾಗಿ ಶೋಷಣೆಗೆ ಒಳಗಾದ ಕೋಟ್ಯಾಂತರ ಜನತೆಗೆ ಸಿಗಬಹುದಾದ ಮೀಸಲಾತಿಯನ್ನು ಮಂಡಲ್ ವಿರೋಧಿಗಳು ಅಡಚಣೆ ಉಂಟು ಮಾಡುತ್ತಿರುವುದು ವಿಷಾದನೀಯ ಎಂದು ನುಡಿದರು. ಧರ್ಮ ಮತ್ತು ಅಹಿಂಸೆಯನ್ನು ಬೋಧಿಸಿಕೊಂಡು ಬಂದಂತ ಜನ ಈಗ ರಾಕ್ಷಸರಂತೆ ವರ್ತಿಸಿ ದೇಶದಲ್ಲಿ ಘರ್ಷಣೆಯನ್ನು ಹುಟ್ಟುಹಾಕುತ್ತಿದ್ದಾರೆ ಎಂಬುದು ಒಂದು ವಿಪರ್ಯಾಸವಲ್ಲವೇ ಎಂದು ಪತ್ರಕರ್ತರಾದ ಜಾಣಗೆರೆ ವೆಂಕಟರಾಮಯ್ಯನವರು ಹೇಳಿದರು.

ರಾಮ ಜ್ಯೋತಿ ಎಂಬ ರಥಯಾತ್ರೆಯಿಂದ ಜನರ ನೆಮ್ಮದಿಯನ್ನು ಹಾಳು ಮಾಡುವುದರೊಂದಿಗೆ ರಾಷ್ಟ್ರವನ್ನು ಅವನತಿಯೆಡೆಗೆ ಕೊಂಡೊಯ್ಯುತ್ತಿದೆ ಎಂದು ನುಡಿದರು.

ಡಿ.ವೈ.ಎಫ್.ಐನ ರಾಜ್ಯ ಕಾರ್ಯದರ್ಶಿ ಎಸ್.ಶಿವರಾಮ್, ಜಿಲ್ಲಾಧ್ಯಕ್ಷರಾದ ಶ್ರೀನಿವಾಸ್, ಮಾಜಿ ಶಾಸಕ ಎಂ.ಎಸ್ ನಾರಾಯಣರಾವ್‌ರಾವ್, ನಗರ ಸಭಾ ಸದಸ್ಯರುಗಳಾದ ಕೃಷ್ಣಕುಮಾರ್, ಗೋವಿಂದ ರಾಜು ಸಹ ಮಾತನಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ನೆರೆದಿದ್ದ ಜನ ಸಮೂಹವು ನೀಡಿದ ಹಲವು ಪ್ರಶ್ನೆಗಳಿಗೆ ಉತ್ತರವನ್ನು ಭಾಷಣಕಾರರು ನೀಡುವುದರ ಮುಖಾಂತರ ಕಾರ್ಯಕ್ರಮವು ಸಮಾಪ್ತಿಯಾಯಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ರಾಜೇಂದ್ರ ಕುಮಾರ್‌ರವರು ನಡೆಸಿ ಕೊಟ್ಟರು.

ಕೋಮು ಸೌಹಾರ್ದಕ್ಕಾಗಿ ಸಿಪಿಐ(ಎಂ) ಮನವಿ

ಕೊಡಗು ಜಿಲ್ಲೆಯಲ್ಲಿ ವಿಶ್ವ ಹಿಂದೂ ಪರಿಷತ್ ನಡೆಸಿದ ರಥಯಾತ್ರೆಯ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯಾದ್ಯಂತ ಪ್ರಕ್ಷುಬ್ಧ ಪರಿಸ್ಥಿತಿ ಮೂಡಿದೆ. ಪ್ರಜಾಸತ್ತಾತ್ಮಕ ಚಳುವಳಿಗೆ ದೊಡ್ಡ ತಡೆಯುಂಟಾಗಿದೆ. ದಿನಾಂಕ 8-10-90 ರಂದು ಸಿಐಟಿಯು ವತಿಯಿಂದ ನಡೆಯಬೇಕಾಗಿದ್ದ ಹೋರಾಟವನ್ನು ಮುಂದೂಡಲಾಗಿದೆ.

ಪರಿಸ್ಥಿತಿಯ ದುರ್ಲಾಭವನ್ನು ಪಡೆದು ಮತೀಯ ದುಷ್ಕರ್ಮಿಗಳು ಜನ ವಿರೋಧಿ ಕೃತ್ಯಗಳನ್ನು ಎಸಗುತ್ತಿದ್ದಾರೆ. ಕಾಟಕೇರಿಯ ಬಳಿ ಬಸ್ ಸುಟ್ಟು ಹಾಕಲಾಗಿದೆ. ಸೋಮವಾರಪೇಟೆ ತಾಲೂಕಿನಲ್ಲಿ ಮತೀಯ ಅಲ್ಪ ಸಂಖ್ಯಾತರ ವಿರುದ್ಧ ವ್ಯವಸ್ಥಿತ ಹಲ್ಲೆ ನಡೆದಿದೆ. ದುಷ್ಕರ್ಮಿಗಳು ಮರಗಳನ್ನು ಕಡಿದು ಹಾಕಿ ರಸ್ತೆ ತಡೆ ಮಾಡಿದುದರಿಂದ ಬಸ್ ಸಂಚಾರ ಅಸ್ತವ್ಯಸ್ತವಾಗಿದೆ. ಇದರಿಂದಾಗಿ ಜೀವನಾವಶ್ಯಕ ವಸ್ತುಗಳ ಅಭಾವವುಂಟಾಗಿದೆ, ಗ್ರಾಮಾಂತರ ಪ್ರದೇಶದ ಜನರಿಗೆ, ವ್ಯಾಪಾರಿಗಳಿಗೆ, ವಿದ್ಯಾರ್ಥಿಗಳಿಗೆ, ಜನ ಸಾಮಾನ್ಯರಿಗೆ ವಿಪರೀತ ತೊಂದರೆಯುಂಟಾಗಿದೆ.

ಈ ದುಷ್ಕರ್ಮಿಗಳ ಕೃತ್ಯವನ್ನು ನಿಯಂತ್ರಿಸಲು ವಿಫಲರಾದ ವಿಶ್ವ ಹಿಂದೂ ಪರಿಷತ್‌ನ ಬೇಜವಾಬ್ದಾರಿಯನ್ನು ಭಾರತ ಕಮ್ಯುನಿಸ್ಟ ಪಕ್ಷ(ಮಾರ್ಕ್ಸ್‌ವಾದಿ) ವಿರಾಜಪೇಟೆ ಶಾಖೆ ಖಂಡಿಸಿದೆ. ಜನ ಜೀವನವನ್ನು ಮಾಮೂಲು ಸ್ಥಿತಿಗೆ ತರಲು ಸರ್ವ ಕ್ರಮಗಳನ್ನು ಕೈಗೊಳ್ಳಲು, ಆಡಳಿತಾಧಿಕಾರಿಗಳನ್ನು ಪೋಲೀಸ್ ಅಧಿಕಾರಿಗಳನ್ನು ಒತ್ತಾಯಿಸಿದೆ.

ಈ ಪರಿಸ್ಥಿತಿಯಿಂದಾಗಿ ಜನ ಸಾಮಾನ್ಯರಲ್ಲಿ ಮತ್ತು ಮತೀಯ ಅಲ್ಪಸಂಖ್ಯಾತರಲ್ಲಿ ತೀವ್ರ ಕಳವಳ ಉಂಟಾಗಿದೆ.


ಈ ಸಂದರ್ಭದಲ್ಲಿ ಯಾವುದೇ ಪ್ರಚೋದನೆಗೆ ಅಥವಾ ಉದ್ದೇಶಕ್ಕೆ ಒಳಗಾಗದೇ ಮತೀಯ ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕೆಂದು ಕೊಡಗಿನ ಜನತೆಯನ್ನು ಎಲ್ಲಾ ಪ್ರಜಾಪ್ರಭುತ್ವವಾದಿ ಪಕ್ಷಗಳನ್ನು ಭಾರತ ಕಮ್ಯುನಿಸ್ಟ ಪಕ್ಷ(ಮಾರ್ಕ್ಸ್‌ವಾದಿ) ವಿರಾಜಪೇಟೆ ಶಾಖೆ ವಿನಂತಿಸಿದೆ.

ಮತೀಯ ಸೌಹಾರ್ದಕ್ಕೆ ಮಾನವ ಸರಪಳಿ

ಕೋಮು ಬೆಂಕಿಯು ಕೆನ್ನಾಲಿಗೆಚಾಚಿ ಜನತೆಯ ಶಾಂತಿ, ನೆಮ್ಮದಿಯನ್ನು ನುಂಗುತ್ತಿರುವ, ದೇಶದ ಐಕ್ಯತೆಗೇ ಗಂಡಾಂತರ ಒಡ್ಡಿರುವ ಮತೀಯ ಮೂಲಭೂತವಾದಿಗಳಿಗೆ ಸವಾಲಾಗಿ, ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಜನರ ಗಮನವನ್ನು ಸೆಳೆಯಲು ದಿನಾಂಕ 30-10-90 ರಂದು ನಗರದ ಮೈಸೂರು ಬ್ಯಾಂಕ್ ವೃತ್ತದ ಬಳಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಎ.ಐ.ಎಸ್.ಎಫ್. ಎ.ಐ.ವೈ.ಎಫ್. ಮತ್ತು ಯುವ ಜನತಾದಳ ಸಂಘಟನೆಗಳು ಕರೆಕೊಟ್ಟಿದ್ದ "ಮೈತ್ರಿ ಬಂಧನ್" ಭಾಗವಾಗಿ ನೂರಾರು ಜನರು "ಮಾನವ ಸರಪಳಿ"ಯನ್ನು ನಿರ್ಮಿಸಿ ಕಾರ್ಯಕ್ರಮವನ್ನು ಆಚರಿಸಿದರು.

ದೇಶದ ತುಂಬೆಲ್ಲಾ ಕೋಮು ವಿಷಾಗ್ನಿಯ ವಿಪರೀತತೆಯ ಸಂದರ್ಭದಲ್ಲಿ ನಗರದಲ್ಲಿದ್ದ ಪ್ರತಿಬಂಧಕಾಜ್ಞೆಯನ್ನೂ ಲೆಕ್ಕಿಸದೆ ಮಧ್ಯಾಹ್ನದ ತುಂತುರು ಮಳೆಯ ತಣ್ಣನೆಯ ವಾತಾವರಣದ-ಬಿಸಿ ಮನಸ್ಸುಗಳ ಮಧ್ಯೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕೋಮು ಸಾಮರಸ್ಯ ಹಾಗೂ ಮತೀಯ ಸೌಹಾರ್ದತೆಯನ್ನು ಕಾಪಾಡಲು ಜಾತಿ, ಮತ ಧರ್ಮಗಳ ಬೇಲಿಯಾಚೆ ಆಚೆನೆರೆದ ನೂರಾರು ಜನ, ಒಗ್ಗಟ್ಟಿನ ಸಂಕೇತವಾಗಿ ಕೈಕೈಹಿಡಿದು ಸರಪಳಿ ನಿರ್ಮಿಸಿ, "ಪಂಜಾಬ್ ಖಲಿಸ್ತಾನ್ ಆಗಲು ಬಿಡೋದಿಲ್ಲ..." "ಜಾತ್ಯಾತೀತ ಭಾರತದಲ್ಲಿ ಕಾಶ್ಮೀರ ಉಳಿಯಲೇಬೇಕು' "ಮಂದಿರ, ಮಸೀದಿ, ಚರ್ಚ್ ಒಡೆದುಕಟ್ಟುವ ನೀತಿ ಕೈಬಿಡಲೇ ಬೇಕು...", ಇತ್ಯಾದಿಯಾಗಿ ಕೋಮು ಸೌಹಾರ್ದತೆಯನ್ನು ಕಾಪಾಡುವ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಪ್ರತಿಜ್ಞಾವಿಧಿಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟ ಗಾರರಾದ ಎಸ್. ಸೂರ್ಯನಾರಾಯಣರಾವ್ ಅವರು ಭೋದಿಸಿದರು.

ಮಧ್ಯಾಹ್ನ 1.15 ಕ್ಕೆ ಸರಿಯಾಗಿ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ-ಯುವಜನರು, ಕಾರ್ಮಿಕರು, ವಕೀಲರು, ಬುದ್ಧಿಜೀವಿಗಳು ಹಾಗೂ ಇತರೆ ಜನವಿಭಾಗ ಭಾಗವಹಿಸಿದ್ದರು. ಸಿಐಟಿಯುವಿನ ಕಾಂ॥ ಸಿ.ನಂಜುಂಡಪ್ಪ, ರೈತಸಂಘದ ಕಾಂ॥ ಜಿ.ಎನ್.ನಾಗರಾಜ್, ಎಸ್. ಎಫ್.ಐ.ನ ಜಿ.ಸಿ. ಬಯ್ಯಾರೆಡ್ಡಿ, ಗುರುಶಾಂತ್, ಡಿ.ವೈ.ಎಫ್.ಎಫ್ ಐ. ನ ಶಿವಶಂಕರ್, ಯುವಜನತಾದಳದ ಅಶೋಕ ನವಲಗುಂದ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ವಿಜಯನಗರ ಉಕ್ಕಿನ ಕಾರ್ಖಾನೆ ಆಗ್ರಹಿಸಿ: ತಂತಿ

ದ.ಕ. ಜಿಲ್ಲಾ ಡಿವೈಎಫ್ಐ ಸಮಿತಿಯ ಕರೆಯ ಮೇರೆಗೆ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಆಗ್ರಹಿಸಿ ಅಕ್ಟೋಬರ್ 15 ರಂದು ಘಟಕಗಳು ರಾಜ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ತಂತಿ ಸಂದೇಶಗಳನ್ನು ಕಳುಹಿಸಿವೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಖಾನೆಯನ್ನು ಅಳವಡಿಸಿ ತ್ವರಿತವಾಗಿ ಅದನ್ನು ಜಾರಿಗೊಳಿಬೇಕಾಗಿ ತಂತಿ ಸಂದೇಶದಲ್ಲಿ ಆಗ್ರಹಿಸಲಾಗಿದೆ.

ಇತಿಹಾಸದ ಪುಟಗಳಿಂದ

"..........ಎಂತಹ ಬೆಲೆ ತೆತ್ತಾದರೂ ಶಾಂತಿ ಕಾಪಾಡಬೇಕು"

ಡಿಸೆಂಬರ್ 23, 1949 ಫೈಜಾಬಜಾದ್ ಜಿಲ್ಲಾಮ್ಯಾಜಿಸ್ಟ್ರೇಟ್ ಜೆ.ಕೆ.ನಾಯರ್ ರಿಂದ ಉತ್ತರಪ್ರದೇಶ ಮುಖ್ಯಮಂತ್ರಿ ಶ್ರೀಯುತ ಜಿ.ಬಿ.ಪಂತರಿಗೆ ಟೆಲೆಕ್ಸ್ ಸಂದೇಶ.

ಮಸೀದಿಯಲ್ಲಿ ಜನರಿಲ್ಲದಿದ್ದಾಗ ರಾತ್ರಿಯಲ್ಲಿ ಕೆಲವು ಹಿಂದೂಗಳು ಬಾಬ್ರಿ ಮಸೀದೆಗೆ ನುಗ್ಗಿ ಒಂದು ಮೂರ್ತಿ ಸ್ಥಾಪಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟ್, ಪೊಲೀಸ್ ಸೂಪರಿಂಟೆಂಡೆಂಟ್ ಹಾಗೂ ಪೋಲೀಸ್ ಪಡೆ ಸ್ಥಳದಲ್ಲಿದೆ. ಪರಿಸ್ಥಿತಿ ಹತೋಟಿಯಲ್ಲಿದೆ. 15 ಪೋಲೀಸರು ರಾತ್ರಿ ಡ್ಯೂಟಿಯಲ್ಲಿದ್ದರು. ಅವರು ಕಾರ್ಯಾಚರಣೆ ನಡೆಸಿದಂತೆ ಕಾಣುವುದಿಲ್ಲ".

ರಾಮಜನ್ಮಭೂಮಿ ಬಾಬ್ರಿ ಮಸೀದೆ ವಿವಾದ ಮೊದಲು ಆರಂಭವಾದದ್ದು ಹೀಗೆ. "50-60 ಮಂದಿ ಮಸೀದೆಗೆ ನುಗ್ಗಿ ರಾಮನ ಮೂರ್ತಿ ಇಟ್ಟು ಗೋಡೆಗಳ ಮೇಲೆ 'ಸೀತಾರಾಮ್' ಎಂದು ಬರೆದರು. ಅವರು ಕಳ್ಳತನದಿಂದ ನುಗ್ಗಿ, ಅದರ ಪಾವಿತ್ರ್ಯ ಕೆಡಿಸುವ ಅಪರಾಧ ಮಾಡಿದೆ" ಎಂದು ಸಬ್ ಇನ್ಸ್‌ಪೆಕ್ಟರ್ ರಾಮ್‌ದುಜೆಯವರ ಎಫ್.ಐ.ಆರ್.ಹೇಳುತ್ತದೆ. "ಡಿಸೆಂಬರ್ 22} 1949 ರ ರಾತ್ರಿ ಶ್ರೀ ರಾಮಚಂದ್ರನ ಮೂರ್ತಿಯನ್ನು ಕಳ್ಳತನದಿಂದ, ತಪ್ಪಾಗಿ ಅಲ್ಲಿ ಇಡಲಾಯಿತು" ಎಂದು ಫತಿಜಾಬಾದ್ ಡಿ.ಸಿ.ಜೆ.ಎನ್.ಉಗ್ರಾ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದರು.

ಆಗಿನ ಮುಖಂಡತ್ವ ಈ ಪರಿಸ್ಥಿತಿಯನ್ನು ಹೇಗೆ ಎದುರಿಸಿತು?

ಆಗಿನ ಕೇಂದ್ರ ಗೃಹಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲ್ ಉತ್ತರ ಪ್ರದೇಶ ಮುಖ್ಯಮಂತ್ರಿ ಜಿ.ಬಿ. ಪಂತ್‌ರಿಗೆ ಬರೆದ ಪತ್ರದ ಕೆಲವು ಅಂಶಗಳು ಹೀಗಿವೆ-

"ಅತ್ಯಂತ ಅನಗತ್ಯ ಸಮಯದಲ್ಲಿ ಈ ವಿವಾದ ಎಬ್ಬಿಸಲಾಗಿದೆ. ಇತ್ತೀಚೆಗಷ್ಟೆ ಕೋಮು ಪ್ರಶ್ನೆಗಳನ್ನು ವಿವಿಧ ಕೋಮುಗಳಿಗೆ ತೃಪ್ತಿಯಾಗುವಂತೆ ಪರಿಗಣಿಸಲಾಗಿದೆ... ಮುಸಲ್ಮಾನರು ಹೊಸ ಪರಿಸ್ಥಿತಿಗಳಿಗೆ ಈಗಷ್ಟೇ ಹೊಂದಿಕೊಳ್ಳುತ್ತಿದ್ದಾರೆ..... ವಿಭಜನೆಯ ಮೊದಲ ಆಘಾತ ಹಾಗೂ ಅದರಿಂದಾದ ಅನಿಶ್ಚಿತತೆ ಈಗಷ್ಟೇ ಮುಗಿಯಲಾರಂಭಿಸಿದೆ....

ಈಗ ನಡೆದಿರುವ ಘಟನೆಯ ಹಿಂದೆ ಬಹಳಷ್ಟು ಭಾವನೆಗಳಿವೆ ಎಂಬುದು ನನಗೆ ಅರಿವಾಗುತ್ತದೆ. ಆದರೆ ಇಂತಹ ವಿಷಯಗಳನ್ನು ಶಾಂತಿಯುತವಾಗಿಯೇ ಪರಿಹರಿಸಬೇಕು-ಮುಸಲ್ಮಾನರ ಇಚ್ಛಾಪೂರ್ವಕಒಪ್ಪಿಗೆಯಿಂದ ಇಂತಹ ವಿವಾದಗಳನ್ನು ಬಲವಂತದಿಂದ ಪರಿಹರಿ ಸುವ ಪ್ರಶ್ನೆಯೇ ಇಲ್ಲ. ಹಾಗಾದಾಗ ಶಾಂತಿ ಕಾಪಾಡಬೇಕಾಗುತ್ತದೆ. ಆದ್ದರಿಂದ ಶಾಂತಿಯುತವಾದ, ಸಮಾಧಾನದಿಂದ ತಿಳಿ ಹೇಳುವ ವಿಧಾನಗಳನ್ನು ಅನುಸರಿಸಬೇಕಾದರೆ ಆಕ್ರಮಣ, ಬಲಾತ್ಕಾರದ ನಿಲುವನ್ನು ಸಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನೊಂದು ಇಂತಹ ಜೀವಂತ ಪ್ರಶ್ನೆ ಮಾಡಬಾರದು, ಆ ಸಮಯದಲ್ಲಿ ಎಬ್ಬಿಸಿರುವ ಈ ವಿವಾದವನ್ನು ಶಾಂತಿಯುತ ವಿಧಾನಗಳಿಂದ ಪರಿಹರಿಸಬೇಕು ಎಂಬುದು ನನಗೆ ಮನವರಿಕೆಯಾಗಿದೆ. ಈಗಾಗಲೇ ನಡೆದು ಹೋದ ಸಂಗತಿಗಳು ಒಂದು ಪರಸ್ಪರ ತೃಪ್ತಿಕರ ಇತ್ಯರ್ಥಕ್ಕೆ ಬರುವಲ್ಲಿ ಅಡಚಣೆ ಯಾಗಬಾರದು".

ಈಗಿನ ಬಿ.ಜೆ.ಪಿ. ಮುಖಂಡರು ತಮ್ಮ ಬೆಂಬಲಕ್ಕೆ ಸರ್ದಾರ್ ಪಟೇಲರ ಹೆಸರೆತ್ತುತ್ತಾರೆ. ಆದರೆ ಅವರು ಕೂಡಾ ಈ ಪ್ರಶ್ನೆ ಮೊದಲು ಎದ್ದಾಗ "ಇಂತಹ ವಿವಾದಗಳನ್ನೂ ಬಲವಂತಪಡಿಸಿಸುವ ಪರಿಹರಿಸುವ ಪ್ರಶ್ನೆಯೇ ಇಲ್ಲ. ಹಾಗಾದಾಗ ಕಾನೂನು-ವ್ಯವಸ್ಥೆಯ ಶಕ್ತಿಗಳು ಎಷ್ಟೇ ಬೆಲೆ ತೆತ್ತಾದರೂ ಶಾಂತಿ ಕಾಪಾಡಬೇಕಾಗುತ್ತದೆ"ಎಂದಿದ್ದರು ಎಂಬುದನ್ನು ಬೇಕೆಂದೇ ಮರೆಮಾಚಿದ್ದಾರೆ.

Block, Palace Guttahalli, BANGALORE-3, Phone: 366489. Editor: P. Ramachandra Rao.



"ಭಾರತವೆಂಬ ಮಹಾ ಮಂದಿರದ ಒಂದಿಟ್ಟಿಗೆ ಕೂಡಾ........"

ಅಕ್ಟೋಬರ್ 30 ರಂದು ಅಯೋಧ್ಯೆಯಲ್ಲಿ ಕೋಮುವಾದದ ಹುಚ್ಚು ಹೊಳೆ ದೇಶದ ಸ್ವಾತಂತ್ರ್ಯ ಹೋರಾಟದ ಉಜ್ವಲ ಪರಂಪರೆಯನ್ನು ಕೊಚ್ಚಿಕೊಂಡು ಹೋಗುವ ಬೆದರಿಕೆ ಹಾಕಿದ್ದಾಗ ದೇಶದ ಇತರ ಹಲವಾರು ಕಡೆ ಸ್ವಾತಂತ್ರ್ಯ ಹೋರಾಟದಲ್ಲಿ ಬೆಸೆದ, ಮೂಡಿಬಂದ ಐಕ್ಯತೆಯ ಪರಂಪರೆ ಇನ್ನೂ ಜೀವಂತವಾಗಿದೆ ಎಂದು ಸಾರುವ ಘಟನೆಗಳೂ ನಡೆದವು-ಮುಖ್ಯವಾಗಿ ಈ ಪರಂಪರೆಯನ್ನು ಸ್ವಾತಂತ್ರ್ಯ ನಂತರವೂ ಮುಂದುವರೆಸಿದ ಶಕ್ತಿಗಳು ಸಾಕಷ್ಟು ಪ್ರಭಾವ ಹೊಂದಿರುವ ಪ್ರದೇಶಗಳಲ್ಲಿ.

ಇದರಲ್ಲಿ ಮುಖ್ಯವಾದುದು ಹಲವಾರು ಜನಪರ ಉದ್ದೇಶಗಳಿಗಾಗಿ ಮಾನವ ಸರಪಳಿ, ಮಾನವ ಗೋಡೆಗಳನ್ನು ನಿರ್ಮಿಸಿದ ಕೇರಳದಲ್ಲಿ. ಈ ಬಾರಿಯೂ ಕೋಮು ಸೌಹಾರ್ದಕ್ಕಾಗಿ ಕೇರಳದ ಉತ್ತರ ತುದಿಯಿಂದ, ದಕ್ಷಿಣ ತುದಿಯವರೆಗೆ 760 ಕಿ.ಮೀ ಉದ್ದದ ಮಾನವ ಸರಪಳಿ ಸಂಜೆ 5 ಗಂಟೆಗೆ ಸರಿಯಾಗಿ ಏರ್ಪಟ್ಟು, ಆತಂಕಕ್ಕೀಡಾಗಿದ್ದ ದೇಶದ ಜಾತ್ಯತೀತ ಶಕ್ತಿಗಳಲ್ಲಿ, ದೇಶಪ್ರೇಮಿ ಶಕ್ತಿಗಳಲ್ಲಿ ಹೊಸ ಉತ್ಸಾಹ ಮೂಡಿಸಿತು. ಇದಕ್ಕೆ ಎಲ್.ಡಿ.ಎಫ್ ಕರೆ ನೀಡಿದ್ದರೂ ಜಾತಿ, ಮತ, ರಾಜಕೀಯದ ಭೇದ ಭಾವವಿಲ್ಲದೆ ಎಲ್ಲಾ ಜನವಿಭಾಗಗಳವರು ಇದರಲ್ಲಿ ಭಾಗವಹಿಸಿದುದು ಇದರ ವಿಶಿಷ್ಟತೆಯಾಗಿತ್ತು. 50 ಲಕ್ಷಕ್ಕೂ ಹೆಚ್ಚುಮಂದಿ ಇದರಲ್ಲಿ ಭಾಗವಹಿಸಿದರೆಂದು ತಿಳಿದುಬಂದಿದೆ. ಕೆಲವು ಕಡೆ ಭಾಗವಹಿಸುವವರ ಸಂಖ್ಯೆ ನಿರೀಕ್ಷೆ ಮೀರಿದುದರಿಂದ ಮಾನವ ಸರಪಳಿ ಬದಲು ಮಾನವಗೋಡೆಗಳೇ ಏರ್ಪಟ್ಟವು ಕೋಮುವಾದಿಗಳು ಬಡಿದೆಬ್ಬಿಸಿದ ಹುಚ್ಚು ಹೊಳೆಗೆ ಸವಾಲಾಗಿ.

ಸ್ವಾತಂತ್ರ್ಯ ಚಳುವಳಿಯ ಮೌಲ್ಯಗಳಿಗೇ ಸವಾಲು ಬಂದಿರುವುದರಿಂದ ಉದ್ರಿಕ್ತರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಜಾತಿ-ಮತಗಳ ಸಂಕುಚಿತತೆ ವಿರುದ್ಧ ಹೋರಾಟ ನಡೆಸಿಕೊಂಡು ಬಂದ ಕ್ರಾಂತಿಕಾರಿಗಳು, ಮೂಢನಂಬಿಕೆಗಳ ವಿರುದ್ಧ ಹೋರಾಡಿಕೊಂಡು ಬಂದ ಸಾಮಾಜಿಕ ಸುಧಾರಣೆಗಾರರು, ತಮ್ಮ ದಿನನಿತ್ಯದ ಹೋರಾಟಗಳಲ್ಲಿ ಐಕ್ಯತೆಯ ಅಗತ್ಯವನ್ನು ಅನುಭವದಿಂದಲೇ ಮನಗಂಡ ರೈತರು, ಕಾರ್ಮಿಕರು, ಇತರ ದುಡಿಯುವ ಜನಸಾಮಾನ್ಯರು, ಕೇಂದ್ರ-ರಾಜ್ಯ ಸರ್ಕಾರೀ ನೌಕರರು, ಪ್ರಗತಿಪರ ಚಳುವಳಿಗಳಿಂದ ಆಕರ್ಷಿತರಾದ ವಿದ್ಯಾರ್ಥಿಗಳು, ಯುವಜನರು ಮಾತ್ರವಲ್ಲ, ಧರ್ಮ ಮಾನವನನ್ನು ಪರಸ್ಪರ ದ್ವೇಷಿಸಲಿಕ್ಕೆ ಅಲ್ಲ ಎಂದು ಪ್ರಾಮಾಣಿಕವಾಗಿ ನಂಬಿರುವ ಮತ-ಪುರೋಹಿತರು ಕೂಡಾ ಇದರಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು- ಈ ಭಾರತ ದೇಶದ ಎಲ್ಲರೂ ಸರಿಸಮಾನರು, ಭಾರತವೆಂಬ ಮಹಾ ಮಂದಿರದ ಒಂದು ಇಟ್ಟಿಗೆ ಕೂಡಾ ಕದಲದಂತೆ ಜನತೆಯ ಐಕ್ಯತೆಯನ್ನು ಕಣ್ಣುಗೊಂಬೆಯಂತೆ ಕಾಪಾಡುತ್ತೇವೆ ಎಂದು ಪ್ರತಿಜ್ಞೆಗೈದರು.

ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಇ.ಎಂ.ಎಸ್. ನಂಬೂದರಿಪ್ಪಾಡ್, ಸಿ.ಪಿ.ಐ.(ಎಂ) ಕೇರಳ ರಾಜ್ಯಕಾರ್ಯದರ್ಶಿ ವಿಎಸ್.ಅಚ್ಯುತಾನಂದನ್, ಮುಖ್ಯಮಂತ್ರಿ ಇ.ಕೆ.ನಾಯನಾರ್, ರಾಜ್ಯದಮಂತ್ರಿಗಳು, ಎಲ್.ಡಿ.ಎಫ್. ಮುಖಂಡರು ತಿರುವನಂತಪುರದ ಗಾಂಧಿ ಮೈದಾನದ ಬಳಿ ಮಾನವ ಸರಪಳಿಯಲ್ಲಿ ಕೈಜೋಡಿಸಿದರು.

ಎಲ್.ಡಿ.ಎಫ್.ಕರೆಗೆ ಬೆಂಬಲ ನೀಡಿದ ಕೇರಳ ಕಾಂಗ್ರೆಸ್(ಜೆ) ಪಕ್ಷದ ಜೆ.ಜೋಸೆಫ್, ಮುಸ್ಲಿಂ ಡೆಮಾಕ್ರೆಟಿಕ್ ಪಕ್ಷದ ಕಾರ್ಯಕರ್ತರೂ ಭಾಗವಹಿಸಿದ್ದರು. ಕಾಂಗ್ರೆಸ್(ಐ), ಮುಸ್ಲಿಂಲೀಗ್, ಎಸ್.ಆರ್.ಪಿ. ಪಕ್ಷಗಳು ಕರೆನೀಡಿರದಿದ್ದರೂ ಈ ಪಕ್ಷಗಳ ಹಲವಾರು ಕಾರ್ಯಕರ್ತರೂ ಇದರಲ್ಲಿ ಭಾಗವಹಿಸಿದರು. ಕೋಳಿಕ್ಕೋಡ್, ಮಲಪ್ಪುರಂ ಜಿಲ್ಲೆಗಳಲ್ಲಿ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದರು. ಈ ಮಾನವ ಸರಪಳಿ ಕಾರ್ಯಕ್ರಮಕ್ಕೆ ಬಿಜೆಪಿ, ವಿಎಚ್‌ಪಿ ಹಾಗೂ ಇನ್ನಿತರ ಶಕ್ತಿಗಳು ಈ ಸರಪಳಿಯಲ್ಲಿ ಹಿಂದುಗಳು ಭಾಗವಹಿಸಬಾರದು ಹಾಗೂ ಇದೇ ಅರ್ಥ ಬರುವ ಅನೇಕ ಪೋಸ್ಟರ್‌ಗಳು ರಾರಾಜಿಸಿದರೂ ಕೂಡ ಈ ಮಾನವ ಸರಪಳಿ ಅತ್ಯಂತ ಯಶಸ್ವಿಯಾಯಿತು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿಯನ್ನು ಕೊಂದ ಮತಾಂಧ ಶಕ್ತಿಗಳು ಮತ್ತೆ ಮೈದುಂಬಿ ಕೊಳ್ಳುತ್ತಿದ್ದಾರೆಂದು ಇ.ಎಂ.ಎಸ್.ಎಫ್. ಎಚ್ಚರಿಸಿದರು.

ಇದೇ ದಿನ ದೇಶಾದ್ಯಂತ ಎಸ್.ಎಫ್.ಐ. ಡಿ.ವೈ.ಎಫ್.ಐ. ಎ.ಐ.ಎಸ್.ಎಫ್. ಎ.ಐ.ವೈ.ಎಫ್, ಮತ್ತಿತರ ಪ್ರಗತಿಪರ ವಿದ್ಯಾರ್ಥಿ-ಯುವಜನ ಸಂಘಟನೆಗಳ ಕರೆಯ ಮೇರೆಗೆ ಮೈತ್ರಿಬಂಧನ ಕಾರ್ಯಕ್ರಮ ನಡೆಯಿತು-ಕಲಕತ್ತೆ ದೆಹಲಿಯಲ್ಲಿ ಇದು ಅತ್ಯಂತ ಯಶಸ್ವಿಯಾಗಿ ಜರುಗಿತು.



ಅಕ್ಟೋಬರ್ 6ರಂದು ಸಭೆ ಸೇರಿದ್ದ ಜಿಲ್ಲಾ ಸಮಿತಿ ಕೈಗೊಂಡ ಇತರ ನಿರ್ಣಯಗಳು ಹೀಗಿವೆ.

1.ಚನ್ನಪಟ್ಟಣ, ರಾಮನಗರ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ವಿಷಜ್ವಾಲೆಯಂತೆ ಹರಡುತ್ತಿರುವ ಕೋಮು ಗಲಭೆಗಳ ಬಗ್ಗೆ ಸಭೆಯು ತನ್ನ ತೀವ್ರ ಆತಂಕ ವ್ಯಕ್ತಪಡಿಸಿರುತ್ತದೆ. ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿ ರಾಜ್ಯ ಸರಕಾರದ ವಿಫಲತೆ ಹಾಗೂ ಮತೀಯ ಶಕ್ತಿಗಳ ಕೈವಾಡವನ್ನು ಪಕ್ಷವು ಖಂಡಿಸಿದೆ.

2.ಮಳೆಯ ಅಭಾವದಿಂದ ಬೆಳೆಗಳು ನಷ್ಟವಾಗುವ ಸಂಭವ ಹೆಚ್ಚಾಗಿರುವುದರಿಂದ ಬೆಂಗಳೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಈ ಮೂಲಕ ಒತ್ತಾಯಿಸಲಾಗಿದೆ.

3. ಗ್ರಾಮಾಂತರ ಪ್ರದೇಶದಲ್ಲಿ ಪಡಿತರ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ಪಡಿತರ ಸಾಮಗ್ರಿಗಳ ವಿತರಣೆಯಲ್ಲಿನ ದೋಷಗಳನ್ನು ಹೋಗಲಾಡಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಗಿದೆ.

4. ಬೆಂಗಳೂರು ನಗರದಲ್ಲಿ ಕುಡಿಯುವ ನೀರು, ರಸ್ತೆ ಹಾಗೂ ಸೀಮೆ[illegible] ಎಣ್ಣೆ ಅಭಾವದಂತಹ ಸಮಸ್ಯೆಗಳ [illegible] ಗೆ [illegible] ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ.

5. ಸಾರ್ವಜನಿಕ ಕ್ಷೇತ್ರದ ನೌಕರರ ಅಖಿಲ ಭಾರತ ಹೋರಾಟಕ್ಕೆ ಪಕ್ಷ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

6.ಹರ್‌ಬರ್ಟ್ ಇಂಡಿಯಾ, ಅಮ್ಕೊ ಬ್ಯಾಟರೀಸ್, ಅಪೋಲೋ ಫುಟ್ ವೇರ್ ಹಾಗೂ ಬ್ರಮೆಲ್ಸ್ ರಬ್ಬರ್ ಕಾರ್ಖಾನೆಗಳ ಕಾರ್ಮಿಕರ ವಿವಾದಗಳನ್ನು ಕೂಡಲೇ ಬಗೆಹರಿಸುವಂತೆ ಕಾರ್ಮಿಕ ಇಲಾಖೆ ಹಾಗೂ ಸರಕಾರವನ್ನು ಈ ಮೂಲಕ ಒತ್ತಾಯಪಡಿಸುತ್ತದೆ.

7.ಮತೀಯ ಗಲಭೆಗಳನ್ನು ಪ್ರಚೋದಿಸುವಂತಹ ಚಟುವಟಿಕೆಗಳನ್ನು ಹಾಗೂ ಸಂಘಟನೆಗಳ ಮೇಲೆ ನಿರ್ಬಂಧ ಹೇರುವುದು ಸ್ವಾಗತಾರ್ಹವಾದರೂ ಜನ ಸಾಮಾನ್ಯರ ದಿನನಿತ್ಯದ ಸಮಸ್ಯೆಗಳಿಗೆ ಸಂಬಂಧಿಸಿದ ಹೋರಾಟಗಳು ಹಾಗೂ ಪ್ರಜಾ ಸತ್ತಾತ್ಮಕ ರಾಜಕೀಯ ಚಟುವಟಿಕೆಗಳನ್ನು ಸಹ ಸಾರಾಸಗಟಾಗಿ ನಿಷೇಧಿಸಿರುವ ರಾಜ್ಯ ಸರಕಾರದ ಕ್ರಮವನ್ನು ಪಕ್ಷವು ಈ ಮೂಲಕ ತೀವ್ರವಾಗಿ ವಿರೋಧಿಸುತ್ತದೆ.

ನಿಮ್ಮ ಪ್ರಶ್ನೆ —ನಮ್ಮ ಉತ್ತರ

? ಕಮ್ಯುನಿಸ್ಟರಿಗೆ ದೇವರಿಲ್ಲಾ ಅವರು ನಾಸ್ತಿಕರು ಎನ್ನುವುದು ಯಾಕೆ? ಕಾರಣ ತಿಳಿಸುವಿರಾ?

–ಕೆ.ವಿಶ್ವನಾಥ,
ಶಿಬಾಜೆ, ಬೆಳ್ತಂಗಡಿ

• ದೇವರು ಈ ಜಗತ್ತನ್ನು ಸೃಷ್ಟಿಸಿದ. ಮಾನವ ಸಮಾಜದ ಅವಸ್ಥೆ ಕಟ್ಟುಪಾಡುಗಳು ದೈವೇಚ್ಛೆ. ಮಾನವನ ಭವಿಷ್ಯ ಮಾನವನ ಕೈಯಲ್ಲಿಲ್ಲ. ಅದ ದೇವರು ನಡೆಸಿದಂತಾಗುತ್ತದೆ. ಪ್ರತಿಯೊಬ್ಬವ್ಯಕ್ತಿಯ ಸುಖ ದು:ಖಗಳು ಆತನ ರೋಗರುಜಿನಗಳು ಸಮಾಜದಲ್ಲಿ ಆತನ ಪರಿಸ್ಥಿತಿಯ ಪರಿಣಾಮವಲ್ಲ. ಆತನ ಹಿಂದಿನ ಪಾಪ ಪುಣ್ಯಗಳ ಫಲ. ಇವು ನಮ್ಮ ಸಮಾಜದಲ್ಲಿ ಬೇರೂರಿರುವ ನಂಬಿಕೆಗಳು. ಇವುಗಳ ಆಧಾರದ ಮೇಲೆ ಸಮಾಜದಲ್ಲಿ ಅನೇಕ ಆಚರಣೆಗಳು, ವ್ರತ, ಪೂಜೆಗಳೂ ರೂಢಿಗೆ ಬಂದಿವೆ.

ವಿಜ್ಞಾನ ಬೆಳೆಯುತ್ತಾ ನಂಬಿಕೆಗಳನ್ನು ಹೊಡೆದುರುಳಿಸಿದೆ. ಜೀವದ ಉಗಮ, ವಿಕಾಸದ ಬಗೆಗಿನ ಜ್ಞಾನ ಸೃಷ್ಟಿ ಬಗೆಗಿನ ಪುರಾಣ ಕಥೆಗಳನ್ನು ಬುಡಮೇಲು ಮಾಡಿದರೆ ಸಮಾಜ ರಚನೆಯ ಅಧ್ಯಯನ ಅದರ ವರ್ಗಗಳು, ಸಮಾಜದ ಪ್ರಗತಿಯ ನಿಯಮಗಳು ಮಾನವನ ಸುಖ ದು:ಖಗಳು ಅವನ ಭವಿಷ್ಯ ಮಾನವ ಸಮಾಜದ ಕೈಯಲ್ಲೇ ಇದೆ ಎಂಬುದನ್ನು ಸಾಬೀತುಪಡಿಸಿದೆ. ಈ ವೈಜ್ಞಾನಿಕ ತಿಳುವಳಿಕೆಯ ಸಾರ ರೂಪವೇ ಕಮ್ಯುನಿಸಂ ತತ್ವ. ಆದ್ದರಿಂದ ಈ ಭೌತಿಕ ತತ್ವ ಈ ಜಗತ್ತಿನೊಳಗಡೆ ಇರುವ ವಸ್ತುಗಳಾಚೆಯ ಪರವಸ್ತು ಪರಮಾತ್ಮ ಸಿದ್ಧಾಂತವನ್ನು ಒಪ್ಪುವುದಿಲ್ಲ. ಅಂದರೆ ಕಮ್ಯುನಿಸ್ಟರು ದೇವರು ದೈವ ಶಕ್ತಿ ತತ್ವವನ್ನು ನಂಬುವುದಿಲ್ಲ. ಅವರು ಭೌತಿಕವಾದಿಗಳು.

ಹಾಗೆಂದ ಮಾತ್ರಕ್ಕೆ ಕಮ್ಯುನಿಸ್ಟ್ ಪಕ್ಷಗಳ ಸದಸ್ಯರೆಲ್ಲಾ ನಾಸ್ತಿಕರು. ದೇವರನ್ನು ಬಿಟ್ಟನಂತರವೇ ಈ ಪಕ್ಷದಲ್ಲಿ ಪ್ರವೇಶ ಎಂದೇನಿಲ್ಲ. ಆದರೆ ಕಮ್ಯುನಿಸಂನಿಂದ ಅಪಾಯಕ್ಕೊಳಗಾಗುವ ಎಲ್ಲಾ ಶೋಷಕರು ಕಮ್ಯುನಿಸ್ಟ್ ಪಕ್ಷದ ಬಗ್ಗೆ ಚಳುವಳಿಯ ಬಗ್ಗೆ ತಪ್ಪು ಕಲ್ಪನೆ ಮೂಡಿಸಿ ಕಮ್ಯುನಿಸ್ಟರೆಂದರೆ ನಾಸ್ತಿಕರು ಎಂದು ಹೆದರಿಸಿ ಅವರನ್ನು ಜನರಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಇದೇಕೆಂದು ಅರ್ಥಮಾಡಿಕೊಳ್ಳುವುದು ಅಗತ್ಯ.

ಕಮ್ಯುನಿಸ್ಟರು ದುಡಿಯುವ ವರ್ಗದ ವಿವಿಧ ವಿಭಾಗಗಳ ನಡುವೆ ಕೆಲಸ ಮಾಡುತ್ತಾರೆ. ಈ ವಿಭಾಗಗಳ ನಾಯಕತ್ವ ವಹಿಸುತ್ತಾರೆ. ಅವರ ವಿಶ್ವಾಸಗಳಿಸಬಯಸುತ್ತಾರೆ. ರೈತರು, ಕಾರ್ಮಿಕರು, ಮುಂತಾದ ದುಡಿಯುವ ವರ್ಗದ ವಿಭಾಗಗಳಲ್ಲಿ ಬಹು ಸಂಖ್ಯಾತ ಜನ ಆಸ್ತಿಕರು. ದೇವರು, ಧರ್ಮದಲ್ಲಿ ನಂಬಿಕೆ ಇಟ್ಟವರು. ಬಹಳ ಮಟ್ಟಿಗೆ ಧಾರ್ಮಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡವರು. ಆದರೆ ಕಮ್ಯುನಿಸ್ಟ್ ನಾಯಕತ್ವವನ್ನು ದೈನಂದಿನ ಬದುಕಿನ ಹೋರಾಟ ಆರಿಸಿಕೊಂಡವರು. ಧಾರ್ಮಿಕ ದೃಷ್ಟಿಕೋಣ ಬದಲಾಗಿ, ಮಾರ್ಕ್ಸ್‌ವಾದಿ-ಲೆನಿನ್‌ವಾದಿಯಾದ ದ್ವಂದ್ವಾತ್ಮಕ ಭೌತವಾದವನ್ನು ಅಂಗೀಕರಿಸುವುದು ಬಹಳ ದೀರ್ಘವಾದ ಪ್ರಕ್ರಿಯೆ. ಹೆಚ್ಚಾಗಿ ರಾಜಕೀಯ ಕ್ರಾಂತಿಯ ನಂತರವೂ ಇದು ಬಹಳ ದೀರ್ಘಕಾಲ ನಡೆಯುತ್ತದೆ. ಸಮಾಜವಾದಿ ದೇಶಗಳಲ್ಲಿ ಈಗಲೂ ಧರ್ಮದ ಹಿಡಿತ ಎಷ್ಟಿದೆಯೆಂದು ತಿಳಿದರೆ ಇದು ಅರ್ಥವಾಗುತ್ತದೆ. ಆದ್ದರಿಂದ ದುಡಿಯುವ ಜನರ ಧಾರ್ಮಿಕ ನಂಬಿಕೆ, ಭಕ್ತಿಯನ್ನು ಕಮ್ಯುನಿಸ್ಟರ ವಿರುದ್ಧ ಆಯುಧವಾಗಿ ಉಪಯೋಗಿಸಲು ಈ ಮಾತು. ಕಮ್ಯುನಿಸ್ಟರಿಗೆ ದೇವರಿಲ್ಲಾ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದರೆ ದೇವರು, ಧರ್ಮಗಳಿಗೆ ಅವಕಾಶವಿಲ್ಲ. ಆದ್ದರಿಂದ ಇವರ ನಾಯಕತ್ವ ಸ್ವೀಕರಿಸಬೇಡಿ ಇತ್ಯಾದಿ.. ಇದು ಕಮ್ಯುನಿಸ್ಟರನ್ನು ಮತ್ತು ದುಡಿಯುವ ವರ್ಗದ ಜನ ಸಮೂಹವನ್ನು ಪ್ರತ್ಯೇಕಿಸುವ ಕುತಂತ್ರ. ಈ ಪ್ರಯತ್ನ ಹಲವಾರು ರೂಪಗಳನ್ನು ಪಡೆಯುತ್ತದೆ.

ಕಮ್ಯುನಿಸ್ಟರು ಈ ಆಕ್ರಮಣವನ್ನು ಚಾಕಚಕ್ಯತೆಯಿಂದ ಎದುರಿಸಬೇಕಾಗುತ್ತದೆ. ಈ ರೀತಿ ಆರೋಪಿಸುತ್ತಾರೆ. ಆದ್ದರಿಂದ ಜನರ ವಿಶ್ವಾಸ ಕಳೆದುಕೊಳ್ಳಬಹುದು ಎಂದು ವೈಯಕ್ತಿಕವಾಗಿ ನಾಸ್ತಿಕ ಸಿದ್ಧಾಂತವನ್ನು ಬಿಟ್ಟುಕೊಡಬಾರದು. ಆದರೆ ಇದನ್ನು ದುಡಿಯುವ ಜನಸಮೂಹದ ಮೇಲೆ ಹೇರಿಸಲು ಪ್ರಯತ್ನಿಸಬಾರದು. ಅದೇ ಸಮಯದಲ್ಲಿ ದೈನಂದಿನ ಹೋರಾಟದಲ್ಲಿ ಧಾರ್ಮಿಕ ದೃಷ್ಟಿಕೋನ ಅಡ್ಡಿಯಾದಾಗ, ಅದನ್ನು ಆಳುವ ವರ್ಗಗಳು ದುರುಪಯೋಗ ಮಾಡಿಸಲು ಪ್ರಯತ್ನಿಸಿದಾಗ ಧರ್ಮದ ವರ್ಗ ಸ್ವರೂಪದ ಬಗ್ಗೆ ತಿಳಿ ಹೇಳಬೇಕು. ಅಲ್ಲದೆ ದುಡಿಯುವ ಜನರು ತಮ್ಮದೇ ಅನುಭವದಿಂದ ಧಾರ್ಮಿಕ ದೃಷ್ಟಿಕೋಣ ಬಿಟ್ಟುಕೊಟ್ಟು, ವೈಜ್ಞಾನಿಕವಾದ ದೃಷ್ಟಿಕೋಣವನ್ನು ಅಂಗೀಕರಿಸುವ ದೀರ್ಘ ಪ್ರಕ್ರಿಯೆಯನ್ನು ಹಂತಹಂತವಾಗಿ ಮುಂದಕ್ಕೆ ಒಯ್ಯುವ ಬಗ್ಗೆ-ದುಡಿಯುವ ಜನರಲ್ಲಿ ಇದರ ಬಗ್ಗೆ ಶಿಕ್ಷಣ, ಪ್ರಚಾರ ಇತ್ಯಾದಿ ಕ್ರಮಗಳ ಬಗ್ಗೆ ನಿರಂತರ ಗಮನ ಕೊಡಬೇಕು.

ಧರ್ಮದ ಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋಣವನ್ನು ಕೂಲಂಕುಶವಾಗಿ ಅರ್ಥಮಾಡಿಕೊಳ್ಳುವುದು ಅಷ್ಟೇ ಅಗತ್ಯ. 'ಧರ್ಮ ಜನರ ಅಫೀಮು' ಎಂದು ಮಾರ್ಕ್ಸ್‌ವಾದ ಹೇಳುತ್ತದೆ. ಆದರೆ ಇದು ಸಾರಾಂಶ ಅಷ್ಟೇ. ಧರ್ಮದ ಬಗ್ಗೆ ಕಾರ್ಲ್‌ಮಾರ್ಕ್ಸ್ ಹೇಳಿರುವ ಈ ಕೆಳಗಿನ ಮಾರ್ಮಿಕ ಮಾತುಗಳು ಧರ್ಮದ ಬಗ್ಗೆ ಆಳವಾದ ಸಮಗ್ರ ದೃಷ್ಟಿಕೋನವನ್ನು ಪ್ರತಿನಿಧಿಸುವಂತಹುದು, ಅತ್ಯಂತ ಪ್ರಸಿದ್ಧವಾದುದು.

"ಧರ್ಮದ ಟೀಕೆಯ ಆಧಾರವೆಂದರೆ: ಮಾನವನು ಧರ್ಮವನ್ನು ಸೃಜಿಸುತ್ತಾನೆ; ಧರ್ಮವಿ ಮಾನವನನ್ನಲ್ಲ. ತನ್ನನ್ನು ಇನ್ನೂ ಕಂಡುಕೊಳ್ಳದ ಇರುವ ಅಥವಾ ಕಂಡುಕೊಂಡು ಮತ್ತೇ ಆಗಲೇ ಕಳೆದುಕೊಂಡಿರುವ ಮಾನವನ ಆತ್ಮಪ್ರಜ್ಞೆಯೇ ಮತ್ತು ಆತ್ಮಗೌರವವೇ ಧರ್ಮ. ಆದರೆ ಮಾನವ ಜಗತ್ತಿನ ಹೊರಗೆ ಬೀಡುಬಿಟ್ಟ ಅಮೂರ್ತ ಜೀವಿಯೇನಲ್ಲ. ಮಾನವನ ಜಗತ್ತಾದ- ಸಮಾಜ, ಪ್ರಭುತ್ವಗಳಲ್ಲೂ ಮಾನವನೇ ಆವರಿಸಿದ್ದಾನೆ. ಈ ಸಮಾಜ, ಪ್ರಭುತ್ವಗಳು ಧರ್ಮವನ್ನು ಹುಟ್ಟುಹಾಕುತ್ತವೆ. ಧರ್ಮ ಒಂದು ತಲೆಕೆಳಗಾದ ಜಾಗತಿಕ ಪ್ರಜ್ಞೆ. ಏಕೆಂದರೆ ಈ ಸಮಾಜ, ಪ್ರಭುತ್ವಗಳು ಒಂದು ತಲೆಕೆಳಗಾದ ಜಗತ್ತು. ಧರ್ಮವು ಆ ಜಗತ್ತಿನ ಸಾರ್ವತ್ರಿಕ ಸಿದ್ಧಾಂತ, ವಿಶ್ವಕೋಶದಂತಹ ಸಂಗ್ರಹ ರೂಪ, ಜನಪ್ರಿಯ ರೂಪದಲ್ಲಿ ಅದರ ತರ್ಕ, ಧರ್ಮ ಆಜಗತ್ತಿನ ಆಧ್ಯಾತ್ಮಿಕ ಗೌರವ, ಅದರಉತ್ಸಾಹ, ಅದರ ನೈತಿಕ ನಿರ್ಣಯ, ಅದಕ್ಕೆ ಗಂಭೀರವಾದ ಪೂರಕ, ಆಜಗತ್ತಿಗೆ ಸಮರ್ಥನೀಯ ಮತ್ತು ಸಮಾಧಾನದ ಸಾರ್ವತ್ರಿಕ ಆಕರ. ಧರ್ಮ ಮಾನವತೆಯ ತಿರುಳಿನ ಭ್ರಮಾತ್ಮಕ ಸಾಕ್ಷಾತ್ಕಾರ, ಏಕೆಂದರೆ ಇನ್ನೂ ಮಾನವತೆಯ ತಿರುಳು ವಾಸ್ತವವಾದುದಲ್ಲ. ಆದ್ದರಿಂದ ಧರ್ಮದ ವಿರುದ್ಧ ಹೋರಾಟ ಪರೋಕ್ಷವಾಗಿ, ಆ ಜಗತ್ತಿನ ವಿರುದ್ಧದ ಹೋರಾಟ. ಏಕೆಂದರೆ ಧರ್ಮ ಆಜಗತ್ತಿನ ಚೇತನದ ವಾಸನೆ.

ಧಾರ್ಮಿಕ ಬೇಗುದಿ ನಿಜವಾದ ಬೇಗುದಿಯ ಅಭಿವ್ಯಕ್ತಿಯೂ ಹೌದು. ನಿಜವಾದ ಬೇಗುದಿಯ ವಿರುದ್ಧವಾದ ಪ್ರತಿಭಟನೆಯೂ ಹೌದು. ಧರ್ಮವು ಶೋಷಿತ ಮಾನವನ ನಿಟ್ಟುಸಿರು. ಹೃದಯರಹಿತ ಜಗತ್ತಿನ ಹೃದಯ, ಅದೇ ರೀತಿ ಚೇತನರಹಿತ ಪರಿಸ್ಥಿತಿಯ ಚೇತನ ಕೂಡಾ. ಧರ್ಮ ಜನತೆಯ ಅಫೀಮು.

ಜನರ ಭ್ರಮಾತ್ಮಕ ಸಂತೋಷವಾಗಿರುವ ಧರ್ಮವನ್ನು ತೊಡೆದು ಹಾಕುವುದು ಎಂದರೆ ನಿಜವಾದ ಸಂತೋಷಕ್ಕಾಗಿ ಆಗ್ರಹ ಮಾಡುವುದು. ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಭ್ರಮೆಗಳನ್ನು ಬಿಟ್ಟು ಕೊಡುವುದು ಎಂದರೆ ಇಂತಹ ಭ್ರಮೆಗಳು ಅಗತ್ಯವಾಗುವ ಪರಿಸ್ಥಿತಿಯನ್ನು ತೊಡೆದು ಹಾಕುವುದು. ಆದ್ದರಿಂದ ಧರ್ಮದ ಟೀಕೆ, ಧರ್ಮವಾದ [illegible] [illegible] ಪ್ರಭಾ ಮಂಡಲವಿರುವ, [illegible] ಸ್ಥಿಯಲ್ಲಿ ಅದರ ಟೀಕೆ.

ಧರ್ಮದ ಟೀಕೆ [illegible] [illegible] ಈ [illegible] [illegible] [illegible] [illegible] [illegible] [illegible] [illegible]

ದೇಶವೀಗ ಅತ್ಯಂತ ಗಂಭೀರ ಸನ್ನಿವೇಶವನ್ನು ಹಾದುಹೋಗುತ್ತದೆ. ಇದಕ್ಕೆ ಕಾರಣವಾದ ವಿವಾದದ ಹಿನ್ನೆಲೆ, ಘಟನೆಗಳು ಹಾಗೂ ದೇಶದ ಪ್ರಜಾಪ್ರಭುತ್ವ ಆಂದೋಲನ ಈ ಗಳಿಗೆಯಲ್ಲಿ ಎದುರಿಸುತ್ತಿರುವ ನಿಜವಾದ ಸವಾಲುಗಳೇನು ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಇಲ್ಲಿ ವಿಶ್ಲೇಷಿಸಿದ್ದಾರೆ.

ದೇಶದ ಜಾತ್ಯತೀತ ಸ್ವರೂಪ ಪಣಕ್ಕಿಡಲ್ಪಟ್ಟಿದೆ ಪ್ರಜಾಪ್ರಭುತ್ವ ಆಂದೋಲನದ ಭವಿಷ್ಯವೇ ಇದರಲ್ಲಡಗಿದೆ

ಸ್ವಾತಂತ್ರ್ಯದ ನಂತರ ಹಿಂದೆಂದೂ ಕಾಣದ ಗಂಭೀರ ಸ್ಥಿತಿಯನ್ನು ದೇಶ ಎದುರಿಸುತ್ತಿದೆ. ಕಾಶ್ಮೀರ, ಪಂಜಾಬ್, ಅಸ್ಸಾಂಗಳಲ್ಲಿ ಪ್ರತ್ಯೇಕತಾವಾದಿ ಆಂದೋಲನಗಳು ಬೆಳೆಯುತ್ತಿವೆ. ಆದರೆ ಈಗ ಎಲ್ಲರ ಗಮನ ಸೆಳೆದಿರುವುದು ಬಾಬ್ರಿಮಸೀದಿ- ರಾಮಜನ್ಮಭೂಮಿ ಪ್ರಶ್ನೆ. ಬಿ.ಜೆ.ಪಿ., ವಿ.ಹೆಚ್.ಪಿ. ಕೋಮು ಆಧಾರದ ಮೇಲೆ ಹಿಂದೂಗಳನ್ನು, ಮುಸ್ಲಿಮರನ್ನು ವಿಭಜಿಸಲು ಧಾರ್ಮಿಕ ಭಾವನೆಗಳನ್ನು ಉದ್ರೇಕಿಸುವ ದೃಢ ನಿರ್ಧಾರ ಮಾಡಿದಂತಿದೆ. ಬಿ.ಜೆ.ಪಿ. ಮುಂದಿನ ಚುನಾವಣೆಗಳಲ್ಲಿ ಹಿಂದೂ ಮತಗಿಟ್ಟಿಸಲು ಸರ್ವಪ್ರಯತ್ನ ಆರಂಭಿಸಿದೆ ಎಂಬುದು ಈಗ ಸ್ಪಷ್ಟವಾಗಿದೆ. ಅದ್ವಾಣಿಯವರ 'ರಥ'ದಲ್ಲಿ ಬಿ.ಜೆ.ಪಿ. ಚುನಾವಣಾ ಚಿಹ್ನೆ ಎದ್ದು ಕಾಣುವಂತಿತ್ತು. ಬಿ.ಜೆ.ಪಿ.ಯ ವಿ.ಹೆಚ್.ಪಿ.ಯ ಪ್ರಮುಖ ಮುಖಂಡರಾದ ವಿಜಯರಾಜೇ ಸಿಂಧ್ಯಾರಂತೂ ಬಹಿರಂಗವಾಗಿ ಘೋಷಿಸಿಯೇ ಬಿಟ್ಟಿದ್ದಾರೆ - ತಮ್ಮ ಪಕ್ಷ ಮುಂದಿನ ಚುನಾವಣೆಗಳನ್ನು ಇದೇ ಪ್ರಶ್ನೆಯ ಮೇಲೆ ಹೋರಾಡುತ್ತದೆ ಎಂದು.

ಈ ದುಷ್ಟ ಪ್ರಚಾರ ದಕ್ಷಿಣ ಭಾರತವೂ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ವಾತಾವರಣವನ್ನು ವಿಷಪೂರಿತಗೊಳಿಸಿದೆ ಕೋಮುಗಲಭೆಗಳನ್ನೆಬ್ಬಿಸಿದೆ

> **ಬಿ.ಜೆ.ಪಿ.ಯ ದುರುದ್ದೇಶ ಈಗ ಸ್ಪಷ್ಟ. ಧಾರ್ಮಿಕ ಹಕ್ಕುಗಳನ್ನು ರಕ್ಷಿಸುವುದು ಅದರ ಉದ್ದೇಶವಲ್ಲ. ರಾಜಕೀಯ ಲಾಭ ಪಡೆಯುವುದೇ ಅದರ ಉದ್ದೇಶ - ಇದಕ್ಕಾಗಿ ದೇಶ ಮುಗ್ಧ ಪುರುಷರ, ಮಹಿಳೆಯರ ಮಕ್ಕಳ ಅಮೂಲ್ಯ ಜೀವಗಳ ಬೆಲೆ ತೆರಬೇಕಾಗುತ್ತದೆ ಎಂದು ಗೊತ್ತಿದ್ದರೂ ಬಿ.ಜೆ.ಪಿ. ಈ ಉದ್ದೇಶ ಸಾಧನೆಯಲ್ಲಿ ತೊಡಗಿದೆ.**

ವಿಶೇಷವಾಗಿ ಬಿಹಾರ, ಉತ್ತರ ಪ್ರದೇಶಗಳಲ್ಲಿ.

ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ. ಯಾವುದೇ ಶರ್ತಬದ್ಧ ಪರಿಹಾರಕ್ಕೆ ಒಪ್ಪಲು ನಿರಾಕರಿಸಿವೆ. ಬಿ.ಜೆ.ಪಿ.ಯ ದುರುದ್ದೇಶ ಈಗ ಸ್ಪಷ್ಟ. ಧಾರ್ಮಿಕ ಹಕ್ಕುಗಳನ್ನು ರಕ್ಷಿಸುವುದು ಅದರ ಉದ್ದೇಶವಲ್ಲ. ರಾಜಕೀಯ ಲಾಭ ಪಡೆಯುವುದೇ ಅದರ ಉದ್ದೇಶ - ಇದಕ್ಕಾಗಿ ದೇಶ ಮುಗ್ಧ ಪುರುಷರ, ಮಹಿಳೆಯರ ಮಕ್ಕಳ ಅಮೂಲ್ಯ ಜೀವಗಳ ಬೆಲೆ ತೆರಬೇಕಾಗುತ್ತದೆ ಎಂದು ಗೊತ್ತಿದ್ದರೂ ಬಿ.ಜೆ.ಪಿ. ಈ ಉದ್ದೇಶ ಸಾಧನೆಯಲ್ಲಿ ತೊಡಗಿದೆ.

ಇಂತಹ ಸನ್ನಿವೇಶದಲ್ಲಿ ಪ್ರಧಾನ ಮಂತ್ರಿಗಳು ಅಕ್ಟೋಬರ್ 22 ರಂದು ದೇಶವನ್ನುದ್ದೇಶಿಸಿ ಮಾತನಾಡಬೇಕಾಯಿತು. ಬಿ.ಜೆ.ಪಿ.ಯ ಒತ್ತಾಯವನ್ನು ಒಪ್ಪಿಕೊಂಡರೆ ಪಾಕಿಸ್ತಾನಿಗಳಿಗೆ ಕಾಶ್ಮೀರ ಕೇಳಿದಂತೆ ಪ್ರತ್ಯೇಕತಾವಾದಿಗಳಿಗೆ ದೇಶ ಏನು ಉತ್ತರ ಕೊಡಲು ಸಾಧ್ಯ ಎಂದು ಅವರು ಪ್ರಶ್ನಿಸುತ್ತಾ ಜನರ ಐಕ್ಯತೆ ರಕ್ಷಿಸುವ ಸವಾಲನ್ನು ಸ್ವೀಕರಿಸಿದರು.

ಈ ಪ್ರಶ್ನೆ ಹೊಸದೇನೂ ಅಲ್ಲ. 1930 ರ, 1940ರ ದಶಕದಲ್ಲೇ ಈ ವಿವಾದ ಎದ್ದಿತ್ತು. ಆದರೆ 1949 ರಲ್ಲಿ ಇದು ದೇಶದ ಮುಂದೆ ಬಂತು - ಡಿಸೆಂಬರ್ 22 ರಂದು ಪೋಲೀಸ್ ಕಾವಲಿನ ನಡುವೆ ಮಸೀದಿಯೊಳಗೆ ರಾಮದೇವರ ಮೂರ್ತಿ ಇಟ್ಟಾಗ. ಮುಸ್ಲಿಮರು ಇದನ್ನು ಪ್ರತಿಭಟಿಸಿದರು. 1950 ರ ಜನವರಿಯಲ್ಲಿ ಉತ್ತರ ಪ್ರದೇಶ ಸರ್ಕಾರ ವಿವಾದಗ್ರಸ್ತ ಪೂಜಾ ಸ್ಥಳಕ್ಕೆ ಬೀಗ ಹಾಕಬೇಕಾಯಿತು. ತಕ್ಷಣ ನ್ಯಾಯಾಲಯದಲ್ಲಿ ಎರಡು ಮೊಕದ್ದಮೆಗಳನ್ನು ಹಾಕಲಾಯಿತು. ಅಂದಿನಿಂದ ಈ ವಿವಾದ ನ್ಯಾಯಾಲಯದ ಸಮ್ಮುಖ ಇದೆ.

ಅಯೋಧ್ಯೆಯ ಅಕ್ಷಯ ಬ್ರಹ್ಮಚಾರಿ ಈ ಬಗ್ಗೆ ಉಪವಾಸ ನಡೆಸಿದರು. ರಾಜ್ಯ ಸರಕಾರದ ಭರವಸೆಯ ಮೇಲೆ ಅದನ್ನು ವಾಪಾಸು ತೆಗೆದುಕೊಂಡರು. ಇದಾದ ನಂತರ ಯು.ಪಿ. ಸರ್ಕಾರ ನ್ಯಾಯಾಲಯದಲ್ಲಿ ಒಂದು ಅಫಿಡವಿಟ್ ಸಲ್ಲಿಸಿ ಈ ಮಸೀದಿ ನಾಲ್ಕುನೂರು ವರ್ಷಗಳಿಂದ ಇದೆ ಎಂದು ಹೇಳಿತು. ಅನಂತರ ಮಸೀದಿಯ ಎದುರಿರುವ ರಾಮ್ ಚಬೂತರಾದಲ್ಲಿ ದೇವಸ್ಥಾನ ಕಟ್ಟಲು ಅನುಮತಿ ಕೋರಿ ಇನ್ನೊಂದು ಮೊಕದ್ದಮೆ ಸಲ್ಲಿಸಲಾಯಿತು. ಅದಕ್ಕೆ ಅನುಮತಿ ದೊರೆಯಲಿಲ್ಲ.

ವಿಷಪ್ರಚಾರ ಆರಂಭ

ನಂತರ 1986 ರಲ್ಲಷ್ಟೇ ಈ ಪ್ರಶ್ನೆಯ ಮೇಲೆ ಚಳುವಳಿ ಆರಂಭವಾದದ್ದು. ಸ್ಥಳೀಯ ಮ್ಯಾಜಿಸ್ಟ್ರೇಟರು 1950 ರಲ್ಲಿ ಹಾಕಿದ ಬೀಗ ತೆಗೆಯಲು ಆಜ್ಞೆ ಮಾಡಿದರು. ಅಂದಿನಿಂದ ಯಾವ ಮುಸಲ್ಮಾನನೂ ಅಲ್ಲಿಗೆ ಹೋಗುತ್ತಿಲ್ಲ. ಆದರೆ ಹಿಂದೂಗಳ ಪೂಜೆ ಪುನಸ್ಕಾರ ಸಾಗುತ್ತಲೇ ಇದೆ.

ಈ ನಡುವೆ ಎರಡು ಪ್ರತ್ಯೇಕ ಸಂಘಟನೆಗಳು ರೂಪುಗೊಂಡವು ಒಂದು ವಿಶ್ವ ಹಿಂದೂ ಪರಿಷತ್ತು, ಇನ್ನೊಂದು ಬಾಬ್ರಿ ಮಸೀದಿ ಕ್ರಿಯಾ ಸಮಿತಿ ಜನರನ್ನು ಪರಸ್ಪರರ ವಿರುದ್ಧ ಎತ್ತಿ ಕಟ್ಟಲು ಇವರು ಆರಂಭಿಸಿದರು. ವಿ.ಹೆಚ್.ಪಿ. ಬಿ.ಜೆ.ಪಿ.ಯ ನೆರವಿನಿಂದ ದೇಶಾದ್ಯಂತ ಪ್ರಚಾರ ನಡೆಸಿತು ವಿವಾದಗ್ರಸ್ತ ಜಾಗವನ್ನು ಹಿಂದೂಗಳಿಗೆ ಕೊಡಬೇಕೆಂದು. ವಿ.ಹೆಚ್.ಪಿ.ಯ ಹಠ ಮಾರಿತನದಿಂದಾಗಿ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರುವ ಸರಕಾರದ ಪ್ರಯತ್ನಗಳೆಲ್ಲಾ ವಿಫಲಗೊಂಡವು ವಿ.ಹೆಚ್.ಪಿ. ನ್ಯಾಯಾಲಯದ ತೀರ್ಪನ್ನು ಪಾಲಿಸಲು ನಿರಾಕರಿಸಿತು.

ಒಂದು ಘಟ್ಟದಲ್ಲಿ ಮೂರು ಪ್ರಸ್ತಾಪಗಳು ಬಂದವು 1) ಮಾತುಕತೆಯ ಮೂಲಕ ಇತ್ಯರ್ಥ 2) ವಿವಾದಗ್ರಸ್ತ ಪ್ರದೇಶವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವುದು 3) ನ್ಯಾಯಾಲಯದ ತೀರ್ಪಿಗೆ ಬದ್ಧತೆ. ಮುಸ್ಲಿಂ ಸಂಘಟನೆಗಳು ಈ ಮೂರಕ್ಕೂ ಒಪ್ಪಿದವು. ಆದರೆ ವಿ.ಹೆಚ್.ಪಿ. ಯಾವುದಕ್ಕೂ ಒಪ್ಪಲಿಲ್ಲ.

ಈ ನಡುವೆ ಆಗಸ್ಟ್ 1989 ರಲ್ಲಿ ಅಲಹಾಬಾದ್ ಹೈಕೋರ್ಟಿನ ಲಕ್ನಾಪೀಠ ನ್ಯಾಯಾಲಯ ಅಂತಿಮ ತೀರ್ಪು ನೀಡುವವರೆಗೆ ವಿವಾದಗ್ರಸ್ತ ಆಸ್ತಿಯ ಸ್ವರೂಪವನ್ನು ಯಾವ ರೀತಿಯಲ್ಲೂ ಬದಲಿಸಬಾರದೆಂದು ಆಜ್ಞೆ ನೀಡಿತು. ಆ ಬಗ್ಗೆ ನಂತರ ಸ್ಪಷ್ಟೀಕರಣವನ್ನೂ ನೀಡಿತು.

ಅದೇ ವರ್ಷ ಸಪ್ಟೆಂಬರ್ 27 ರಂದು ವಿ.ಹೆಚ್.ಪಿ. ಉತ್ತರ ಪ್ರದೇಶ ಸರಕಾರದೊಂದಿಗೆ ಒಂದು ಒಪ್ಪಂದಕ್ಕೆ ಸಹಿ ಹಾಕಿ ಲಕ್ನಾ ಪೀಠದ ಆದೇಶ ಪಾಲಿಸುವುದಾಗಿಯೂ ಶಾಂತಿ ಮತ್ತು ಕೋಮು ಸೌಹಾರ್ದವನ್ನು ಕಾಪಾಡುವುದಾಗಿಯೂ ಮಾತು ಕೊಟ್ಟಿತು.

ಅಕ್ಟೋಬರ್ 13 ರಂದು ಸಂಸತ್ತಿನ ಉಭಯ ಸದನಗಳು ಒಂದು ಠರಾವು ಅಂಗೀಕರಿಸಿ ಹಿಂಸಾಚಾರಕ್ಕೆಡೆ ಮಾಡುವ ಘರ್ಷಣೆಯ ದಾರಿ ಬಿಟ್ಟುಬಿಡಬೇಕೆಂದು ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಾಕ್ರಮಗಳನ್ನು ಸಮಾರಂಭಗಳನ್ನು ನ್ಯಾಯಾಲಯ ತೀರ್ಪು

> **ರಾಷ್ಟ್ರೀಯ ರಂಗ ಸರಕಾರ ಮಾತುಕತೆಯ ಮೂಲಕ ಇತ್ಯರ್ಥಕ್ಕೆ ಬಹಳ ಪ್ರಯತ್ನ ನಡೆಸಿತು. ಆದರೆ ವಿ.ಹೆಚ್.ಪಿ. ಬಿ.ಜೆ.ಪಿ. ವಿವಾದಗ್ರಸ್ತ ಪ್ರದೇಶದಲ್ಲಿ ದೇವಸ್ಥಾನ ಕಟ್ಟುವುದು ಬಿಟ್ಟು ಬೇರಾವ ಇತ್ಯರ್ಥವೂ ಸಾಧ್ಯವಿಲ್ಲವೆಂದು ಹಠ ಹಿಡಿದವು. ನ್ಯಾಯಾಲಯದ ತೀರ್ಪಿಗೆ ಬದ್ಧವಾಗಲೂ ವಿರೋಧಿಸಿದವು.**

ಬರುವವರೆಗೆ ಮುಂದೂಡಬೇಕೆಂದು ವಿಶ್ವಹಿಂದೂ ಪರಿಷತ್ತು ಭಜರಂಗ್‌ದಳ, ಮತ್ತು ಅಖಿಲ ಭಾರತ ಬಾಬ್ರಿ ಮಸೀದಿ ಕ್ರಿಯಾ ಸಮಿತಿಗೆ ಕರೆ ನೀಡಿದವು. ಕಾನೂನಿಗೆ ಮಾನ್ಯತೆ, ನೀಡಬೇಕು, ಭಾರತದ ಜಾತ್ಯತೀತ ಪರಂಪರೆ ಹಾಗೂ ಸ್ವರೂಪವನ್ನು ಎತ್ತಿ ಹಿಡಿಯಬೇಕೆಂದು ಕರೆ ನೀಡಿದವು.

ಆದರೂ ವಿ.ಹೆಚ್.ಪಿ. ಕಾಂಗ್ರೆಸ್(ಐ) ಸರ್ಕಾರದ ಅನುಮತಿಯೊಂದಿಗೆ ವಿವಾದಗ್ರಸ್ತ ಪ್ರದೇಶದಲ್ಲಿ ಶಿಲಾನ್ಯಾಸ ಕಾರ್ಯಕ್ರಮ ನಡೆಸಿಯೇ ಬಿಟ್ಟಿತು ಮಾತುಕತೆಯ ಮೂಲಕ ಇತ್ಯರ್ಥ ಅಥವಾ ನ್ಯಾಯಾಲಯದ ತೀರ್ಪಿಗೂ ಕಾಯದೆ, ಲಕ್ನಾಪೀಠದ ಆದೇಶವನ್ನೂ ಲೆಕ್ಕಿಸದೆ. ಇದು ದೇಶದ ಅಲ್ಪ ಸಂಖ್ಯಾತರನ್ನು ಸಿಟ್ಟಿಗೆಬ್ಬಿಸಿತು.

ಬಿ.ಜೆ.ಪಿ., ವಿ.ಹೆಚ್.ಪಿ.ಯ ಈ ಕೃತ್ಯವನ್ನು ಬೆಂಬಲಿಸಿ ತಾನೂ ರಂಗಕ್ಕೆ ಧುಮುಕಿತು. ಚುನಾವಣೆಗಳಲ್ಲಿ ಅದು ಅತ್ಯಂತ ನಗ್ನ ಕೋಮುವಾದಿ ವೇದಿಕೆ ಅಂಗೀಕರಿಸಿತು. ರಾಮಜನ್ಮಭೂಮಿ, 370 ನೇ ಕಲಮಿನ ರದ್ಧತಿ ಮತ್ತು ಅಲ್ಪಸಂಖ್ಯಾತ ಆಯೋಜಿತ ರದ್ಧತಿ. ತನ್ನ ಚುನಾವಣಾ ಗೆಲುವಿಗೆ ಇದೇ ನೆರವಾಯಿತು ಎಂಬ ಭಾವನೆಯೂ ಅದರಲ್ಲಿ ಬೆಳೆಯಿತು.

1989ರ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ಸೋಲಿನ ನಂತರ ಜನರ ತೀರ್ಪು ಕೇಂದ್ರದಲ್ಲಿ ಕಾಂಗ್ರೆಯೇತರ ಸರ್ಕಾರದ ರಚನೆಗಾಗಿ, ಎಡಪಕ್ಷಗಳು ಹಾಗೂ ಬಿ.ಜೆ.ಪಿ, ರಾಷ್ಟ್ರೀಯ ರಂಗಕ್ಕೆ ಬೆಂಬಲ ನೀಡಿ ಇದನ್ನು ಜ್ಯಾರಿಗೆ ತರಬಹುದು ಎಂದು ನಮ್ಮ ಪಕ್ಷ ಆಗ ಸ್ಪಷ್ಟ ಪಡಿಸಿತು. ಈ ಬೆಂಬಲ ಎಡಪಕ್ಷಗಳ ಅಥವಾ ಬಿ.ಜೆ.ಪಿ.ಯ ಚುನಾವಣಾ ಪ್ರಣಾಳಿಕೆಗಳನ್ನು ಅನುಷ್ಠಾನಕ್ಕೆ ತರಬೇಕೆಂದಲ್ಲ. ರಾಷ್ಟ್ರೀಯ ರಂಗ ತಾನು ನೀಡಿದ ವಚನಗಳ ಅನುಷ್ಠಾನಕ್ಕಾಗಿ ಎಂದೂ ಸ್ಪಷ್ಟಪಡಿಸಿದ್ದೆವು ತಾನೆತ್ತಿದ ಮೂರು ಪ್ರಶ್ನೆಗಳಿಗೆ ದೇಶದ ಯಾವ ರಾಜಕೀಯ ಪಕ್ಷದ ಬೆಂಬಲವೂ ಇಲ್ಲ ಎಂಬುದು ಬಿ.ಜೆ.ಪಿ.ಗೆ ಚೆನ್ನಾಗಿ ಗೊತ್ತಿತ್ತು.

ಜಾತ್ಯಾತೀತ ಶಕ್ತಿಗಳ ಮನವಿ

ರಾಷ್ಟ್ರೀಯ ರಂಗ ಸರಕಾರ ಮಾತುಕತೆಯ ಮೂಲಕ ಇತ್ಯರ್ಥಕ್ಕೆ ಬಹಳ ಪ್ರಯತ್ನ ನಡೆಸಿತು. ಆದರೆ ವಿ.ಹೆಚ್.ಪಿ. ಬಿ.ಜೆ.ಪಿ. ವಿವಾದಗ್ರಸ್ತ ಪ್ರದೇಶದಲ್ಲಿ ದೇವಸ್ಥಾನ ಕಟ್ಟುವುದು ಬಿಟ್ಟು ಬೇರಾವ ಇತ್ಯರ್ಥವೂ ಸಾಧ್ಯವಿಲ್ಲವೆಂದು ಹಠ ಹಿಡಿದವು. ನ್ಯಾಯಾಲಯದ ತೀರ್ಪಿಗೆ ಬದ್ಧವಾಗಲೂ ವಿರೋಧಿಸಿದವು.

ಎಡ ಪಕ್ಷಗಳು ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ರಾಜ್ಯವ್ಯಾಪಿ ಪ್ರಕ್ಷೋಭೆಯನ್ನು ನಡೆಸಿ ಕೋಮುವಾದಿಗಳ ಅಪಪ್ರಚಾರವನ್ನು ಎದುರಿಸಿದವು. ಒಟ್ಟು 47 ರ್‍ಯಾಲಿಗಳನ್ನು ನಡೆಸಿದವು. ಅಕ್ಟೋಬರ್ 12 ರಂದು ಲಕ್ನೋನಲ್ಲಿ ಒಂದು ಬೃಹತ್ ರ್‍ಯಾಲಿಯೊಂದಿಗೆ ಇದು ಕೊನೆಗೊಂಡಿತು.

ಮದ್ರಾಸಿನಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಮಾತುಕತೆಯ ಮೂಲಕ ಇತ್ಯರ್ಥದ ಅಥವಾ ನ್ಯಾಯಾಲಯ ತೀರ್ಪಿಗೆ ಕಾಯುವ ಮನವಿ ಅಂಗೀಕರಿಸಲಾಯಿತು.

ಅಕ್ಟೋಬರ್ 17 ರಂದು ನಡೆದ ಸರ್ವ ಪಕ್ಷಸಭೆ ಕೂಡಾ ಬಿ.ಜೆ.ಪಿ.ಗೆ ಮನವಿ ಮಾಡಿಕೊಂಡಿತು.

ಕೆಲವು ಬಿ.ಜೆ.ಪಿ. ಮುಖಂಡರು ಸರಕಾರದೊಂದಿಗೆ ಮಾತುಕತೆ ನಡೆಸಿದರು. ಸರಕಾರ ಮೂರಂಶದ ಸೂತ್ರವನ್ನು ಮುಂದಿಟ್ಟಿತು.

1 ಇಡೀ ವಿವಾದಗ್ರಸ್ತ ಪ್ರದೇಶವನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದು.

2) ವಿವಾದಗ್ರಸ್ತವಲ್ಲದ ಪ್ರದೇಶದಲ್ಲಿ ದೇವಸ್ಥಾನ ಕಟ್ಟಲು ಅನುಮತಿ

3) ರಾಮಜನ್ಮಭೂಮಿ ಬಾಬ್ರಿ ಮಸೀದಿ ವಿವಾದದ ಬಗ್ಗೆ ಸುಪ್ರೀಂ ಕೋರ್ಟಿನ ಅಭಿಪ್ರಾಯ ಕೇಳುವುದು.

ಈ ಸೂತ್ರದ ಆಧಾರದ ಮೇಲೆ ಇತ್ಯರ್ಥಕ್ಕೆ ಕೆಲವು ಬಿ.ಜೆ.ಪಿ. ಮುಖಂಡರ ಒಲವಿದ್ದಂತಿತ್ತು. ಆದರೆ ವಿ.ಹೆಚ್.ಪಿ. ಮುಖಂಡರು ಅದನ್ನು ಸಾರಾಸಗಟು ತಿರಸ್ಕರಿಸಿದರು. ಸರಕಾರ ಈ ಬಗ್ಗೆ ಸರಿಯಾದ ಪೂರ್ವಸಿದ್ಧತೆ ಮಾಡಿ ಕೊಂಡಿರಲಿಲ್ಲವೇನೋ ಎಂದು ಈಗನ್ನಿಸುತ್ತದೆ. ಮುಸ್ಲಿಂ ಮುಖಂಡರಲ್ಲಿ ಈ ಸೂತ್ರದ ಬಗ್ಗೆ ಗೊಂದಲವಿತ್ತು. ಅವರೂ ಅದನ್ನು ತಿರಸ್ಕರಿಸಿದರು.

ಎಡಪಕ್ಷಗಳು ಈ ಸೂತ್ರವನ್ನು ಬೆಂಬಲಿಸುತ್ತಾ ವಿವಾದಗ್ರಸ್ತ ಪ್ರದೇಶದಲ್ಲಿ ಶಿಲಾನ್ಯಾಸ ನಡೆದ ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟದಂತೆ ನೋಡಿಕೊಳ್ಳಬೇಕು ವಿವಾದಗ್ರಸ್ತ ಪ್ರದೇಶ ನ್ಯಾಯಾಲಯ ತೀರ್ಪು ಬರುವವರೆಗೆ ಮಾತ್ರ ಸರ್ಕಾರದ ವಶದಲ್ಲಿರಬೇಕು, ವಿವಾದಗ್ರಸ್ತ ಪ್ರದೇಶದ ಒಡೆತನದ ಪ್ರಶ್ನೆಯೂ ಸೇರಿದಂತೆ ಅಲಹಾಬಾದ್ ಹೈಕೋರ್ಟಿನಲ್ಲಿರುವ ಎಲ್ಲಾ ಮೊಕದ್ದಮೆಗಳನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿ ಒಂದು ಸೂಕ್ತ ನ್ಯಾಯಾಲಯ ತೀರ್ಪು ಸಿಗಲು ಅವಕಾಶ ಮಾಡಿ ಕೊಡಬೇಕು ಎಂದು ಪ್ರಧಾನ ಮಂತ್ರಿಗಳಿಗೆ ಹಾಗೂ ಮಂತ್ರಿ ಮಂಡಲದ ರಾಜಕೀಯ ವ್ಯವಹಾರಗಳ ಸಮಿತಿಗೆ ಸ್ಪಷ್ಟಪಡಿಸಿದ್ದವು. ಅಲ್ಪ ಸಂಖ್ಯಾತರ ನಡುವೆ ಎದ್ದಿರುವ ಸಂಶಯಗಳನ್ನು ನಿವಾರಿಸಲು ಅಗತ್ಯ ಎಂದು ಅಭಿಪ್ರಾಯ ಪಟ್ಟವು.

ಎರಡೂ ಕಡೆಯವರು ತಿರಸ್ಕರಿಸಿದ್ದರಿಂದ ಸರಕಾರ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕಾಯಿತು- ಮಾತುಕತೆಯ ಮೂಲಕ ಇತ್ಯರ್ಥ ಅಥವಾ ನ್ಯಾಯಾಲಯ ತೀರ್ಪು ಎಂಬ ತನ್ನ ಹಿಂದಿನ ನಿಲುವಿಗೂ ಮತ್ತೆ ಸರಕಾರ ಬರಬೇಕಾಯಿತು. ಬಿ.ಜೆ.ಪಿ. ತನ್ನ ರಥಯಾತ್ರೆ ಮುಂದುವರೆಸಲು ನಿರ್ಧರಿಸಿತು.

ಈ ರಥಯಾತ್ರೆ ದೇಶಾದ್ಯಂತ ಕೋಮು ಪರಿಸ್ಥಿತಿಯನ್ನು ಹದಗೆಡಿಸುವ ಪರಿಸ್ಥಿತಿ ಸೃಷ್ಟಿಸುತ್ತಿದ್ದುದರಿಂದ ಎಡಪಕ್ಷಗಳು ಇದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದವು. ಕಾಂಗ್ರೆಸ್(ಐ) ಕೂಡಾ ಇಂತಹ ಒತ್ತಾಯ ಮಾಡಿತು. ಅಕ್ಟೋಬರ್ 23 ರಂದು ಸರ್ಕಾರ ಕ್ರಮ ಕೈಗೊಂಡಿತು. ರಥಯಾತ್ರೆ ನಿಲ್ಲಿಸಿದರೆ ಬಿ.ಜೆ.ಪಿ. ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳುತ್ತದೆ ಎಂದು ಸ್ಪಷ್ಟವಾಗಿತ್ತು. ಅದು ಹಾಗೇಯೇ ಮಾಡಿತು.

ಕಾಂಗ್ರೆಸ್(ಐ) ಮತ್ತಿತರರಿಂದ ಪ್ರಧಾನ ಮಂತ್ರಿ ರಾಜೀನಾಮೆ ನೀಡಬೇಕೆಂದು ಹಲವಾರು ಹೇಳಿಕೆಗಳು ಬಂದಿವೆ. ಕೆಲವು ರಾಜಕೀಯ ಪಕ್ಷಗಳು ಮುಖಂಡರು ಈ ಪರಿಸ್ಥಿತಿಯಲ್ಲಿ ಪಣಕ್ಕಿರುವ ನಿಜವಾದ ಪ್ರಶ್ನೆಯಿಂದ, ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಕೋಮುವಾದಿಗಳ ಸವಾಲಿನಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಅಧಿಕಾರದಲ್ಲಿರಲು ಮೂಲಭೂತ ನೀತಿಗಳ ಬಗ್ಗೆ ರಾಜಿ ಮಾಡಿಕೊಳ್ಳುವ ಬದಲು ದೇಶದ ಐಕ್ಯತೆ ಕಾಪಾಡುತ್ತೇನೆ ಎಂದು ವಿ.ಪಿ.ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಇದು ದೇಶದ ಎಲ್ಲಾ ಜಾತ್ಯಾತೀತ

⟹ ಪುಟ 5

> **ಇದು ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳಿಗೊಂದು ಪರೀಕ್ಷೆಯ ಸಮಯ ದೇಶವನ್ನು ಒಂದು ಕೋಮು ಜ್ವಾಲೆಯಿಂದ ರಕ್ಷಿಸಲು, ವಿ.ಹೆಚ್.ಪಿ. ಬಿ.ಜೆ.ಪಿ.ಯ ಆಟಗಳನ್ನು ವಿಫಲಗೊಳಿಸಲು ಆದ್ಯತೆ ನೀಡಬೇಕೇ ಅಥವಾ ರಾಜಕೀಯ ಲಾಭ ಪಡೆಯಲು ಆದ್ಯತೆ ನೀಡಬೇಕೇ ಎಂದು.**

Block, Palace Guttahalli, BANGALORE

ಪ್ರತೀಬಾರಿ ಈ (ರಾಮಜನ್ಮಭೂಮಿ - ಬಾಬ್ರಿಮಸೀದೆ) ವಿವಾದ ಪ್ರಸ್ತಾಪ ಮಾಡಿದಾಗಲೆಲ್ಲ ಅದು ವಿ.ಹೆಚ್.ಪಿ.ಗೆ ಸಂಬಂಧಪಟ್ಟ ಸಂಗತಿಯೆಂದು ಬಿ.ಜೆ.ಪಿ. ಹೇಳುತ್ತಾ ಬಂತು. ಅದು ಅವರ ಚಳುವಳಿ-ಅವರೊಡನೆ ಮಾತನಾಡಿ ಎನ್ನುತ್ತಾ ಬಂದರು. ಅದ್ದರಿಂದ ನಾವು ಹಾಗೆಯೇ ಮಾಡುತ್ತಾ ಬಂದೆವು. ಇದ್ದಕ್ಕಿದ್ದಂತೆ ರಥಯಾತ್ರೆಯ ಕಾರ್ಯಕ್ರಮ ಬಂತು ನಮಗೆ ಅದರ ಬಗ್ಗೆ ಏನೂ ಮಾಹಿತಿ ಇರಲಿಲ್ಲ. ಇದ್ದಕ್ಕಿದ್ದಂತೆ ಅದಕ್ಕೂ ಸರ್ಕಾರಕ್ಕೆ ಅವರ ಬೆಂಬಲಕ್ಕೂ ಗುಂಟು ಹಾಕಿದರು. ಕಳೆದ ಒಂಭತ್ತು ತಿಂಗಳಲ್ಲಿ ಎಂದೂ ಪ್ರಶ್ನೆಯನ್ನು. ನ್ಯಾಯಾಲಯದ ಆಜ್ಞೆಯ ಉಲ್ಲಂಘನೆಯಾಗಬಹುದಾದ ಈ ಪ್ರಶ್ನೆಯನ್ನು ಸರಕಾರಕ್ಕೆ ಬಿ.ಜೆ.ಪಿ.ಯ ಬೆಂಬಲದೊಂದಿಗೆ ಧರ್ಮಗಳು, ಎಷ್ಟೊಂದು ವಿವಾದಗಳಿರುವಾಗ ಇಂತಹ ನಿಲುವು ತಳೆದರೆ ಅರಾಜಕತೆಗೆ ದಾರಿಯಾಗುತ್ತದೆ. ಒಂದು ತಿಂಗಳೊಳಗಾಗಿ ಅವರು ಬೆಳೆಸಿದ ಹೊಸ ಸನ್ನಿವೇಶ ಇದು.

-ಟೈಮ್ಸ್ ಆಫ್ ಇಂಡಿಯಾ ಪ್ರತಿನಿಧಿಯೊಂದಿಗೆ /ಸಂದರ್ಶನದಲ್ಲಿ
ಪ್ರಧಾನ ಮಂತ್ರಿ ವಿ.ಪಿ.ಸಿಂಗ್.

"ವಿ.ಹೆಚ್.ಪಿ ಜೀಹುಜೂರ್"

..ಮೂರಂಶಗಳ ಸೂತ್ರವನ್ನು ವಿಶೇಷಾಜ್ಞೆಯಾಗಿ ತರಬೇಕೆಂದು ಈ ಘಟ್ಟದಲ್ಲಿ ಶ್ರೀಯುತ ವಾಜಪೇಯಿಯವರಿಂದ ಪ್ರಾರ್ಥನೆ ಬಂತು ಈ ಮೂಲಕ ವಿವಾದ ಪರಿಹರಿಸಬಹುದೆಂದು ಅವರ ನಿರೀಕ್ಷೆಯಾಗಿತ್ತು ತನ್ನ ಪಕ್ಷದ ಮಂದಗಾಮಿಗಳ ಹತಾಶ ಸ್ಥಿತಿಯನ್ನು ಪ್ರತಿಫಲನವಾಗಿತ್ತು ಅವರ ಈ ನಿರೀಕ್ಷೆ. ಆದರೆ ಅವರ ನಿರೀಕ್ಷೆ ಈಡೇರಲಿಲ್ಲ. ವಿ.ಹೆಚ್.ಪಿ. ತಕ್ಷಣ ಸಂಪೂರ್ಣವಾಗಿ ಅದನ್ನು ತಿರಸ್ಕರಿಸಿತು. ಈ ಸೂತ್ರ ನಕಾರಾತ್ಮಕ ಎಂದು ಶ್ರೀಯುತ ಅಡ್ವಾಣಿ ಧನಬಾದ್‌ನಿಂದ ಹೆದರಿಕೊಂಡು ಹೇಳುತಿದ್ದ ಟಿಪ್ಪಣಿಯನ್ನು ಬದಿಗೆ ತಳ್ಳಲಾಯಿತು. ವಿ. ಹೆಚ್.ಪಿ.ಯ ಹುಕುಂ ಮಾತ್ರವೇ ನಡೆಯಲಾರಂಭಿಸಿತು.

-ಡೆಕನ್‌ಹೆರಾಲ್ಡ್‌ನಲ್ಲಿ ನಿಖಿಲ್ ಚಕ್ರವರ್ತಿ
29-10-90



ದೇಶದ ಎಲ್ಲೆಡೆಯಿಂದ ಎದ್ದ ಕೂಗಿನ ಅಲೆಗಳು

...ಗಂಟುಹಾಕಿರಲಿಲ್ಲ. ಮಂಡಲ್‌ಆಯೋಗದ ಬಗ್ಗೆ ಅವರೊಡನೆ ಪರಾಮರ್ಶೆ ನಡೆಸಲಿಲ್ಲ ಎಂದು ಅವರು ದೂರುತ್ತಾರೆ. ಆದರೆ ಅದು ಅವರ ಚುನಾವಣಾ ಪ್ರಣಾಳಿಕೆಯಲ್ಲಿತ್ತು. ಅದನ್ನು ಜಾರಿಗೆ ತರುವುದಾಗಿ ನಾನವರಿಗೆ ತಿಳಿಸಿದ್ದೆ ಕೂಡಾ. ಆದರೆ ಈ ರಥಯಾತ್ರೆಗೂ ಸರಕಾರಕ್ಕೆ ಬೆಂಬಲ ನೀಡುವುದಕ್ಕೂ ಪರಸ್ಪರ ಸಂಬಂಧವಿದೆಯೆಂದು ನಮಗೆಂದೂ ಅವರು ಹೇಳಲಿಲ್ಲ. ಚುನಾವಣೆಯ ಸಮಯದಲ್ಲಿ ಯಾವ ಆಧಾರದ ಮೇಲೆ ಅವರು ನಮಗೆ ಬೆಂಬಲ ನೀಡಿದ್ದರೋ ಇದ್ದಕ್ಕಿದ್ದಂತೆ ಅದನ್ನೇ ಬದಲಿಸಿಬಿಟ್ಟರು. ಧರ್ಮವನ್ನು ಸಂಪೂರ್ಣವಾಗಿ ಬಹಿರಂಗವಾಗಿ ತಾವೇ ವಹಿಸಿಕೊಂಡರು. ನ್ಯಾಯಾಲಯದ ಆಜ್ಞೆ ಏನೇ ಇರಲಿ, ತಾವು ವಿ.ಹೆಚ್.ಪಿ.ಗೆ ಬದ್ಧರು ಎಂದು ಘೋಷಿಸಿದರು. ನನ್ನ ಧಾರ್ಮಿಕ ನಂಬಿಕೆ ನ್ಯಾಯಾಲಯದ ಅಳಿವಿಗೆ ಮೀರಿದ್ದು ಎಂದು ಯಾವುದಾದರೂ ರಾಜಕೀಯ ಪಕ್ಷ ಹೇಳಬಹುದೇ ಎಂಬುದು ಆಗ ಮೂಲಭೂತ ವಿಷಯವಾಗಿ ಮುಂದೆ ಬಂತು. ಇಷ್ಟೊಂದು

ಪುಟ 4 ರಿಂದ ⇨

ಶಕ್ತಿಗಳಿಗೊಂದು ಪರೀಕ್ಷೆಯ ಸಮಯ ದೇಶವನ್ನು ಒಂದು ಕೋಮು ಜ್ವಾಲೆಯಿಂದ ರಕ್ಷಿಸಲು. ವಿ.ಹೆಚ್.ಪಿ. ಬಿ.ಜೆ.ಪಿ.ಯ ಆಟಗಳನ್ನು ವಿಫಲಗೊಳಿಸಲು ಆದ್ಯತೆ ನೀಡಬೇಕೇ ಅಥವಾ ರಾಜಕೀಯ ಲಾಭ ಪಡೆಯಲು ಆದ್ಯತೆ ನೀಡಬೇಕೇ ಎಂದು.

ನಮಗೂ ಸರಕಾರದೊಂದಿಗೆ ಹಲವು ವಿಷಯಗಳ ಭಿನ್ನಾಭಿಪ್ರಾಯವಿದೆ. ಅವರ ಧೋರಣೆಗಳನ್ನು ನಾವು ಬಹಿರಂಗವಾಗಿ ಟೀಕಿಸಿದ್ದೇವೆ. ಆದರೆ ಈ ಸಮಯದಲ್ಲಿ ಯಾವುದೇ ರೀತಿಯ ಅಸ್ಥಿರತೆ ಕೋಮುವಾದದ ಕರಾಳ ಶಕ್ತಿಗಳ ತಂತ್ರಕ್ಕೆ ಬಲಯಾದಂತೆಯೇ ಸರಿ. ಇದು ವಿನಾಶಕಾರಿ ಇತರ ಪ್ರಶ್ನೆಗಳನ್ನು ಎತ್ತಿಕೊಳ್ಳಲು. ಅವುಗಳ ಮೇಲೆ ಗಮನ ಕೇಂದ್ರೀಕರಿಸಲು ನಂತರ ಸಾಕಷ್ಟು ಸಮಯವಿದೆ. ಈ ಸಮಯದಲ್ಲಿ ನಿಜವಾದ ಪ್ರಶ್ನೆಯಿಂದ ಗಮನ ಬೇರೆಡೆ ತಿರುಗಿಸುವುದು ದೊಡ್ಡ ತಪ್ಪಾಗುತ್ತದೆ. ಬಿ.ಜೆ.ಪಿ. ಸರಕಾರಕ್ಕೆ ಬೆಂಬಲ ನಿಲ್ಲಿಸಿರುವುದು ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯದಿಂದಾಗಿ ಅಲ್ಲ. ಹಿಂದೂ ಮತ ಗಿಟ್ಟಿಸುವ ಅದರ ದುರುದ್ದೇಶದಿಂದಾಗಿ ಈ ಗಳಿಗೆಯಲ್ಲಿ ಬಿ.ಜೆ.ಪಿ.ಗೆ ಪ್ರೋತ್ಸಾಹ ನೀಡುವವರು ದೇಶದ ಜಾತ್ಯತೀತ ಸ್ವರೂಪಕ್ಕೇ ಧಕ್ಕೆ ತರುತ್ತಾರೆ.

ದಂಗೆಗಳು ನಡೆಯದಂತೆ, ಶಾಂತಿ ಕಾಪಾಡುವಂತೆ ಮಾಡಲು ಈಗ ಎಲ್ಲಾ ಜಾತ್ಯತೀತ ಶಕ್ತಿಗಳ ಐಕ್ಯತೆ ಅತ್ಯಗತ್ಯ ದೇಶದ ಪ್ರಜಾಪ್ರಭುತ್ವ ಆಂದೋಲನದ ಭವಿಷ್ಯವೇ ಇದರಲ್ಲಡಗಿದೆ.

'ಬಾಬ್ರಿ ಮಸೀದಿಯನ್ನು ಮುಸಲ್ಮಾನರು ತ್ಯಜಿಸಿದ್ದಾರೆಯೇ?"

ಬಾಬ್ರಿಮಸೀದೆಯನ್ನು ಬಹಳ ಹಿಂದೇನೇ ಮುಸ್ಲಿಮರು ತ್ಯಜಿಸಿದ್ದರು ಎಂದು ವಿ.ಹೆಚ್.ಪಿ. ಹಾಗೂ ಅಡ್ವಾಣಿ ಮತ್ತೆ ಮತ್ತೆ ಹೇಳುತ್ತಿರುವುದು ತಪ್ಪು ಹೇಳಿಕೆ.

ಮುಸ್ಲಿಮರೆಂದೂ ಆ ಮಸೀದೆಯನ್ನು ತ್ಯಜಿಸಲಿಲ್ಲ. ಡಿಸೆಂಬರ್ 22,1949ರವರೆಗೆ ನಮಾಜ್ ಹೇಳುತ್ತಿದ್ದೆವು ಎಂದು ಹೇಳುವ ಈಗಲೂ ಜೀವಿಸಿರುವ ಆ ಮಸೀದೆಯ ಆಗಿನ ಇಮಾಂ ಅಬ್ದುಲ್ ಗಫೂರ್‌ರವರೇ ಇದಕ್ಕೆ ಸಾಕ್ಷಿ (ಅವರಿಗೀಗ 93 ವರ್ಷ)." ನಾವು "ಮಸೀದೆಯೊಳಗೆ ನಮಾಜ್ ಮಾಡುತ್ತಿದ್ದೆವು. ಹಿಂದೂಗಳು ಚಬೂತರಾದಲ್ಲಿ ಪ್ರಾರ್ಥಿಸುತ್ತಿದ್ದರು. ನಾವೆಂದೂ ಜಗಳಾಡಿರಲಿಲ್ಲ. 1949ರ ಮೊದಲಿನ ಆ ದಿನಗಳನ್ನು ಮತ್ತೆ ತರಬೇಕೆಂಬುದು ನನ್ನ ಇಚ್ಛೆ" ಎನ್ನುತ್ತಾರೆ ಅವರು.

ಇದಲ್ಲದೆ ಜಿಲ್ಲಾ ಮಾಜಿಸ್ಟ್ರೇಟ್ ಕೆ.ಕೆ.ನಾಯರ್‌ರವರ ಸಂದೇಶದಲ್ಲಿ ಸಬ್ ಇನ್ಸ್‌ಪೆಕ್ಟರ್ ರಾಮ್‌ದುಬೇಯವರ ಎಫ್.ಐ.ಆರ್‌ನಲ್ಲಿ ಹಾಗೂ ಫೈಜಾಬಾದ್ ಡಿ.ಸಿ.ಜೆ.ಎನ್ ಉಗ್ರರವರು ನ್ಯಾಯಾಲಯದಲ್ಲಿ 1950 ಏಪ್ರಿಲ್ 24 ರಂದು ನೀಡಿದ ಹೇಳಿಕೆಯಲ್ಲಿ ಆ ಸ್ಥಳವನ್ನು ಮುಸ್ಲಿಮರು ನಮಾಜ್‌ಗಾಗಿ ಬಳಸುತ್ತಿದ್ದ ಮಸೀದೆ ಎಂದೇ ಹೇಳಲಾಗಿದೆ.......

1885ರಲ್ಲಿ ಜನ್ಮಸ್ಥಾನದ ಮಹಂತ ರಘಬೀರ್‌ದಾಸ್ ಒಂದು ದಾವೆ ಹಾಕಿದ್ದರು--ದೇವಸ್ಥಾನ ಕಟ್ಟಲು ಅನುಮತಿ ಕೋರಿ ದೇವಸ್ಥಾನ. ಕಟ್ಟುವುದು ಮೇಲೆ ಹೇಳಿದ ಚಬೂತರಾದಲ್ಲಿ. ಮಸೀದೆಯಲ್ಲಲ್ಲ. ಏಕೆಂದರೆ ಅವರ ಪ್ರಕಾರ "ಈ ಚಬೂತರವೇ ಶ್ರೀ ರಾಮಚಂದ್ರನ ಜನ್ಮಸ್ಥಳದ ಸೂಚಕ"

ಈಗಲೂ ಇದನ್ನೇ ಮಾಡಬಹುದು - ಚಬೂತರಾದಲ್ಲಿ, ಗರ್ಭಗುಡಿಯಿರುವ ಒಂದು ಸುಂದರ ದೇವಾಲಯ ಕಟ್ಟುವೆದು. ಮಸೀದೆಯನ್ನು ಒಂದು ರಾಷ್ಟ್ರೀಯ ಸ್ಮಾರಕ ಮಾಡುವುದು.

ಎ.ಜಿ.ನೂರಾಣಿ 29-10-90 'ಟೈಂಸ್ ಆಫ್ ಇಂಡಿಯಾದಲ್ಲಿ ಒದುಗರ ಪತ್ರ.

ಕೊನೆಗೂ ಎಡಪಕ್ಷಗಳು ಆಶಿಸಿದಂತೆ ದೇಶದ ಜಾತ್ಯತೀತ, ಪ್ರಜಾಪ್ರಭುತ್ವ ಶಕ್ತಿಗಳು ಕೋಮುವಾದಿಗಳ ಆಟವನ್ನು ಅರ್ಥಮಾಡಿಕೊಳ್ಳಲಾರಂಭಿಸಿದ್ದಾರೆ, ಬಿ.ಜೆ.ಪಿ.ಯ ಕೋಮು ರಾಜಕೀಯವನ್ನು ವಿರೋಧಿಸಿದ್ದಾರೆ, ಬಿ.ಜೆ.ಪಿ.ಯ ಕೋಮುರಾಜಕೀಯವನ್ನು ವಿರೋಧಿಸಲಾರಂಭಿಸಿದ್ದಾರೆ. ಪ್ರಧಾನಿಯವರಿಂದ ಹಿಡಿದು ವಿವಿಧ ಪತ್ರಕರ್ತರು, ಈ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಕಲೆಹಾಕಲಾಗಿದೆ.

ಶ್ರೀಯುತ ಅಡ್ವಾಣಿಯವರೇ, ದಯವಿಟ್ಟು ಗಮನಿಸಿ!"

ಶ್ರೀ ಅಡ್ವಾಣಿಯವರೇ ರಕ್ತಪಾತದ ಹೆದರಿಕೆಯಿಂದ ದೇಶದ ಸಾರ್ವಜನಿಕ ಮುಸ್ಲಿಂ ಅಭಿಪ್ರಾಯ ಬಾಬ್ರಿಮಸೀದೆಯನ್ನು ರಾಮಮಂದಿರದೊಡನೆ ಪರಸ್ಪರ ಅಸ್ಪೃಶ್ಯವಾಗಿಸಲು ದೂರ ಒಯ್ಯಬೇಕೆಂದು ನಿಮ್ಮ ಒತ್ತಾಯಕ್ಕೆ ಮಣಿಯಬಹುದು. ಈ ಹುಚ್ಚು ಆಡಂಬರವನ್ನು ಮಗ್ದರ ಸಾಮೂಹಿಕ ಹತ್ಯೆಯಿಲ್ಲದೆ, ಶಿಸ್ತಿನಬರ್ಬತೆಯಿಲ್ಲದೆ ಪೂರೈಸಲು ಸಾಧ್ಯವಾದರೂ ಕೂಡಾ ಅದರ ಫಲಿತಾಂಶ ಹಿಂದೂ ಧರ್ಮಕ್ಕೆ ವಿಜಯ ಎನ್ನಬಹುದೇ?

ಬಾಬ್ರ ಮಸೀದೆಯೆನ್ನುವ ಕಟ್ಟಡದ ಮುಖಮಂಟಪದ ಮೇಲೆ "ಸೀತಾ ಕೀ ರಸೋಯಿ" ಎಂಬ ಹೆಸರು ಕೆತ್ತಲಾಗಿದೆ ಹಿಂದೂ ಧರ್ಮದ ಅಧ್ಯಾತ್ಮಿಕರಿಗೆ ಒಂದರ್ಥದಲ್ಲಿ ಇದು ಸೀತೆಯ ಪ್ರತಿನಿಧಿಯೇ ಇಂತಹ ಕಟ್ಟಡವನ್ನು ಬೇರೆಡೆಗೆ ಎತ್ತಿ ಸಾಗಿಸುವುದೆಂದರೆ ಅದು ಅಜ್ಞಾನದ ಮೇಲೆ ಜ್ಞಾನದ ವಿಜಯದ ಬದಲು, ರಾವಣನ ಹಾರುವ ರಥದಲ್ಲಿ ಸೀತೆಯ ಅಪಹರಣವಾಗಲಾರದೇ ಇದರಿಂದ ನಿಮಗೆ ಮುಜುಗರವಾಗದೇ?

-ರಾಮಚಂದ್ರ ಗಾಂಧಿ
ಟೈಂಸ್ ಆಫ್ ಇಂಡಿಯಾ.

ದೇಶದ ಅಸ್ವಸ್ಥತೆಯ ಒಂದು ಆತಂಕಕಾರಿ ಲಕ್ಷಣ ಶ್ರೀಯುತ ಅಡ್ವಾಣಿಯವರ ಆಶ್ಚರ್ಯಕಾರಕ ಹೇಳಿಕೆ ರಾಮಜನ್ಮಭೂಮಿ - ಬಾಬ್ರಿಮಸೀದಿ ತಿಕ್ಕಾಟವೇ ಕಾರಣವೆಂದು ನೇರವಾಗಿ ಹೇಳಬಹುದಾದ ಭಯಾನಕ ಕೋಮು ಹತ್ಯಾಕಾಂಡ ಕನಿಷ್ಠ ನಾಲ್ಕು ರಾಜ್ಯಗಳಲ್ಲಿ ನಡೆಯುತ್ತಿರುವಾಗ ಅವರು ತಮ್ಮ ರಥಯಾತ್ರೆ ಕೋಮು ಶಾಂತಿ, ಸೌಹಾರ್ದಕ್ಕೆ ಪ್ರೋತ್ಸಾಹ ನೀಡುತ್ತದೆ ಎಂದು ಸಾರುತ್ತಿದ್ದಾರೆ! ಅತ್ಯಂತ ಆರ್‌ವೆಲ್ ಕಾದಂಬರಿಗಳು ನಿರ್ದಯಿ ಪಾತ್ರ ಕೂಡಾ ಹೀಗೆ ಹೇಳುವಾಗ ನಾಚಿಕೊಳ್ಳಬಹುದು. ಆದರೆ ಅಡ್ವಾಣಿಯವರಿಗೆ ಹಾಗಾಗುವುದಿಲ್ಲ!

-ಇಂದರ್ ಮಲ್ಹೋತ್ರಾ
20.10.90

'ಶಿಲಾನ್ಯಾಸ ' ಸಮಾರಂಭ ದ ಸಮಸ್ಯೆ ಕೋಮುವಾದ ಮತ್ತು ಜಾತ್ಯಾತೀತತೆಯ ನಡುವಿನ ಬಹಿರಂಗ ಹೋರಾಟ ಎಂಬುದನ್ನು ಚುನಾವಣಾ ವರ್ಷದಲ್ಲಿ ಕಾಂಗ್ರೆಸ್ ಸೇರಿದಂತೆ ರಾಜಕೀಯ ಪಕ್ಷಗಳು ನಿರ್ಲಕ್ಷಿಸಿದವು. ಚುನಾವಣಾ ಕಾರಣಕ್ಕಾಗಿ ಯಾರೂ ಈ ಸವಾಲನ್ನು ಸ್ವೀಕರಿಸಲಿಲ್ಲ. ಚುನಾವಣಾ ಲೆಕ್ಕಾಚಾರದ ನಡುವೆ ಕಾಂಗ್ರೆಸ್ ಮುಖಂಡತ್ವ ಜಾತ್ಯತೀತತೆ ಸೋತರೆ ಕಾಂಗ್ರೆಸ್ ಗೆಲ್ಲುವುದಿಲ್ಲ ಜಾತ್ಯಾತೀತತೆ ದುರ್ಬಲಗೊಂಡರೆ ಕಾಂಗ್ರೆಸ್ ವಿಜಯ ಅರ್ಥಹೀನ ಎಂದು ಮರೆತು ಬಿಟ್ಟಿತು.

-ದಿವಂಗತ ಕಮಲಾಪತಿ ತ್ರಿಪಾಠಿ
(ಹಿರಿಯ ಕಾಂಗ್ರೆಸ್ ಮುಖಂಡ)
ತನ್ನ ಕೊನೆಯ ಲೇಖನದಲ್ಲಿ.

ರಥಯಾತ್ರೆಯ ಪಡೆಗೆ ಪ್ರತಿದಿನ ಪೆಟ್ರೋಲ್ ಡೀಸಲ್ ಖರ್ಚೇ ಕನಿಷ್ಠ 65 ಸಾವಿರ ರೂ ಎಂದು ಅಂದಾಜು ಮಾಡಲಾಗಿದೆ. ಅಯೋಧ್ಯೆಯವರೆಗೆ ಇದು ಸಾಗಿದ್ದರೆ ಕೇವಲ ಪೆಟ್ರೋಲ್ ಡೀಸಲ್ ಗಾಗಿಯೇ 20ಲಕ್ಷ ರೂ ಖರ್ಚಾಗುತ್ತಿತ್ತು. ರಥಯಾತ್ರೆಯ ಒಟ್ಟು ಖರ್ಚು ಒಂದು ಕೋಟಿ ರೂ ತಲುಪಿದೆ ಎಂದು ತಿಳಿದು ಬಂದಿದೆ.

-ಪ್ರಸೂನ್ ಸೋನ್‌ವಾಲ್ಕರ್
ಟೈಂಸ್ ಆಫ್ ಇಂಡಿಯಾ, ಪುಟ 8 ಕ್ಕೆ
28-10-1990

" ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮಸಕ್ಕರೆ"

"ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ, ವಿಠಲನೆಂಬೋ ತುಪ್ಪವ ಬೆರೆಸಿ...."ಬಾಯಿ ಚಪ್ಪರಿಸಲು ಬಿ.ಜೆ.ಪಿ. ಯೋಚಿಸಿದೆ. ಎಷ್ಟು ಸಾವಿರ ಜನ ಬಲಿಯಾದರೂ ಸರಿ ಅದರ ರಕ್ತದ ಕಾಲುವೆಯಲ್ಲಿ ಈಜಿ ಲೂಟಿ ದಾಳಿಗೊಳಗಾದ ಸಾವಿರಾರು ಕೊರಲುಗಳ ಆಕ್ರಂದನಗಳ ಕಹಳೆಗಳ ನಡುವೆ ಅಧಿಕಾರದ ಗದ್ದುಗೆಯೇರಲು ಹವಣಿಸುತ್ತಿದ್ದಾರೆ ಬಿ.ಜೆ.ಪಿ.ಯ ಜನ. ಹೀಗಾಗಿಯೇ ದೇಶದ ಏಕತೆ ಛಿದ್ರಗೊಳಿಸಲು ರಾಮನಾಮ ಎಂಬ ಪಾಯಸವನ್ನು ಹಲವಾರು ವರ್ಷಗಳಿಂದ ತಯಾರು ಮಾಡಿ ಅದಕ್ಕೆ ಕೃಷ್ಣನೆಂಬ (ಲಾಲ್ 'ಕೃಷ್ಣ' ಅಡ್ವಾನಿ) ಸಕ್ಕರೆ ಬೆರೆಸಿ, ಈಗ ಅಟಲ (ವಾಜಪೇಯಿ)ನೆಂಬ ತುಪ್ಪವನ್ನು ಬೆರೆಸಿ ನಿಂತಿದ್ದಾರೆ. ಈ ಪಾಯಸ ಕುಡಿದ ಭಾರತೀಯರು- ರಾತ್ರೋ ರಾತ್ರಿ ಅಖಂಡ ಹಿಂದೂಭಕ್ತರಾಗಿ ಬಿ.ಜೆ.ಪಿ ಗೆ ಮತ ನೀಡುತ್ತಾರೆ. ಹೀಗಾಗಿ ರಥಯಾತ್ರೆ ಎಂಬ ಹೆಸರಿನಲ್ಲಿ ಹಿಂದೂಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಬಿ.ಜೆ.ಪಿ. ಪ್ರಯತ್ನಿಸುತ್ತಿದೆ. ಈ ಕಾರಣಕ್ಕಾಗಿಯೇ ರಥಯಾತ್ರೆಯ ರಥದ ಮೇಲೆ ಬಿ.ಜೆ.ಪಿ. ಚುನಾವಣಾ ಚಿಹ್ನೆ 'ಕಮಲ' ದೊಡ್ಡದಾಗಿ ತಲೆಯೆತ್ತಿ ನಿಂತಿದೆ. ಇದು ಸಾವಿರಾರು ಕಮಲಗಳು ಅರಳಲಿ ಎಂಬ ಬಿ.ಜೆ.ಪಿ.ಯ ಚುನಾವಣಾ ಕುತಂತ್ರ ಎಂದು ಆಂಗ್ಲ ಪತ್ರಿಕೆಗಳು ಟೀಕಿಸಿವೆ.

ರಾಮ ನ್ಯಾಯಕ್ಕಾಗಿ ಹೋರಾಡಲು ಲಂಕೆಗೆ ಹೋದ. ಆದರೆ ಅತ ಹೋಗುವಾಗ ತನ್ನ ಚುನಾವಣಾ ಚಿಹ್ನೆಯನ್ನೇನೂ ಹೊತ್ತೊಯ್ದಲಿಲ್ಲ, ಎಂದು ಪ್ರಧಾನಿ ವಿ.ಪಿ. ಸಿಂಗ್ ಟೀಕಿಸಿದ್ದಾರೆ.

"ಈ ರಥಯಾತ್ರೆಗೆ ಇಡೀ ಭಾರತದ ಜನತೆ ಬಂದಿದ್ದಾರೆ. ಎಲ್ಲೆಡೆಯೂ ಬೆಂಬಲ ನೀಡಿದ್ದಾರೆ. ಈ ರಥಯಾತ್ರೆಯೊಂದಿಗೆ ಇಡೀ ದೇಶವಿದೆ" ಎಂದು ಬಿಜೆಪಿ ಪುನರುಚ್ಚರಿಸುತ್ತಲೇ ಬಂದಿದೆ. ಇದು ಹೌದೆ? ಈ ಪ್ರಶ್ನೆಗೆ ಆಂಗ್ಲ ವಾರ ಪತ್ರಿಕೆ 'ದಿವೀಕ್' ನಡೆಸಿದ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಜನತೆ ಬಿಜೆಪಿಯ ಮುಖಕ್ಕೆ ರಾಚುವ ಉತ್ತರ ನೀಡಿದ್ದಾರೆ.

'ದಿವೀಕ್' ದೆಹಲಿ ಹಾಗೂ ಲಖನೌನಲ್ಲಿ ಮಹಿಳೆಯರನ್ನು ಸೇರಿದಂತೆ ಹಲವರನ್ನು ಭೇಟಿ ಮಾಡಿ ರಥಯಾತ್ರೆ ಕೋಮು ಸೌಹಾರ್ದತೆ ಹಾಳು ಮಾಡುತ್ತಿದೆಯೆ? ಬಿಜೆಪಿ ಕೋಮುವಾದಿಯೆ ಎಂಬುದನ್ನೂ ಒಳಗೊಂಡಂತೆ ಹಲವು ಪ್ರಶ್ನೆಗಳನ್ನು ಮುಂದಿಟ್ಟಿತು.

ರಥಯಾತ್ರೆ ಕೋಮು ಸೌಹಾರ್ದತೆ ಹಾಳು ಮಾಡುತ್ತಿದೆಯೆ ಎಂಬುದಕ್ಕೆ ಹೌದು ಹಾಳು ಮಾಡುತ್ತದೆ ಎಂದು ದೆಹಲಿಯ ಶೇ. 52 ಹಾಗೂ ಲಖನೌನ ಶೇ 41 ಮಂದಿ ಉತ್ತರಿಸಿದ್ದಾರೆ. ಇಲ್ಲ, ಹಾಳು ಮಾಡಿಲ್ಲ ಎಂಬುದರ ಸಂಖ್ಯೆ ಶೇ 45 ಹಾಗೂ ಶೇ 52.

ಬಿಜೆಪಿ ಕೋಮುವಾದಿಯೆ? ಎಂಬ ಪ್ರಶ್ನೆಗೆ ದೆಹಲಿಯ ಶೇ.51 ಲಖನೌನ ಶೇ 39 ಮಂದಿ ಹೌದು ಎಂದಿದ್ದಾರೆ ಇಲ್ಲ ಎಂದವರ ಸಂಖ್ಯೆ ಶೇ37 ಹಾಗೂ ಶೇ49.

ದೇಶಾದ್ಯಂತ ಜನಾಭಿಪ್ರಾಯ ಈ ದಿಸೆಯಲ್ಲಿ ಸಾಗುತ್ತಿದೆ ಎಂಬುದನ್ನು ಇದು ಸಾರುತ್ತದೆ. ಮುಗ್ಧ ಜನರ ಭಕ್ತಿಯನ್ನು ಚುನಾವಣೆಯ ಸ್ವಾರ್ಥಕ್ಕಾಗಿ ಬಳಸುವ ರಾಜಕೀಯವನ್ನು, ಧರ್ಮವನ್ನು ಅತ್ಯಂತ ಅನೈತಿಕವಾಗಿ ಬಳಸುವ ಸ್ಥಿತಿಗಾಗಿ [illegible] ಜನತೆ ಉತ್ತರ ನೀಡಬೇಕಾದರೆ ಎಡ ಮತ್ತು ಜಾತ್ಯತೀತ ಶಕ್ತಿಗಳು ತೀವ್ರ ಆಂದೋಲನ ಕೈಗೊಳ್ಳಬೇಕಾಗಿದೆ ಎಂಬುದನ್ನು ಇದು ಮುಖ್ಯವಾಗಿ [illegible] ಜನಾಭಿಪ್ರಾಯ ಸೂಚಿಸುತ್ತದೆ.

ಕೋಮುಸೌಹಾರ್ದತೆಗೆ ಜನ ಸಾಗರದ ತೀರ್ಪು!

ಉತ್ತರಪ್ರದೇಶ ರಾಜಧಾನಿ ಲಕ್ನೋದಲ್ಲಿ ಹಲವಾರು ಮೈಲಿ ವಿಸ್ತಾರದ ಪುತಾತ್ತರ ಮೈದಾನ. ಲಕ್ಷಾಂತರ ಜನಸ್ತೋಮ ಅಲ್ಲಿ. ಮೈದಾನದ ಹೊರಗೂ ಸು ಸುಮಾರು ಅಷ್ಟೇ ಜನರು ಅಕ್ಟೋಬರ್ 12 ರಂದು ಕಂಡು ಬಂದ ಈ ದೃಶ್ಯ ಲಕ್ನೊ ಇತಿಹಾಸದಲ್ಲೆ ಅಪೂರ್ವವಾದುದಾಗಿತ್ತು.

ಮಸೀದಿಯನ್ನು ಕೆಡವಿ ಅಥವಾ ಸ್ಥಳಾಂತರಿಸಿ ದೇವಾಲಯ ನಿರ್ಮಾಣ ಮಾಡುವುದನ್ನು ತಡೆದು ಸಂವಿಧಾನವನ್ನು ರಕ್ಷಿಸಿ. ಇದು ನೆರೆದ ಜನರು ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ನೀಡಿದ ಆಜ್ಞೆಯಾಗಿತ್ತು. ಅದು ಜನತಾ ತೀರ್ಪಾಗಿತ್ತು.

ದೇಶದಲ್ಲಿ ಆತಂಕದ ವಾತಾವರಣ ಮೂಡಿಸಿರುವ ರಾಮಜನ್ಮಭೂಮಿ ಬಾಬರಿ ಮಸೀದಿ ವಿವಾದದ ಹಿನ್ನೆಲೆಯಲ್ಲಿ 'ಉತ್ತರ ಪ್ರದೇಶದ ಕೋಮುವಾದ ವಿರೋಧಿ ಹೋರಾಟ ಸಮಿತಿ' ಈ ಬೃಹತ್ ರ್‍ಯಾಲಿಯನ್ನು ಸಂಘಟಿಸಿತ್ತು. ಕೋಮುವಾದದ ವಿರುದ್ಧ ರಾಜ್ಯದಲ್ಲಿ ತಿಂಗಳುಗಟ್ಟಲೆ ಕಾಲ ನಡೆಸಿದ ಚಳವಳಿಯ ಕೊನೆಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ರ್‍ಯಾಲಿ ಬೃಹತ್ತಾಗಿತ್ತು ಎನ್ನುವುದರ ಜತೆಗೆ ಅದರಲ್ಲಿ ಭಾಗವಹಿಸಿದವರು ಯಾರೆಂಬುದು ಕೂಡ ಅಷ್ಟೇ ಪ್ರಾಮುಖ್ಯವನ್ನು ಪಡೆದಿದೆ. ಜನ ಜೀವನದ ಎಲ್ಲಾ ವಿಭಾಗಗಳಿಂದ, ಎಲ್ಲಾ ಧರ್ಮದ ಜನರು ಪಾಲ್ಗೊಂಡಿದ್ದರು. ಬಡಕಲು ದೇಹದ, ಹರಕು ಬಟ್ಟೆಧಾರಿ ರೈತರು ಮತ್ತು ಕೃಷಿ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಇವರೇ ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ತುಳಿತಕ್ಕೊಳಗಾದ ಜನರು ಭಾಗವಹಿಸಿದ್ದೇ ವೈಶಿಷ್ಟ್ಯವಾಗಿತ್ತು.

ಸಂಘಟಕರ ನಿರೀಕ್ಷೆಯನ್ನು ಮೀರಿದ ರ್‍ಯಾಲಿ ಇದಾಗಿತ್ತು. ತಮ್ಮ ಜೀವನಕ್ಕೆ ಮಾರಕವಾದ ಕೋಮುವಾದ, ಜಾತೀಯತೆ ಬಗ್ಗೆ ಜನಸಾಮಾನ್ಯರು ಹೊಂದಿರುವ ವಿರೋಧವೇ ಈ ರ್‍ಯಾಲಿಯ ಯಶಸ್ಸಿನ ಗುಟ್ಟಾಗಿದೆ. ಆರ್.ಎಸ್.ಎಸ್. ಮತ್ತು ವಿಶ್ವ ಹಿಂದೂ ಪರಿಷತ್ ಇಲ್ಲಸಲ್ಲದ ಸುದ್ದಿ ಹರಡಿ ರ್‍ಯಾಲಿ ಹಾಳು ಮಾಡಲು ನಡೆಸಿದ ಪ್ರಯತ್ನಗಳು ಮಣ್ಣು ಮುಕ್ಕಿದವು.

ಮದರಾಸಿನಲ್ಲಿ ಸೆಪ್ಟೆಂಬರ್ 22 ರಂದು ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ನಿರ್ಣಯಕ್ಕೆ ಬೆಂಬಲ ನೀಡಲು ಮತ್ತು ಅಯೋಧ್ಯೆ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಲು ಅಥವಾ ನ್ಯಾಯಾಲಯದ ತೀರ್ಪಿಗೆ ಬದ್ಧರಾಗಿರುವಂತೆ ವಿಶ್ವ ಹಿಂದೂ ಪರಿಷತ್, ಭಜರಂಗದಳ, ಶಿವಸೇನೆ, ಬಿ.ಜೆ.ಪಿ.ಯನ್ನು ವಿನಂತಿಸುವ ನಿರ್ಣಯಕ್ಕೆ ಒಮ್ಮತ ಸೂಚಿಸಲು ಲಕ್ಷಾಂತರ ಕೈಗಳು ಮೇಲೆದ್ದವು.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು, ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಹರಿಕಿಶನ್‌ಸಿಂಗ್ ಸುರ್ಜಿತ್, ಪಕ್ಷದ ರಾಜ್ಯ ಕಾರ್ಯದರ್ಶಿ ರಾಮ್ ಸುಮೇರ್ ಯಾದವ್, ಸಂಸತ್ ಸದಸ್ಯೆ ಸುಭಾಷಿಣಿ ಅಲಿ, ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತ, ಸಿಪಿಐನ ಎ.ಬಿ. ಬರ್ಧಾನ್, ಜಗದೀಶ್ ನಾರಾಯಣ ತ್ರಿಪಾಠಿ ಮತ್ತು ಅತುಲ್‌ಕುಮಾರ್ ಅಂಜನ್, ಕೇಂದ್ರ ಸಚಿವರಾದ ಅಜಿತ್‌ಸಿಂಗ್, ಕೆ.ಪಿ. ಉಣ್ಣಿಕೃಷ್ಣನ್, ಜನೇಶ್ವರ ಮಿಶ್ರಾ ಮತ್ತು ಅನಿಲ್‌ಶಾಸ್ತ್ರಿ, ಉತ್ತರ ಪ್ರದೇಶ ಮುಖ್ಯ ಮಂತ್ರಿ ಮುಲಾಯಂ ಸಿಂಗ್ ಯಾದವ್, ಜನತಾದಳದ ಸಂಜಯ ಸಿಂಗ್, ಆರ್.ಎಸ್.ಪಿ.ಯ ನಾನಿ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್‌ನ ಚಿತ್ತ ಬಸು, ಬಿ.ಎಸ್.ಪಿ. ನಾಯಕ ಕಾಶಿರಾಮ್, ಯೋಜನಾ ಆಯೋಗದ ಸದಸ್ಯ ರಹಮತುಲ್ಲಾ ಅನ್ಸಾರಿ, ಮಹಿಳಾ ಜನತಾದಳದ ಪ್ರಮೀಳಾ ದಂಡವತೆ, ಜನತಾದಳದ ಹಿರಿಯ ನಾಯಕ ಚಂದ್ರಶೇಖರ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಪ್ರಖ್ಯಾತ ಉರ್ದು ಕವಿ ಕೈಫಿ ಆಜ್ಮಿ ಕೂಡ ಭಾಷಣ ಮಾಡಿದರು.

ಕೋಟಿಗೂ ಮಿಕ್ಕಿದ ಜನರ ಭಾಗವಹಿಸುವಿಕೆ

ಈಗಾಗಲೇ ಹೇಳಿರುವಂತೆ ಅಕ್ಟೋಬರ್ 12 ರ ಲಕ್ನೊ ರ್‍ಯಾಲಿ 2 ತಿಂಗಳ ಸತತ ಆಂದೋಲನದ ಕ್ಲೈಮಾಕ್ಸ್. ಅದಕ್ಕೆ ಮುನ್ನ ರಾಜ್ಯಾದ್ಯಂತ ಸುಮಾರು 50 ಪ್ರಾದೇಶಿಕ ಮತ್ತು ಜಿಲ್ಲಾ ಮಟ್ಟದ ರ್‍ಯಾಲಿಗಳನ್ನು ನಡೆಸಲಾಯಿತು. ಪ್ರತಿಯೊಂದರಲ್ಲೂ ಸರಾಸರಿ ಒಂದರಿಂದ ಮೂರು ಲಕ್ಷ ಜನರು ಭಾಗವಹಿಸಿದ್ದು ಒಟ್ಟು ಸುಮಾರು ಒಂದು ಕೋಟಿಗೂ ಮಿಕ್ಕಿದ ಜನರಿಗೆ ನೇರವಾಗಿ ಸಂದೇಶ ತಲುಪಿಸಲಾಗಿದೆ.

ಕಾಂಗ್ರೆ ಬಿಜೆಪಿ ಭಾಯಿ ಭಾಯಿ!

ಇತ್ತ, ಎಡ ಪ್ರಜಾಸತ್ತಾತ್ಮಕ ಜಾತ್ಯತೀತ ಶಕ್ತಿಗಳು ಕೋಮುವಾದ ವಿರುದ್ಧ ತೀವ್ರ ಸಂಘರ್ಷದಲ್ಲಿ ತೊಡಗಿದ್ದರೆ, ಅತ್ತ ಈ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಪಕ್ಷದ ವಾರಸುದಾರ ತಾನೆಂದು ಟಾಂಟಾಂ ಮಾಡುತ್ತಿರುವ ಕಾಂಗ್ರೆಸ್(ಐ) ಉತ್ತರ ಪ್ರದೇಶದಲ್ಲಿ ಕೋಮುವಾದಿ ಶಕ್ತಿಗಳೊಂದಿಗೆ ಸೇರಿಕೊಂಡು ಕೋಮುವಾದ ವಿರೋಧಿ ಚಳುವಳಿಯನ್ನು ವಿಫಲಗೊಳಿಸಲು ಯತ್ನಿಸಿತು. ಅದಕ್ಕೆ ಒಂದು ಉದಾಹರಣೆ: ವಾರಣಾಸಿ

ವಾರಣಾಸಿಯ ವಿಶ್ವನಾಥ ದೇವಾಲಯವನ್ನು ದೇವಿ ದ್ರೋಹಿಗಳಿಂದ ವಿಮೋಚನೆಗೊಳಿಸುವುದು ಆರೆಸ್ಸೆಸ್ ವಿಶ್ವ ಹಿಂದೂ ಪರಿಷತ್ ಬಿಜೆಪಿ ಕೂಟದ ಕಾರ್ಯಕ್ರಮದಲ್ಲಿ ಸೇರಿದೆ. ಒಂದು ಪ್ರಮುಖ ಧಾರ್ಮಿಕ ಕ್ಷೇತ್ರವಾದ ಇಲ್ಲಿ ನಡೆಯಲಿದ್ದ ಕೋಮು ಸೌಹಾರ್ದತಾ ರ್‍ಯಾಲಿ ವಿಫಲಗೊಳಿಸಲು ಕಾಂಗ್ರೆ ಬಿಜೆಪಿ ಸೇರಿಕೊಂಡು ರ್‍ಯಾಲಿಯ ದಿನ ಬನಾರಸ್ ಬಂದ್‌ಗೆ ಕರೆ ಕೊಟ್ಟವು. ರ್‍ಯಾಲಿಯನ್ನು ಬಹಿಷ್ಕರಿಸಲೂ ಅವು ಕರೆನೀಡಿದವು. ಭಾಗವಹಿಸಿದವರು ತೀವ್ರ ಪರಿಣಾಮ ಎದುರಿಸಬೇಕಾಗಬಹುದು ಎನ್ನುವುದು ಅವರ ಬೆದರಿಕೆಯಾಗಿತ್ತು. ಈ ಎಲ್ಲಕ್ಕೆ ಅವರು ಮೀಸಲಾತಿ ವಿರುದ್ಧ ಚಳವಳಿ ನಡೆಸುತ್ತಿರುವ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲು ಯತ್ನಿಸಿದರು. ಆದರೂ ಈ ಅಪವಿತ್ರ ಮೈತ್ರಿಕೂಟದ ಆಟ ಸಾಗಲಿಲ್ಲ. ಸುಮಾರು 3 ಲಕ್ಷ ಜನರು ರ್‍ಯಾಲಿಯಲ್ಲಿ ಭಾಗವಹಿಸಿದರು.

ಕಾಂಗ್ರೆಸ್ ಆಡಳಿತವಿದ್ದಾಗ ಹಲವಾರು ಕೋಮು ಗಲಭೆಗಳು ನಡೆದಿದ್ದ ಮೌವ್‌ನಾಥ ಭಂಜನ್‌ನಲ್ಲಿ ಕೋಮು ಶಕ್ತಿಗಳು ನಡೆಸಿದ ಪ್ರಯತ್ನಗಳು ವಿಫಲವಾಗಿ ರ್‍ಯಾಲಿ ಯಶಸ್ವಿಯಾಯಿತು.

ಬಿಹಾರದಲ್ಲಿ ಮೀಸಲಾತಿ ವಿರೋಧಿ ಚಳವಳಿಯಲ್ಲಿ ತೊಡಗಿರುವ ಕಾಂಗ್ರೆ ಮತ್ತು ಬಿಜೆಪಿಯ ಸಾಮೂಹಿಕ ಸಂಘಟನೆಗಳು ಅ. 8 ರಂದು ಜನತಾದಳ ಪಾಟ್ನಾದಲ್ಲಿ ಏರ್ಪಡಿಸಿದ್ದ ಸದ್ಭಾವನಾ ರ್‍ಯಾಲಿಯನ್ನು ಹಾಳುಗೆಡವಲು ಯತ್ನಿಸಿದವು. ಜನತಾದಳದ ಅನೇಕ ಶಾಸಕರನ್ನು ಹೊಡೆದರು.

ಸಿ.ಪಿ.ಐ(ಎಂ) ಶಾಸಕನ ಹತ್ಯೆಗೆ ಯತ್ನ

ಬಿಹಾರದ ಬೇಗುಸರ್‍ಯಾನಲ್ಲಿ ಸ್ಥಳೀಯ ಸಿ.ಪಿ.ಐ(ಎಂ) ಶಾಸಕ ಬಸುದೇವಸಿಂಗ್‌ರನ್ನು ಅಪಹರಿಸಿ ಕೊಲ್ಲಲು ಕಾಂಗ್ರೆ ಗೂಂಡಾಗಳು ಪ್ರಯತ್ನಿಸಿದ ವಿಚಾರ ಬಹಿರಂಗಗೊಂಡಿದೆ.

ಅಕ್ಟೋಬರ್ 12 ರಂದು ದಿಲ್ಲಿಯಲ್ಲಿ ಕೋಮು ಸೌಹಾರ್ದತೆ ಮತ್ತು ಶಾಂತಿ ಸಮಾವೇಶ ಯಶಸ್ವಿಯಾಗಿ ನಡೆಯಿತು. ಐವಾನ್-ಎ-ಘಾಲಿಬ್ ಹಾಲ್ ಜನರಿಂದ ತುಂಬಿ ತುಳುಕಿತ್ತು. ಸಿ.ಪಿ.ಐ(ಎಂ), ಸಿ.ಪಿ.ಐ. ಜನತಾದಳ, ಕಾಂಗ್ರೆಸ್(ಎಸ್), ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ಇದನ್ನು ಏರ್ಪಡಿಸಿದ್ದವು.

'ಕರಸೇವೆ'ಗೆ ಕಾಂಗ್ರೆ ಎಂ.ಪಿ.

ಕೋಮುವಾದಕ್ಕೆ ಸಂಬಂಧಿಸಿ ಕಾಂಗ್ರೆಸ್(ಐ)ನ ದ್ವಂದ್ವವನ್ನು ಹಲವು ಸಂದರ್ಭಗಳಲ್ಲಿ ಕಂಡಿದ್ದೇವೆ. ಅ. 24 ರ ಬಿಜೆಪಿ ಕೃಪಾಪೋಷಿತ 'ಬಂದ್' ಸಂದರ್ಭದಲ್ಲಿಯೂ ಹಲವೆಡೆ ಅದು ಎದ್ದು ಕಂಡಿದೆ. ಅದರ ದೌರ್ಬಲ್ಯದ ಸಂಕೇತವಾಗಿ ಒಂದು ಪ್ರಕರಣ ಈಗ ನಮ್ಮೆದುರು ಇದೆ.

ಅಯೋಧ್ಯೆಯ ವಿವಾದಾತ್ಮಕ ಸ್ಥಳದಲ್ಲಿರುವ ಮಸೀದಿ ಕೆಡವಿ ಶ್ರೀರಾಮ ಮಂದಿರ ಕಟ್ಟಲು ಕರಸೇವಕರು ಸಿದ್ಧರಾಗಿದ್ದರು. ಬಿಜೆಪಿ ಆರ್‌ಎಸ್‌ಎಸ್ ವಿಎಚ್‌ಪಿ ಭಜರಂಗದಳ ಮೊದಲಾದ ಕೋಮುವಾದಿ ಸಂಘಟನೆಗಳ ಜತೆ ಕಾಂಗ್ರೆನ ಒಬ್ಬ ಸಾಮಾನ್ಯ ಕಾರ್ಯಕರ್ತನಲ್ಲ, ಸಂಸತ್ ಸದಸ್ಯನೇ ಸೇರಿಕೊಂಡಿದ್ದರು. ನಾಗಪುರದ ಕಾಂಗ್ರೆ ಲೋಕಸಭಾ ಸದಸ್ಯ ಬನ್ವಾರಿಲಾಲ್ ಪುರೋಹಿತ್ ಕರಸೇವೆಗೆ ಹೊರಟ ಆರ್‌ಎಸ್‌ಎಸ್ ಕಾರ್ಯಕರ್ತರ ತಂಡಕ್ಕೆ ನಾಯಕ ಆಗಿದ್ದರು.

ಅನಂತರ ಈಗ ಈ ಸಂಸದಿಕರನ್ನು ಪಕ್ಷದಿಂದ 'ಅಮಾನತು' ಮಾಡಲಾಗಿದೆಯೆನ್ನುವುದಷ್ಟೆ ಕಾಂಗ್ರೆಮಟ್ಟಿಗಿನ ಸಮಾಧಾನಕರ ಅಂಶವಾಗಿದೆ.

ಸಾಂಸ್ಥಿಕ ಚುನಾವಣೆಗಳ ಮುಂದೂಡಿಕೆ

ವಿಶೇಷ ರಾಜಕೀಯ ಬೆಳವಣಿಗೆಗಳು ಇರುವಾಗ ಯಾವುದೇ ದೇಶದಲ್ಲೇ ಆಗಲಿ ಪಕ್ಷ, ಸಂಘ ಸಂಸ್ಥೆಗಳ ಸಭೆ ಸಮ್ಮೇಳನ, ಚುನಾವಣೆಗಳನ್ನು ಕಾರ್ಯಕ್ರಮಗಳನ್ನು ಮುಂದೂಡುವುದೇ ಮೊದಲಾದವು ಸಾಮಾನ್ಯ ಪ್ರಕ್ರಿಯೆ. ಭಾರತದಲ್ಲಿ ಈಗ ಕಾಂಗ್ರೆಸ್(ಐ) ಗಂತೂ ಸದ್ಯದ ಪರಿಸ್ಥಿತಿ 'ರೋಗಿ ಬಯಸಿದ್ದೂ ಹಾಲು..............'.. ಎಂಬಂತೆ ಪರಿವರ್ತಿತವಾಗಿದೆ. ಸುಮಾರು ಎರಡು ದಶಕಗಳಿಂದ ಒಂದಲ್ಲ ಒಂದು ನೆವ ಹೇಳಿ ಮುಂದೂಡುತ್ತ ಬಂದಿರುವ ಸಾಂಸ್ಥಿಕ ಚುನಾವಣೆಗಳನ್ನು ಕಾಂಗ್ರೆಸ್(ಐ) ಒಂದು ತಿಂಗಳು ಮುಂದೂಡಿದೆ.

ಚುನಾವಣೆಗಳನ್ನು ಮುಂದೂಡುವ ಬಗ್ಗೆ ಕಾಂಗ್ರೆ ಅಧ್ಯಕ್ಷ ರಾಜೀವಗಾಂಧಿ ನಿರ್ಧಾರಕ್ಕೆ ಕೈ ಗೊಂಡಿದ್ದಾರೆ.

ಅತ್ಯಾಚಾರ ಯತ್ನ ದೇಶಂ ಶಾಸಕ ಅಮಾನತು

ಆಂಧ್ರಪ್ರದೇಶದ ತೆಲುಗುದೇಶಂ ಶಾಸಕ ಕೆ. ಗಂಗಾಧರ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಲಾಗಿದೆ.ಧರ್ಪಳ್ಳಿ ಮಂಡಲ ತೆಲುಗು ಮಹಿಳಾ ಸಂಘದ ಕಾರ್ಯದರ್ಶಿ ವಿಜಯಾ ಅವರ ಮೇಲೆ ಅ. 22 ರಂದು ಅತ್ಯಾಚಾರ ನಡೆಸಲು ಯತ್ನಿಸಿದ ಆರೋಪ ಗಂಗಾಧರ ಮತ್ತು ಮಂಡಲ ಉಪಾಧ್ಯಕ್ಷ ರಘುವೀರ ರೆಡ್ಡಿ ಎಂಬುವರ ಮೇಲಿತ್ತು. ರೆಡ್ಡಿಯನ್ನು ಬಂಧಿಸಲಾಗಿದ್ದು, ತಲೆ ಮರೆಸಿಕೊಂಡಿರುವ ಶಾಸಕನ ಬಂಧನಕ್ಕೆ ವಾರಂಟ್ ಹೊರಡಿಸಲಾಗಿದೆ.

ವಿದ್ಯಾಭ್ಯಾಸದ ಮುಂದುವರಿಕೆಯ ಖಾತರಿ: ಆಂದೋಲನಗಳಿಗಷ್ಟೇ ಮುಖ್ಯ

"..ಎರ್ನಾಕುಲಂ ಪ್ರಯೋಗದಿಂದ ಸ್ಫೂರ್ತಿಗೊಂಡು ಈಗ ಪೂರ್ಣ ಕೇರಳ ರಾಜ್ಯವನ್ನು ಸಾಕ್ಷರತಾ ಆಂದೋಲನಕ್ಕೆ ಅಳವಡಿಸಲಾಗಿದೆ. ಎಲ್ಲಾ ವಿಭಾಗದ ಬೆಂಬಲ ಪಡೆದುಕೊಳ್ಳುವ ಪ್ರಯತ್ನ ಬಹುತೇಕ ಯಶಸ್ವಿಯಾಗಿದೆ. ಹೀಗಾದ್ದಾಗ್ಯೂ ಈಗ ಸಾಕ್ಷರತೆಯ ಸೌಲಭ್ಯ ಪಡೆಯುತ್ತಿರುವ ಹಾಗೂ ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗುತ್ತಿರುವ ಜನರಿಗೆ ವಿದ್ಯಾಭ್ಯಾಸ ಮುಂದುವರಿಕೆಯ ಸೌಲಭ್ಯ ಒದಗಿಸುವುದು ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ನಾವು ಪ್ರಯತ್ನಿಸುತ್ತಿರುವೆವು....." ಎಂದು ಕೇರಳ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿಯ ಸದಸ್ಯರಾದ ರಾಮಕೃಷ್ಣನ್ ಅಭಿಪ್ರಾಯ ಪಟ್ಟರು, ಅವರು ಇತ್ತೀಚೆಗೆ ಮಂಗಳೂರಿನ ಪುರಭವನದಲ್ಲಿ ದ.ಕ. ಜಿಲ್ಲಾ ಡಿವೈಎಫ್ಐ ದಶಮಾನೋತ್ಸವ ಸಮಿತಿಯು ಏರ್ಪಡಿಸಿದ್ದ ವಿಚಾರ ಸಂಕಿರಣ ಮಾಲೆ-1 "ಸಾಕ್ಷರತಾ ಆಂದೋಲನ ಏನು? ಎತ್ತ?"ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯದಲ್ಲೇ ಅತ್ಯಂತ ಸಾಕ್ಷರರನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಸಂಪೂರ್ಣ ಸಾಕ್ಷರತಾ ಆಂದೋಲನದ ಸೌಲಭ್ಯ ಇದೀಗ ಲಭ್ಯವಾಗಿದ್ದು – ಇದರ ಪೂರ್ಣ ಯಶಸ್ಸಿಗೆ ಎಲ್ಲರೂ ಪೂರ್ಣವಾಗಿ ಸಹಕರಿಸಲು ದ.ಕ. ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿ ವಿ.ಪಿ. ಬಳಿಗಾರ್‌ರವರು ಮನವಿ ಮಾಡಿದರು. ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಸಾಕ್ಷರತೆಯ ಜನರಲ್ಲಿ ಶೋಷಣೆ, ದಬ್ಬಾಳಿಕೆ, ಭ್ರಷ್ಟಾಚಾರಗಳ ವಿರುದ್ಧ ಸಂಘಟಿತ ಪ್ರತಿಭಟನೆ ರೂಪಿಸುವ ಶಕ್ತಿ ನೀಡಿದಾಗ ಮಾತ್ರ ಸಾಕ್ಷರತಾ ಆಂದೋಲನವು ತನ್ನ ಗುರಿಯನ್ನು ಸಾಧಿಸಲು ಸಾಧ್ಯವೆಂದರು. ಜಿಲ್ಲೆಯಲ್ಲಿ ಆಂದೋಲನ ಯಶಸ್ವಿಗೊಳಿಸಲು ಪೂರ್ಣವಾಗಿ ಸಹಕರಿಸುತ್ತಿರುವ ಡಿವೈಎಫ್ಐ ಯನ್ನು ಅವರು ಅಭಿನಂದಿಸಿದರು.



ಸಂಕಿರಣದಲ್ಲಿ ದ.ಕ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಾದ ಕಮಲಾಕರ ಹಾಲಂಬಿಯವರು ಮಾತನಾಡಿದರು.

"......ಎರಡನೇ ಪ್ರಜೆಯಾಗಿಯೇ ಬದುಕುತ್ತಿರುವ ಮಹಿಳೆ ವಿದ್ಯಾಭ್ಯಾಸದಿಂದಲೂ ವಂಚಿತಳಾಗುತ್ತಿರುವುದರಿಂದ ಇನ್ನಷ್ಟು ಶೋಷಣೆಗೆ ಒಳಪಟ್ಟಿದ್ದಾಳೆ. ಸತಿಯಂತಹ ಅಮಾನವೀಯ ಘಟನೆಯನ್ನು ವೈಭವೀಕರಿಸುವ ನಮ್ಮ ಪರಿಸರದಲ್ಲಿ ಮಹಿಳೆ ಸಾಕ್ಷರಳಾಗುವ ಮೂಲಕ ವಾಸ್ತವವನ್ನು ಅರಿಯಲು ಸಹಕರಿಸಬೇಕು. ಪ್ರತಿಭಟನೆಯ ರೊಚ್ಚನ್ನು ಅವಳಲ್ಲಿ ತುಂಬಬೇಕು...." ಎಂದು ಸಾಕ್ಷರತಾ ಆಂದೋಲನದ ಜಿಲ್ಲಾ ಸಮಿತಿಯ ಸದಸ್ಯೆ ಹಾಗೂ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆಯೂ ಆಗಿರುವ ಎಸ್. ಆರ್.ಲೀಲಾವತಿ ಅಭಿಪ್ರಾಯ ಪಟ್ಟರು.

"...ಬಹುಪಾಲು ಜನರನ್ನು ಶಾಶ್ವತವಾಗಿ ವಿದ್ಯಾಭ್ಯಾಸ ಸೌಲಭ್ಯದಿಂದ ವಂಚಿಸಿರುವ ನಮ್ಮ ಸಮಾಜ ವ್ಯವಸ್ಥೆಯ ಬಗ್ಗೆ ಮೊದಲು ಅರಿಯಬೇಕು. ಸಾಕ್ಷರತಾ ಆಂದೋಲನವು ಕೇವಲ ಕಲಿಸವಾಗಬಾರದು. ಪ್ರಾಥಮಿಕ ಶಿಕ್ಷಣ ಸೌಲಭ್ಯ ಪ್ರತಿಯೊರ್ವರಿಗೂ ತಲುಪುವಂತಾಗಬೇಕು. ಸಮಾಜವಾದಿ ವ್ಯವಸ್ಥೆಯೊಂದೇ ಸಮಗ್ರ ಬದಲಾವಣೆಯ ಭಾಗವಾಗಿ ಪ್ರತಿಯೊರ್ವರಿಗೂ ವಿದ್ಯಾಭ್ಯಾಸವನ್ನು ಖಾತರಿ ಪಡಿಸಬಲ್ಲುದು...." ಎಂದು ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ರವರು ಹೇಳಿದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ದಶಮಾನೋತ್ಸವ ಸಮಿತಿ ಅಧ್ಯಕ್ಷರೂ ಆಗಿರುವ ಫಕೀರ್ ಮಹಮ್ಮದ್ ಕಟ್ಪಾಡಿಯವರು ಮಾತನಾಡುತ್ತಾ ವಿಯೆಟ್ನಾಂ ನಂತರ ರಾಷ್ಟ್ರಗಳು ಒಂದು ವರ್ಷದಲ್ಲಿ ತಮ್ಮ ದೇಶದ ಜನರಿಗೆ ವಿದ್ಯಾಭ್ಯಾಸ ಸೌಲಭ್ಯ ಒದಗಿಸುವಲ್ಲಿ ಯಶಸ್ವಿಯಾದರೆ– ಸ್ವತಂತ್ರ ಭಾರತದ 4 ದಶಕಗಳ ನಂತರವೂ ಈ ಗುರಿ ಸಾಧಿಸಲು ಏಕೆ ಸಾಧ್ಯವಾಗಲಿಲ್ಲ? ಎಂದು ಪ್ರಶ್ನಿಸಿದರು. ಶಿಕ್ಷಣ ವ್ಯವಸ್ಥೆ ಶ್ರೀಮಂತರ ಪರವಾಗಿದ್ದು-ಇದರ ಬದಲಾವಣೆ ಆದಾಗ ಮಾತ್ರ ಶಿಕ್ಷಣ ಜನಸಾಮಾನ್ಯರನ್ನು ತಲುಪಬಲ್ಲುದು ಎಂದರು.

ಮೊದಲಿಗೆ ಸ್ವಾಗತಿಸಿ ಮಾತನಾಡಿದ ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಆರ್.ಜಯಕುಮಾರ್ ರವರು ಜಿಲ್ಲೆಯಲ್ಲಿ ಜಾರಿಗೊಳ್ಳುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಲನವು ಇತಿಮಿತಿಗಳನ್ನು ಹೊಂದಿದ್ದಾಗ್ಯೂ ಜನರಿಗೆ ಶಿಕ್ಷಣ ತಲುಪುವಂತಾಗುವಲ್ಲಿ ಸಂಘಟನೆ ಪೂರ್ಣವಾಗಿ ಕಾರ್ಯಕ್ರಮಗ ಯಶಸ್ಸಿಗೆ ದುಡಿಯುವ ಭರವಸೆ ನೀಡಿದರು. ದಶಮಾನೋತ್ಸವ ಸಮಿತಿಯ ಸಹ ಕಾರ್ಯದರ್ಶಿ ವಾಸುದೇವ ಉಚ್ಚಿಲ್ ಧನ್ಯವಾದ ಸಲ್ಲಿಸಿದರು.

ಸಾಕ್ಷರತಾ ಆಂದೋಲನದಲ್ಲಿ ಪ್ರಾಮಾಣಿಕವಾಗಿ ತೊಡಿಗಿಸಕೊಂಡಿರುವ ಡಿವೈಎಫ್ಐ ತನ್ನ ರಾಜಕೀಯ ಸಿದ್ಧಾಂತ ಪ್ರಚಾರಕ್ಕೆ ಸಾಕ್ಷರತಾ ಆಂದೋಲನವನ್ನುಉಪಯೋಗಿಸಿಕೊಳ್ಳುತ್ತಿದೆ ಎಂಬ ಟೀಕಾಕಾರರಿಗೆ ಸಂಕಿರಣವು ಸೂಕ್ತ ಉತ್ತರವನ್ನು ನೀಡಿತು.

ಬೆನಜಿರ್ ಪರಾಭವ—ಮೋಸದ ಆಪಾದನೆ

ಪಾಕಿಸ್ತಾನದಲ್ಲಿ ನಡೆದ ಚುನಾವಣೆಗಳ ಫಲಿತಾಂಶ ಹೊರಗೆ ಬಿದ್ದಿದ್ದು, ಬೆನಜಿರ್ ಭುಟ್ಟೋ ನಾಯಕತ್ವದ ಪೀಪಲ್ಸ್ ಡೆಮಾಕ್ರಾಟಿಕ್ ಕೂಟ(ಪಿಡಿಎ) ಭಾರಿ ಪರಾಭವ ಹೊಂದಿದೆ. ಚುನಾವಣಾ ಫಲಿತಾಂಶಗಳ ಪ್ರಕಾರ ಬಲಪಂಥೀಯ ಕೋಮುವಾದಿ ಪಕ್ಷಗಳ ರಂಗ ಇಸ್ಲಾಮಿಕ್ ಜಮ್‌ಹೂರಿ ಇತ್ತೆಹಾದ್(ಐಜೆಐ) 105 ಸೀಟುಗಳನ್ನು ಗಳಿಸಿದೆ. 217 ಸದಸ್ಯರಿರುವ ಪಾಕಿಸ್ತಾನ ರಾಷ್ಟ್ರೀಯ ಅಸ್ಸೆಂಬ್ಲಿಯಲ್ಲಿ ಐಜೆಐ ಸರಕಾರ ರಚಿಸಲು ಬಹುಮತಕ್ಕೆ 4 ಸದಸ್ಯರ ಬೆಂಬಲದ ಅಗತ್ಯವಿದೆ. ಕಳೆದ ಅಸ್ಸೆಂಬ್ಲಿಯಲ್ಲಿ 93 ಸೀಟುಗಳನ್ನು ಹೊಂದಿದ್ದ ಬೆನಜಿರ್ ನಾಯಕತ್ವದ ಪಿಪಿಪಿ ಪಕ್ಷದ ಬಲ ಈ ಬಾರಿ ಹೆಚ್ಚು ಕಡಿಮೆ ಅರ್ಧಕ್ಕೆ ಕುಸಿದಿದೆ. ಈ ಬಾರಿ ಪಿಡಿಎ ರಂಗದ ಬಲ 45 ಸೀಟುಗಳು.

ಬೆನಜಿರ್ ಭುಟ್ಟೋ, ಆಕೆಯ ಪತಿ ಮತ್ತು ತಾಯಿ, ಐಜೆಐನ ಹಂಗಾಮಿ ಪ್ರಧಾನಿ ಜತೋಯಿ, ನವಾಜ್ ಶರೀಫ್–ಚುನಾವಣೆ ಗೆದ್ದ ಪ್ರಮುಖರು. ಬೆನಜಿರ್, ಆಕೆಯ ಪತಿ ಆಸೀಫ್ ಅಲಿ ಝರದಾರಿ ತಲಾ ಒಂದು ಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ. ಅವರಿಬ್ಬರು ಎರಡು ಕ್ಷೇತ್ರಗಳಿಂದ ಚುನಾವಣೆಗೆ ಸ್ಪರ್ಧಿಸಿದ್ದರು.

ಚುನಾವಣೆಯಲ್ಲಿ ಭಾರಿ ಮೋಸ ನಡೆದಿದೆ–ಮತ ಪೆಟ್ಟಿಗೆಗಳ ಬದಲಾವಣೆ ಭಾರಿ ಪ್ರಮಾಣದಲ್ಲಿ ನಡೆದಿದೆ ಎಂದು ಬೆನಜಿರ್ ಆಪಾದಿಸಿದ್ದಾರೆ. ಇದರ ವಿರುದ್ಧ ದೇಶಾದ್ಯಂತ ಚಳುವಳಿ ಹೂಡಲಾಗುವುದು ಎಂದು ಎಚ್ಚರಿಸಿದ್ದಾರೆ. ಪಂಜಾಬಿನಲ್ಲಿ 115 ಸೀಟುಗಳಲ್ಲಿ 95 ಸೀಟುಗಳನ್ನು ಬಲಪಂಥೀಯ ಐಜೆಐ ಪಡೆದಿರುವುದು ಯಾರಾದರೂ ನಂಬುವಂತಹದಲ್ಲ ಎಂದು ಹೇಳಲಾಗಿದೆ.

ಈ ನಡುವೆ ಈಗಾಗಲೇ 6 ಆರೋಪಗಳನ್ನು ಎದುರಿಸುತ್ತಿರುವ ಬೆನಜಿರ್ ವಿರುದ್ಧ 7 ನೇ ಆರೋಪವೊಂದನ್ನು ಹೊರಿಸಲಾಗಿದೆ. ಆಕೆಯ ಪತಿ ಝರದಾರಿ ಬಂಧನವನ್ನು ಮುಂದುವರೆಸಲಾಗಿದೆ.

ಚುನಾವಣೆಯ ವೀಕ್ಷಣೆಗೆ ಪಾಕಿಸ್ತಾನಕ್ಕೆ ಬಂದಿದ್ದ 50 ಸದಸ್ಯರ ನಿಯೋಗ ಚುನಾವಣೆಯಲ್ಲಿ ಭಾರಿ ಮೋಸದ ಬಗ್ಗೆ ಸ್ಪಷ್ಟವಾಗಿ ಏನೂ ಹೇಳಿಲ್ಲ. ಹಂಗಾಮಿ ಸರಕಾರ ಪ್ರಚಾರದಲ್ಲಿ ಪಕ್ಷಪಾತ ಮಾಡಿದೆ, ಮಹಿಳೆಯರ ಬೂಗಿನ ಬೂತುಗಳಲ್ಲಿ ಅನುಸರಿಸಲಾದ ವಿಧಾನಗಳು 'ಮೋಸ'ಕ್ಕೆ ತುಂಬಾ ಅವಕಾಶ ಮಾಡಿಕೊಟ್ಟಿದೆ, ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪಿಡಿಎ ವಿರುದ್ಧ ಐಜೆಐ ಪರ ಪಕ್ಷಪಾತದ ನೀತಿ ಅನುಸರಿಸಲಾಯಿತು ಎಂದಿದೆ.

ಈ ಚುನಾವಣಾ ಫಲಿತಾಂಶದಿಂದ, ಪಾಕಿಸ್ತಾನದ ಜನತೆಯ ಮೇಲೆ ಸೈನ್ಯ, ಮುಲ್ಲಾಗಳು, ಬಲಪಂಥೀಯ ಪಕ್ಷಗಳು–ಇವೆಲ್ಲಕ್ಕಿಂತ ಹೆಚ್ಚಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಕಪಿ ಮುಷ್ಟಿ ಬಲವಾಗಿದೆ. ಸ್ವಲ್ಪ ಉಸಿರಾಡಲು ಆರಂಭಿಸಿದ್ದ ಆದೇಶದ ಪ್ರಜಾತಂತ್ರಕ್ಕೆ ಉಸಿರು ಕಟ್ಟಿದಂತಾಗಿದೆ. ಕೊಲ್ಲಿಯಲ್ಲಿ ಈ ಉಪಖಂಡದಲ್ಲಿ ಸಾಮ್ರಾಜ್ಯಶಾಹಿ ಹಿಡಿತ ಇದರಿಂದ ಇನ್ನಷ್ಟು ಬಲವಾಗಿದೆ.

ಕಳೆದ ಚುನಾವಣೆಯ ಮೊದಲು ಕೋಮುವಾದಿ ಶಕ್ತಿಗಳು, ಪಾಕಿಸ್ತಾನದ ಸೈನ್ಯ, ದೇಶದ ಮೇಲೆ ಸಾಮ್ರಾಜ್ಯಶಾಹಿ ಹಿಡಿತದ ವಿರುದ್ಧ ಜನತೆ ಎಮ್‌ಆರ್‌ಡಿ(ಮೂವ್‌ಮೆಂಟ್ ಫಾರ್ ರಿಸ್ಟೋರೇಷನ್ ಆಫ್ ಡೆಮಾಕ್ರಸಿ–ಪ್ರಜಾತಂತ್ರ ಪುನರ್‌ಸ್ಥಾಪನಾ ಚಳುವಳಿ) ಎಂಬ ಸಂಯುಕ್ತ ರಂಗ ಹಲವು ವರ್ಷಗಳ ಮಿಲಿಟರಿ ಆಡಳಿತಕ್ಕೆ ಸವಾಲು ಒಡ್ಡಿ, ಚುನಾವಣೆಗಳು ನಡೆಯುವಂತೆ ಮಾಡುವುದರಲ್ಲಿ ಯಶಸ್ವಿಯಾದರು. ಆದರೆ ಈ ಎಮ್‌ಆರ್‌ಡಿ ರಂಗ ಚುನಾವಣೆಯಲ್ಲಿ ಐಕ್ಯರಂಗವಾಗಿ ಭಾಗವಹಿಸಲಿಲ್ಲ. ಚುನಾವಣಾ ಮೈತ್ರಿ ಸಾಧ್ಯವಾಗದುದಕ್ಕೆ ಬೆನಜಿರ್ ಭುಟ್ಟೋರವರ ಮಹತ್ವಾಕಾಂಕ್ಷೆಯೇ ಕಾರಣವಾಯಿತು ಎನ್ನಲಾಗಿದೆ. ಎಮ್‌ಆರ್‌ಡಿ ಐಕ್ಯರಂಗ ಒಂದಾಗಿ ಸ್ಪರ್ಧಿಸಿದ್ದರೆ ಪ್ರಜಾತಾಂತ್ರಿಕ ಶಕ್ತಿಗಳಿಗೆ ಸ್ಪಷ್ಟ ಬಹುಮತ ಬರುವ ಪರಿಸ್ಥಿತಿ ಇತ್ತು. ಆದರೆ ಎಮ್‌ಆರ್‌ಡಿಯ ಅನೈಕ್ಯತೆಯಿಂದ ಇದು ಸಾಧ್ಯವಾಗಲಿಲ್ಲ. ಬೆನಜಿರ್‌ರ ಪಿಪಿಪಿ ಮತ್ತು ಎಮ್‌ಕ್ಯುಎಮ್‌ಗೆ ಸಿಕ್ಕಿದ ನಾಜೂಕಿನ ಸ್ವಲ್ಪ ಬಹುಮತ ಜನತೆಯ ಪ್ರಜಾತಾಂತ್ರಿಕ ಆಕಾಂಕ್ಷೆಗಳು ಫಲಿಸಲು ಸಾಕಾಗಲಿಲ್ಲ. ಜನತೆ ಯಾರ ವಿರುದ್ಧ ಆಕೆಗೆ ಮತ ನೀಡಿದ್ದರೋ- ಅಮೇರಿಕನ್ ಸಾಮ್ರಾಜ್ಯಶಾಹಿ, ಸೈನ್ಯ, ಅಧ್ಯಕ್ಷ, ಕೋಮುವಾದಿ ಶಕ್ತಿಗಳು– ಅವರ ಜತೆ ಅಧಿಕಾರದಲ್ಲಿರಲು ಬೆನಜಿರ್ ಸರಕಾರ ಸಮಜಾಯಿಷಿ ಮಾಡುತ್ತಾ ಹೋಯಿತು. ಇದರಿಂದ ಜನತೆಗೆ ಸರಕಾರದ ಮೇಲಿನ ವಿಶ್ವಾಸ ಕಡಿಮೆಯಾಗುತ್ತಾ ಹೋಯಿತು. ಇದರಿಂದ ಜನತೆಗೆ ಸರಕಾರದ ಮೇಲಿನ ವಿಶ್ವಾಸ ಕಡಿಮೆಯಾಗುತ್ತಾ ಹೋಯಿತು.

ಈ ಹಿನ್ನೆಲೆಯಲ್ಲಿ ಕಡಿಮೆ ಮತ ಚಲಾವಣೆ, ಎರಡು ರಂಗಗಳ ನಡುವೆ ಸ್ಪಷ್ಟ ವ್ಯತ್ಯಾಸಗಳನ್ನು ಪಾಕಿಸ್ತಾನದ ಜನತೆ ಕಾಣದೆ ಹೋದದ್ದು ಈ ಫಲಿತಾಂಶಕ್ಕೆ ಕಾರಣವಿರಬಹುದು. ಚುನಾವಣೆ ಮುಕ್ತ ಮತ್ತು ನ್ಯಾಯಯುತವಾಗಿದೆ ಎಂದು ಪಾಕಿಸ್ತಾನದ ಚರಿತ್ರೆ ಗೊತ್ತಿದ್ದವರೂ ಯಾರೂ ನಂಬಲಾರರು. ಆದರೂ ಈ, ಫಲಿತಾಂಶಕ್ಕೆ, ಪರಿಸ್ಥಿತಿಗೆ ಪ್ರಜಾತಾಂತ್ರಿಕ ಶಕ್ತಿಗಳ ಅನೈಕ್ಯತೆಯೂ ಕಾರಣ ಎನ್ನಬಹುದು.

ನೇಪಾಳದಲ್ಲಿ ನವೆಂಬರ್ 9ಕ್ಕೆ ಹೊಸ ಸಂವಿಧಾನ

ನವೆಂಬರ್ 9ರಂದು ನೇಪಾಳದಲ್ಲಿ ಹೊಸ ಸಂವಿಧಾನ ಜಾರಿಗೆ ತರಲಾಗುವುದು. ದೊರೆ ಬೀರೇಂದ್ರರ ಘೋಷಣೆಯಿಂದ ಇದರ ಬಗ್ಗೆ ಆ ದೇಶದಲ್ಲಿ ಆಗುತ್ತಿದ್ದ ಕೋಲಾಹಲ ನಿಲ್ಲುವ ಸೂಚನೆ ಕಾಣುತ್ತಿದೆ.

ಆರು ತಿಂಗಳ ಹಿಂದೆ ಜನಶಕ್ತಿಯ ಆಧಾರದಲ್ಲಿ ಬಂದ ನೇಪಾಳಿ ಕಾಂಗ್ರೆಸ್-

ಆರು ತಿಂಗಳ ಹಿಂದೆ ಜನಶಕ್ತಿಯ ಆಧಾರದಲ್ಲಿ ಬಂದ ನೇಪಾಳಿ ಕಾಂಗ್ರೆಸ್-ಸಂಯುಕ್ತ ಎಡರಂಗದ ಸರಕಾರ ಈ ಹಿಂದೆ ಸಂವಿಧಾನ ರಚಿಸಲು ನೇಮಿಸಿದ್ದ ಸಮಿತಿ, ಸಂವಿಧಾನವೊಂದನ್ನು ರಚಿಸಿ ಸರಕಾರಕ್ಕೆ ಸಲ್ಲಿಸಿತ್ತು. ಇದನ್ನು ಸರಕಾರ ಪರಿಶೀಲಿಸಿ ಕೆಲವು ಬದಲಾವಣೆಗಳೊಂದಿಗೆ ಅಂಗೀಕರಿಸಿತ್ತು. ಇದನ್ನು ಔಪಚಾರಿಕವಾಗಿ ರಾಜನ ಅಂಗೀಕಾರಕ್ಕೆ ಕಳುಹಿಸಲಾಗಿತ್ತು. ಹಲವು ವಾರಗಳಾದರೂ ರಾಜ ಸಂವಿಧಾನಕ್ಕೆ 'ಲಾಲ್-ಮೊಹರ್'(ಅಂಗೀಕಾರದ ಮುದ್ರೆ) ಹಾಕದ್ದು ರಾಜಕೀಯ ಊಹಾಪೋಹಕ್ಕೆ ಕಾರಣವಾಗಿತ್ತು. ಸರಕಾರ ಸೂಚಿಸಿದ ಬದಲಾವಣೆಗಳ ಬಗೆಗೆ ಆಳುವ ರಂಗದ ನೇಪಾಳಿ ಕಾಂಗ್ರೆಸ್ ಮತ್ತು ಎಡರಂಗದ ನಡುವೆ ಸಾಕಷ್ಟು ಭಿನ್ನಾಭಿಪ್ರಾಯವಿತ್ತು. ಆದರೂ ಆದಷ್ಟು ಬೇಗ ಪ್ರತಿಗಾಮಿ ಪಂಚಾಯತ್ ವ್ಯವಸ್ಥೆ ಕೊನೆಗಾಣಿಸಿ ಹೊಸ ಸಂವಿಧಾನ ತರುವ ಉದ್ದೇಶದಿಂದ ಹಲವು ನ್ಯೂನತೆಗಳನ್ನು ಒಪ್ಪಿಕೊಳ್ಳಲಾಗಿತ್ತು.

ಆದರೆ ರಾಜ ಈ ಸಂವಿಧಾನವನ್ನು ನೆನೆಗುದಿಗೆ ಹಾಕಿದ್ದು, ಆತ ಸರಕಾರದಿಂದ ಕೆಲವು ಸ್ಪಷ್ಟೀಕರಣ ಕೇಳಿದ್ದು, ರಾಜ ಸೂಚಿಸಿದ ಕೆಲವು 'ಬದಲಾವಣೆ'ಗಳನ್ನು ನೇಪಾಳಿ ಕಾಂಗ್ರೆಸ್‌ನ ಸಮಿತಿಯೊಂದು ಅಂಗೀಕರಿಸಿದ್ದು, ಇದರಲ್ಲಿ ಎಡರಂಗವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದದ್ದು ಭಾರೀ ಊಹಾಪೋಹಕ್ಕೆ ಕಾರಣವಾಗಿತ್ತು. ರಾಜ ಆಳುವ ರಂಗದಲ್ಲಿ ನೇಪಾಳಿ ಕಾಂಗ್ರೆಸ್ ಎಡರಂಗಗಳಲ್ಲಿ ಬಿಕ್ಕಟ್ಟು ತರಲು ಪ್ರಯತ್ನಿಸಿದ್ದು ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೇಪಾಳಿ ಯುವ ಕಾಂಗ್ರೆಸ್ ಮತ್ತು ಎಡರಂಗದ ಸಾಮೂಹಿಕ ಸಂಘಟನೆಗಳು ಭಾರಿ ಪ್ರದರ್ಶನಗಳನ್ನು ಏರ್ಪಡಿಸಿದ್ದವು. ಅಕ್ಟೋಬರ್ 28ರಂದು 'ನೇಪಾಳ ಬಂದ್' ಗೂ ಕರೆ ನೀಡಲಾಗಿತ್ತು. ಈ ಪ್ರದರ್ಶನಗಳಲ್ಲಿ 'ಅರಮನೆ ಪಿತೂರಿ'ಗಳ ಕಾಲ ನೇಪಾಳದಲ್ಲಿ ಆಗಿಹೋಗಿದೆ ಎಂದು ತೀವ್ರ ಎಚ್ಚರಿಕೆ ನೀಡಲಾಗಿತ್ತು. ಇದರಿಂದ ಬೆದರಿದ ದೊರೆ ಸಂವಿಧಾನವನ್ನು ಜಾರಿ ಮಾಡುವ ತಾರೀಕು ನಿಗದಿಸಿ ಪ್ರಕಟಣೆ ಹೊರಡಿಸಿದ್ದಾ

ಈ ಸಂದರ್ಭದಲ್ಲಿ ನೇಪಾಳ ಬಾಲ್ಯದಲ್ಲಿರುವ ಪ್ರಜಾತಂತ್ರಕ್ಕೆ ಇ ಸವಾಲುಗಳು ಮುಗಿದಿಲ್ಲ, ಮತ್ತು ಈ ಸವಾಲುಗಳನ್ನು ಎದುರಿಸಲು ನೇಪಾಳದ ಎ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಎಚ್ಚರಿಕೆಯಿಂದ ಇವೆ ಎಂಬುದು ಇದರಿಂದ ಸಿದ್ಧವಾಗಿದೆ.

ಇಸ್ರೇಲಿ ಹತಮಾರಿತನಕ್ಕೆ ಪುನ: ಖಂಡನೆ

ಪ್ಯಾಲೆಸ್ತೀನಿಯರ ನರಮೇಧದ ವಿಚಾರಣೆಗೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಕಳಿಸುವ ನಿಯೋಗದ ಜತೆ ಸಹಕರಿಸಲು ನಿರಾಕರಿಸಿದ್ದಕ್ಕಾಗಿ ಇಸ್ರೇಲನ್ನು ತೀವ್ರವಾಗಿ ಖಂಡಿಸುವ ನಿರ್ಣಯವೊಂದನ್ನು ಭದ್ರತಾ ಸಮಿತಿ ಅಂಗೀಕರಿಸಿದೆ. ಈ ನಿರ್ಣಯವನ್ನು ಕೊಲಂಬಿಯಾ, ಕ್ಯೂಬಾ, ಮಲೇಶಿಯಾ ಮತ್ತು ಯೆಮೆನ್‌ಗಳು ಮಂಡಿಸಿದ್ದು, ಸರ್ವಾನುಮತದಿಂದ ಅದನ್ನು ಅಂಗೀಕರಿಸಲಾಯಿತು. ಅಮೇರಿಕ ಮೊದಲು ಇದನ್ನು ವಿರೋಧಿಸಿದರೂ, ಕೊನೆಗೆ ಈ ನಿರ್ಣಯಕ್ಕೆ ತನ್ನ ಮತ ನೀಡಿತು. ಕೊಲ್ಲಿ ಬಿಕ್ಕಟ್ಟಿನಲ್ಲಿ ತನ್ನ ಪರವಾಗಿರುವ ಅರಬ್ ದೇಶಗಳ ಬೆಂಬಲ ಕಳೆದುಕೊಳ್ಳದಿರಲು ಅಮೇರಿಕ ಈ ನಿರ್ಣಯಕ್ಕೆ ಮತ ನೀಡಿದೆ ಎಂಬುದು ಸ್ಪಷ್ಟ.

ಕಾನೂನುಗಳ ವಿವಾದಕ್ಕೆ ಅಂತ್ಯ

ಸೋವಿಯತ್ ಒಕ್ಕೂಟದ ಹಲವಾರು ಅಂಗ ಗಣರಾಜ್ಯಗಳು ಇತ್ತೀಚೆಗೆ ತಮ್ಮ ಕಾನೂನುಗಳು ಒಕ್ಕೂಟದ ಕಾನೂನುಗಳ ನಡುವೆ ಭಿನ್ನತೆ ಇದ್ದರೆ ಒಕ್ಕೂಟದ ಕಾನೂನುಗಳು ತಮ್ಮ ಗಣರಾಜ್ಯಕ್ಕೆ ಅನ್ವಯವಾಗುವುದಿಲ್ಲ ಎಂದು ಘೋಷಿಸಿದ್ದವು. ಇದು ಆರ್ಥಿಕ, ರಾಜಕೀಯ ಮತ್ತಿತರ ವಿಷಯಗಳ ಬಗೆಗಿನ ಕಾನೂನುಗಳ ಅನ್ವಯದ ಬಗ್ಗೆ ಹಲವಾರು ವಿವಾದಗಳಿಗೆ ಆಸ್ಪದ ಕೊಟ್ಟಿದ್ದು, ಅರಾಜಕತೆಗೂ ಎಡೆಕೊಟ್ಟಿತ್ತು. ಈ ಅರಾಜಕತೆಯನ್ನು ಅಂತ್ಯಗೊಳಿಸುವ ಕಾನೂನೊಂದನ್ನು ಒಕ್ಕೂಟದ ಸುಪ್ರೀಂ ಸೋವಿಯತ್ ಅಂಗೀಕರಿಸಿದೆ.

ಇದರ ಪ್ರಕಾರ ಒಕ್ಕೂಟದ ಕಾನೂನುಗಳಿಗೆ ವಿರುದ್ಧವಾಗಿರುವ ಎಲ್ಲಾ ಅಂಗ ಗಣರಾಜ್ಯಗಳ ಮತ್ತು ಸ್ಥಳೀಯ ಸಂಸ್ಥೆಗಳ ಕಾನೂನುಗಳು ಅಸಿಂಧು, ಮತ್ತು ಕಾನೂನುಬಾಹಿರ. ಒಕ್ಕೂಟದ ಯಾವುದೇ ಕಾನೂನನ್ನು ಯಾವುದೇ ಗಣರಾಜ್ಯ ಪ್ರಶ್ನಿಸಬೇಕಾದರೆ, ಆ ವಿಷಯವನ್ನು ಸುಪ್ರೀಂ ಸೋವಿಯತ್ ಅಥವಾ ಜನತಾ ಡೆಪ್ಯುಟಿಗಳ ಕಾಂಗ್ರೆಸ್‌ನಲ್ಲಿ ಅದನ್ನು ಮುಂದಿಡಬೇಕು.

ಕ್ಯಾಸ್ಟ್ರೋರ ಗಡ್ಡ, ವರ್ಚಸ್ಸು ಉದುರಿಸಲಾಗದ

ಕ್ಯೂಬಾದ ವರ್ಚಸ್ವೀ ನಾಯಕ ಫಿಡೆಲ್ ಕ್ಯಾಸ್ಟ್ರೋರವರನ್ನು ಕೊಲೆ ಮಾಡಲು, ಅವರ ವರ್ಚಸ್ಸನ್ನು ಕಡಿಮೆ ಮಾಡಲು ಸಿಐಎ ಮಾಡಿದ ಶತ ಪ್ರಯತ್ನಗಳೆಲ್ಲಾ ವಿಫಲವಾದವು. ಇದರಲ್ಲಿ ಕ್ಯಾಸ್ಟ್ರೋರ ಗಡ್ಡ ಉದುರುವಂತೆ ಮಾಡುವ ಪುಡಿಯೊಂದರ ಬಳಕೆ ಇಂತಹ ವಿಫಲ ಪ್ರಯತ್ನಗಳಲ್ಲಿ ಸೇರಿದೆ. ಕ್ಯಾಸ್ಟ್ರೋರ ಗಡ್ಡ ಉದುರಿದರೆ, ಅವರ ವರ್ಚಸ್ಸು ರಾಜಕೀಯ ಪ್ರಭಾವ ಕಡಿಮೆಯಾಗುತ್ತದೆಂಬ ಪೆದ್ದುಗಳು ಸಿಐಎ ನಲ್ಲಿದ್ದರು.

ಕ್ಯಾಲಿಫೋರ್ನಿಯಾದ ಸೆನೆಟರ್ ಒಬ್ಬರು 1953ರಿಂದೀಚೆಗೆ ಸಿಐಎನ 'ವೈಫಲ್ಯ' ಗಳನ್ನು ಪಟ್ಟಿಮಾಡಿದ್ದು, ಈ ಪ್ರಯತ್ನವೂ ಅದರಲ್ಲಿ ಸೇರಿದೆ. ಇದಲ್ಲದೆ ಇರಾನ್ ಪ್ರಧಾನಿ ಮಹಮ್ಮದ್ ಮುಸ್ಸಾದೆಗ್‌ರನ್ನು ಪದಚ್ಯುತ ಮಾಡಲು 1953ರಲ್ಲಿ ಪ್ರಯತ್ನ, ಭಾರತದಲ್ಲಿ ದಲೈಲಾಮಾರವರಿಗೆ ಗುಪ್ತ ಮಿಲಿಟರಿ ತರಬೇತಿ, ಚೀನಾದಲ್ಲಿ 1964 ರವರೆಗೆ ದಂಗೆಎಬ್ಬಿಸಲು ನಡೆದ ಹಲವಾರು ಪ್ರಯತ್ನಗಳು, ಇರಾಕ್‌ನ ಕುರ್ದಿಶ್ ದಂಗೆಕೋರರಿಗೆ ತರಬೇತಿ ಇತರ ಸಿಐಎನ ಪ್ರಮುಖ 'ವೈಫಲ್ಯ'ಗಳು.

ಹಂಚಿನ ಕಾರ್ಮಿಕರ ಮಹಾಸಭೆ

ಇಎಸ್‌ಐ ಮತ್ತು ಭವಿಷ್ಯ ನಿಧಿಯ ಅವ್ಯವಸ್ಥೆ ಹಾಗೂ ಅನ್ಯಾಯಗಳ ವಿರುದ್ಧ ಹೋರಾಡಲು ಮುಂದಾಗಬೇಕೆಂದು ಎಸ್.ಕೆ.ಟೈಲ್ ವರ್ಕರ್ಸ್ ಯುನಿಯನ್ ಹಂಚಿನ ಕಾರ್ಮಿಕರಿಗೆ ಕರೆ ನೀಡಿದೆ.

ಸಂಘದ 47ನೇ ವಾರ್ಷಿಕ ಮಹಾಸಭೆಯಲ್ಲಿ ಅಕ್ಟೋಬರ್ 7ರಂದು ನಡೆಯಿತು. ಸಂಘದ ಅಧ್ಯಕ್ಷ ಅಬ್ರಹಾಂ ಕರ್ಕಡ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕೆ.ಶಂಕರ್ ಗತ ವರ್ಷದ ವರದಿ , ಲೆಕ್ಕಪತ್ರ ಮಂಡಿಸಿದರು.

ರೈತ-ಕೃಷಿ ಕೂಲಿಗಾರರು ತಮ್ಮ ಮುಖ್ಯ ಬೇಡಿಕೆಗಳ ಬಗ್ಗೆ ನಡೆಸುತ್ತಿರುವ ಹೋರಾಟಗಳನ್ನು ಬೆಂಬಲಿಸುವುದಲ್ಲದೇ ಈ ಹೋರಾಟದಲ್ಲಿ ಸಕ್ರಿಯರಾಗಿ ಭಾಗವಹಿ-

ರೈತ-ಕೃಷಿ ಕೂಲಿಗಾರರು ತಮ್ಮ ಮುಖ್ಯ ಬೇಡಿಕೆಗಳ ಬಗ್ಗೆ ನಡೆಸುತ್ತಿರುವ ಹೋರಾಟಗಳನ್ನು ಬೆಂಬಲಿಸುವುದಲ್ಲದೇ ಈ ಹೋರಾಟದಲ್ಲಿ ಸಕ್ರಿಯರಾಗಿ ಭಾಗವಹಿಸಬೇಕೆಂದು ರೈತ-ಕಾರ್ಮಿಕರ ಸಖ್ಯತೆಯನ್ನು ಬಲಪಡಿಸಬೇಕೆಂದು ಮಹಾ ಸಭೆಯು ಹಂಚಿನ ಕಾರ್ಮಿಕರಿಗೆ ಕರೆ ನೀಡಿದೆ.

ಬೆಲೆ ಏರಿಕೆಯನ್ನು ಖಂಡಿಸಿದ ಮಹಾಸಭೆಯು ಕೇಂದ್ರಸರಕಾರವು ಆರ್ಥಿಕ ನೀತಿ ಮತ್ತು ಕೈಗಾರಿಕೆಯ ನೀತಿಯನ್ನು ಬದಲಾಯಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್(ಐ) ಸರಕಾರದ ಜನವಿರೋಧಿ ನೀತಿಯನ್ನು ಖಂಡಿಸಿತು.

ಮುಖ್ಯ ಅತಿಥಿಯಾಗಿ ಮಾತನಾಡಿದ ಸಿಐಟಿಯುನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ವಿಜೆಕೆ ನಾಯರ್‌ರವರು ಇಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕರ ಕರ್ತವ್ಯದ ಬಗ್ಗೆ ವಿವರಿಸಿ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲು ಹಾಗೂ ಹೋರಾಟದಲ್ಲಿ ಕಾರ್ಮಿಕ ವರ್ಗವು ಮುಂಚೂಣಿಯಲ್ಲಿರಬೇಕೆಂದು ಹೇಳಿದರು.

ಸಿಪಿಐ(ಎಂ)ರಾಜ್ಯ

ಕಾರ್ಯದರ್ಶಿಯವರಾದ ಕಾಮ್ರೇಡ್ ಪಿ.ರಾಮಚಂದ್ರರಾವ್ ಹಾಗೂ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿಯವರಾದ ಕಾಮ್ರೇಡ್ ಕೆ.ಆರ್. ಶ್ರೀಯಾನ್‌ರವರು ಮಾತನಾಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಹೋರಾಡುತ್ತಿರುವಾಗಲೇ ರೈತ--ಕಾರ್ಮಿಕ ಸಖ್ಯತೆ ಬೆಳೆಸಲು ಹಾಗೂ ಕಾರ್ಮಿಕ ವರ್ಗದ ಕರ್ತವ್ಯದ ಬಗ್ಗೆ ವಿವರಿಸುತ್ತಾ ವರ್ಗ ಪ್ರಜ್ಞೆ ಮತ್ತು ಶಿಸ್ತನ್ನು ಇನ್ನಷ್ಟು ದೃಢವಾಗಿ ಬೆಳೆಸಬೇಕೆಂದು ಕರೆ ನೀಡಿದರು.

ಮುಂದಿನ ಸಾಲಿಗೆ ಅಧ್ಯಕ್ಷರಾಗಿ ಕಾಂ. ಅಬ್ರಹಾಂ ಕರ್ಕಡ, ಉಪಾಧ್ಯಕ್ಷರಾಗಿ : ಕಾಂ. ವಿ.ನರಸಿಂಹ, ಮತ್ತು ಲೋಕಯ್ಯ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಕೆ. ಮೂಸಬ್ಬ, ಕಾರ್ಯದರ್ಶಿಗಳಾಗಿ ಕಾಂ. ಕೆ.ಶಂಕರ್‌ಮತ್ತು ಕಾಂ. ಬಿ. ರಾಮಣ್ಣ ಹಾಗೂ ಕೋಶಾಧಿಕಾರಿಗಳಾಗಿ ಕಾಂ. ಸಿ ನಾರಾಯಣ ಇವರನ್ನೊಳಗೊಂಡ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಕೊನೆಯಲ್ಲಿ ಕಾಂ. ಕೆ. ಶಂಕರ್ ವಂದಿಸಿದರು.

ಏರಿಸಿರುವ ವಿದ್ಯುತ್ ದರಕ್ಕೆ ಪ್ರತಿಭಟನೆ

ಕರ್ನಾಟಕ ಸರಕಾರವು ಏರಿಸಿರುವ ವಿದ್ಯುತ್ ದರವನ್ನು ಪ್ರತಿಭಟಿಸಲು ಸಿಐಟಿಯು ವಿನ ಕರ್ನಾಟಕ ರಾಜ್ಯ ಮಂಡಳಿ ನೀಡಿದ ಕರೆಯ ಮೇರೆಗೆ ತಾ. 24 ರಂದು ಕೆಇಬಿಯ ಬಂಟ್ವಾಳ ವಿಭಾಗದ ಸಹಾಯಕ ಅಭಿಯಂತರರ ಕಛೇರಿಯ ಮುಂದೆ ಬಂಟ್ವಾಳ ಸಿಐಟಿಯು ಕಾರ್ಯಕರ್ತರು ಮತಪ್ರದರ್ಶನ ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಿದರು. ಸಿಐಟಿಯು ಕಾರ್ಯಕರ್ತರು ಬಂಟ್ವಾಳದೈಲ್ವೆ ನಿಲ್ದಾಣದ ಬಳಿ ಒಟ್ಟು ಸೇರಿ **ಮೆರವಣಿಗೆಯಾಗಿ ಕೆಇಬಿ ಕಛೇರಿಗೆ ತೆರಳಿದರು.** ಜೀವನಾವಶ್ಯಕ **ಆಹಾರ ಸಾಮಗ್ರಿ**ಗಳ ಬೆಲೆ ಏರಿಕೆ, ಸಾರಿಗೆ ದರದ ಏರಿಕೆಯಿಂದಾಗಿ ಈಗಾಗಲೇ ತತ್ತರಿಸುತ್ತಿರುವ ಜನತೆಗೆ ರಾಜ್ಯದ ಕಾಂಗ್ರೆ ಸರಕಾರ ಏರಿಸಿರುವ ವಿದ್ಯುತ್ ದರದಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಪ್ರದರ್ಶನದ ನೇತೃತ್ವವನ್ನು ಬಿ.ವಾಸುಗಟ್ಟಿ, ಬಿ. ಹೂವಯ್ಯ ಬಂಗೇರ, ಬಿ.ನಾರಾಯಣ, ಬಿ.ವಸಂತ ಬಂಗೇರ ಮೊದಲಾದವರು ವಹಿಸಿದ್ದರು.

ಕೆಇಬಿ ಕಛೇರಿಯ ಮುಂದೆ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದ ಸಿಐಟಿಯುನ ಮುಖಂಡ ಬಿ.ವಾಸುಗಟ್ಟಿ ವಿದ್ಯುತ್ ದರವನ್ನು ಏರಿಸಿರುವ ಸರಕಾರದ ನೀತಿಯಿಂದ ಆಹಾರ ಸಾಮಗ್ರಿಗಳ ಬೆಲೆ ಇನ್ನೂ ಏರುವುದಲ್ಲದೆ ವಿದ್ಯುತ್ ದರದ ಏರಿಕೆಯಿಂದ ಹೊರೆತವನ್ನು ಸಹಿಸಲಾರದ ಸಣ್ಣ ಕೈಗಾರಿಕೆಗಳು ಮುಚ್ಚುವುದರಿಂದ ಸಹಸ್ರಗಟ್ಟಲೆ ಕಾರ್ಮಿಕರು ನಿರುದ್ಯೋಗಿಗಳಾಗುವರೆಂದು ಅಭಿಪ್ರಾಯ ಪಟ್ಟರು.

ಸಂತಾಪ

ತನ್ನ ಪರಿಸರದಲ್ಲಿ ರೈತ-ಕೃಷಿ ಕೂಲಿಗಾರರ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಿ ಇಂದಿಗೂ ಪಕ್ಷದ ಪ್ರಭಾವ ಬಲವಾಗಿ ಬೇರೂರಿರುವುದಕ್ಕೆ ಕಾರಣರಾಗಿರುವ ಮಾರ್ಕ್ಸ್‌ವಾದಿ ಪಕ್ಷದ ಓರ್ವ ನಿಷ್ಠಾವಂತ ಕಾರ್ಯಕರ್ತನಾಗಿ ತನ್ನ ಜೀವನದ ಕೊನೆಯವರೆಗೂ ಕಾರ್ಮಿಕ ವರ್ಗದ ಹಿತ ದೃಷ್ಟಿಯನ್ನಿರಿಸಿಕೊಂಡು ದುಡಿದು ಇತ್ತೀಚೆಗೆ ನಿಧನ ಹೊಂದಿದ ಕಾಮ್ರೇಡ್ ನಾರಾಯಣ ನಾಯಕ್ ಅವರಿಗೆ ಪಕ್ಷದ ಉಳ್ಳಾಲ ಕ್ಷೇತ್ರ ಸಮಿತಿಯು ತೀವ್ರ ಸಂತಾಪ ವ್ಯಕ್ತ ಪಡಿಸಿದೆ.

ಮಂಗಳೂರು ತಾಲೂಕಿನ ಮುನ್ನೂರು ಗ್ರಾಮದ ಕುತ್ತಾರ್ ಎಂಬಲ್ಲಿ ಸಣ್ಣ ರೈತ ಕುಟುಂಬವೊಂದರಲ್ಲಿ ಜನಿಸಿದ ಇವರು 1945 ರಿಂದಲೇ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿ ರೈತ-ಕಾರ್ಮಿಕರ ಮಧ್ಯ ಪ್ರಭಾವಿತ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದರು. 1948ರಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ ನಿರ್ಬಂಧ ಹೇರಿದ್ದ ಸಂದರ್ಭದಲ್ಲಿ ದಬ್ಬಾಳಿಕೆಗೆ ಒಳಗಾಗಿದ್ದ ಅವರು ಪೋಲೀಸರ ಕಣ್ತಪ್ಪಿಸಿ ಹಳ್ಳಿಯಲ್ಲಿ ರೈತ-ಕೃಷಿ ಕೂಲಿಗಾರರನ್ನು ಸಂಘಟಿಸಿ ರೈತರು ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು.

ಪಕ್ಷ ಇಬ್ಭಾಗವಾದಾಗ ಯಾವುದೇ ಗೊಂದಲವಿಲ್ಲದೆ ಸಿಪಿಐ(ಎಂ)ನ್ನು ಆರಿಸಿಕೊಂಡ ಅವರು ಇತ್ತೀಚಿನ ದಿನಗಳಲ್ಲಿ ಹಂಚಿನ ಕಾರ್ಖಾನೆ ಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದು ದಿನಗಳ ಅನಾರೋಗ್ಯದಿಂದ ಅಕ್ಟೋಬರ್ 11 ರಂದು ನಿಧನ ಹೊಂದಿದರು. ಅವರು ಪತ್ನಿ ಹಾಗೂ ಓರ್ವ ಪುತ್ರ[illegible] ಅಗಲಿದ್ದಾರೆ.

ಪ್ರಶ್ನೋತ್ತರ

ಪುಟ 3 ರಿಂದ

ಯಲ್ಲಿ ಬಂಧಿತನಾಗಿರಲಿ ಎಂಬ ಪ್ರಯತ್ನವಲ್ಲ. ಆತ ಸರಪಣಿಯನ್ನು ಕಿತ್ತು ಹಾಕಿ ನಿಜವಾದ ಹೂವುಗಳನ್ನು ಆನಂದಿಸಲಿ ಎಂದು......"(ಕಾರ್ಲ್‌ಮಾರ್ಕ್ಸ್-1844)

ಕಮ್ಯುನಿಸ್ಟರಲ್ಲಿ ಧರ್ಮ ಮತ್ತು ಧರ್ಮದ ವಿರುದ್ಧ ಹೋರಾಟದ ಬಗ್ಗೆ ಈ ಸಮಗ್ರ ದೃಷ್ಟಿಕೋನದ ಅಭಾವದಿಂದ

ಈಗಾಗಲೇ ಹಲವಾರು ದೇಶಗಳಲ್ಲಿ (ಸಮಾಜವಾದೀ ದೇಶಗಳೂ ಸೇರಿದಂತೆ [illegible] ಉದಾಹರಣೆಯಾಗಿ ಚೀನಾ, ಸೋವಿಯತ್ ದೇಶ, ಅಫಘಾನಿಸ್ತಾನ ಇತ್ಯಾದಿ) ಹಲವು ಅನಾಹುತಗಳಾಗಿವೆ. ಆಳುವ ವರ್ಗಗಳು ಮತ್ತು ಸಾಮ್ರಾಜ್ಯಶಾಹಿಯು [illegible] ಸಾಮ್ರಾಜ್ಯಶಾಹಿ ಮತ್ತು ಪ್ರತಿಗಾಮಿ [illegible]

ಆಳುವ ವರ್ಗಗಳು ಧರ್ಮವನ್ನು ಈ ರೀತಿ ಬಳಸುವುದರಿಂದಾಗಿ 'ಧಾರ್ಮಿಕ ಮೂಲಭೂತವಾದ' ವ್ಯಾಪಕವಾಗಿರುವ ಈ ಕಾಲಘಟ್ಟದಲ್ಲಿ ಇದು ಅತ್ಯಂತ ಗಂಭೀರ [illegible] ಇದನ್ನು ಎದುರಿಸುವ ಕೈಗೊಳ್ಳಬೇಕಾದ [illegible]

K R N M/BGW - 293 MAG (2) PRB DECR 319 - 78/79

ವಿಳಾಸ:

ಬಿ.ಜೆ.ಪಿ. ಸರ್ಕಾರವೇ ಹೊಣೆ..

ಪುಟ 1 ರಿಂದ

ಅಕ್ಟೋಬರ್ 23 ರಂದು ಅದ್ವಾನಿ ಯವರ ಬಂಧನದ ಸುದ್ದಿಯನ್ನು ಯೋಜಿತವಾಗಿ ಹರಡಲಾಯಿತು. ಸ್ಥಿತಿ ಗಂಭೀರಗೊಳ್ಳಲಾರಂಭಿಸಿತು. ಕೋತ್‌ವಾಲಿ ಎಂಬ ಸ್ಥಳದ ಬಳಿ ಸಂಜೆ ಸಾರ್ವಜನಿಕ ಸಭೆಯಲ್ಲಿ ನೇರ ಕಾರ್ಯಾಚರಣೆ ನಡೆಸ ಬೇಕೆಂದು ಎಲ್ಲಾ ಭಾಷಣಕಾರರೂ ಕೂಗಾಡಿದರು. ಅದೇ ವೇಳೆಗೆ ಭಾರತಿ ಭವನದಲ್ಲಿ ಆರ್.ಎಸ್.ಎಸ್. ನ ಗುಪ್ತ ಸಭೆ ನಡೆಯಿತು. ದಂಗೆಯ ಯೋಜನೆ ಅಲ್ಲೇ ಸಿದ್ಧಗೊಂಡದ್ದು. 'ಭಾರತ್‌ಬಂದ್' ದಿನದಂದು 10 ಕಡೆ ಹಳೆ ಟಯರು ಗಳನ್ನು ರಾಶಿ ಹಾಕಿ ಸುಡಲಾಯಿತು. ಇಡೀ ನಗರಕ್ಕೆ ದೊಡ್ಡ ಪ್ರಮಾಣದಲ್ಲಿ ಬೆಂಕಿ ಹಚ್ಚಿದ್ದಾರೇನೋ ಎಂಬಂತೆ ದಟ್ಟ ಹೊಗೆ ಆವರಿಸಿಕೊಂಡಿತು. ಜನರಲ್ಲಿ ಭಯ ಹುಟ್ಟಿಸಲು ಹೀಗೆ ಮಾಡಲಾಯಿತು. ನಂತರ ಈ ಹೊಗೆಯ ಛಾಯೆಯಲ್ಲಿ ಎಂಬಂತೆ ಆರ್.ಎಸ್.ಎಸ್ ನವರು ಮತ್ತು ಸಮಾಜ-ವಿರೋಧಿ ಶಕ್ತಿಗಳು ಮುಸಲ್ಮಾನರು ವಾಸವಿದ್ದ ಪ್ರದೇಶಗಳಿಗೆ ನುಗ್ಗಿ ತೆರೆದಿದ್ದ ಅಂಗಡಿಗಳನ್ನು ಮುಚ್ಚಿಸಿದರು. ಮಾನಕ್ ಚೌಕ್ ಮತ್ತು ರಾಮಗಂಜ್‌ನಲ್ಲಿ ತಿಕ್ಕಾಟ ನಡೆಯಿತು.

ಮಸೀದಿಯಲ್ಲಿ ಹತ್ತು ಹಿಂದೂ ಗಳನ್ನೂ ಕೂಡಿಹಾಕಲಾಗಿದೆ ಎಂದು ಸುಳ್ಳು ವದಂತಿ ಹರಡಲಾಯಿತು. ದೊಡ್ಡ ಜನಜಂಗುಳಿ ಮಸೀದಿಯೆದುರು ಸೇರಿ ಕಲ್ಲೆಸೆಯಲಾರಂಭಿಸಿತು. ಸ್ಥಳೀಯ ಪೋಲೀಸರು ಬಂದರು. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮೇಲೆ ಗುಂಡು ಹಾರಿಸಲಾಯಿತು. ಆತ ಅಲ್ಲೇ ಸತ್ತ. ಯಾರು ಆ ಗುಂಡುಹಾರಿಸಿದವರು ಎಂದು ಯಾರಿಗೂ ತಿಳಿದಿಲ್ಲ. ಆದರೆ ಆತನನ್ನೂ ಮುಸಲ್ಮಾನರು ಕೊಂದರು ಎಂದು ಪ್ರಚಾರ ಮಾಡಲಾಯಿತು. ಬೆಳಿಗ್ಗೆ 11 ಗಂಟೆ ವೇಳೆಗೆ ನಗರದಲ್ಲಿ ಕರ್ಫ್ಯೂ ಹಾಕಲಾಯಿತು. ಆದರೆ ಅದನ್ನು ಜಾರಿಗೆ ತರಲಿಲ್ಲ. ಮಧ್ಯಾಹ್ನ ಮೇಲೆ 3 ಗಂಟೆಗಷ್ಟೇ ಸೇನೆಬಂದದ್ದು. ಆಗ ದಂಗೆ ಕೋರರುಗಳ್ಳಿ, ಓಣಿಗಳಿಗೆ ಓಡಿ ಹೋಗಿ ಕೊಲೆ, ಸುಲಿಗೆ, ಅಗ್ನಿಸ್ಪರ್ಷ ಮುಂದುವರೆಸಿದರು. ಒಟ್ಟು ಮೂರು ಮಸೀದಿ ಗಳಿಗೆ, ಒಂದು ಸಮಾಧಿಗೆ ಹಾನಿ ಯುಂಟುಮಾಡಲಾಯಿತು.ಪೋಲೀಸರು ನಿಷ್ಕ್ರಿಯರಾಗಿದ್ದರಷ್ಟೇ ಅಲ್ಲ, ಕೆಲವೆಡೆ ಅವರೇ ಮುಸ್ಲಿಮರ ಮೇಲೆ ಹಲ್ಲೆ ನಡೆಸಿದರು, ದಂಗೆಕೋರರಿಗೆ ನೆರವಾದರು.

ಅಕ್ಟೋಬರ್ 25 ರಂದು ಆರ್.ಎ.ಸಿ. ಕಾನ್‌ಸ್ಟೇಬಲ್ ದಿಲ್‌ಸುಖ್‌ರಾಂ ಕೂಡಾ ಕೊಲ್ಲಲ್ಪಟ್ಟ. ಹಿಂದಿನ ದಿನದಂತೆ ಇದನ್ನೂ ಮುಸಲ್ಮಾನರ ಕೆಲಸ ಎಂದು ಪ್ರಚಾರ ಮಾಡಲಾಯಿತು. ಇಡೀ ಆರ್.ಎ.ಸಿ.ಹಗೆ ಕಾರಲಾರಂಭಿಸಿತು. ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಜೋಹರಿ ಮಾರ್ಕೆಟ್, ಚೌದಾದಾಸ್ತಾ, ಚಂದ್ ಪೋಲ್ ಪ್ರದೇಶ ಗಳಲ್ಲಿ 200 ಮುಸ್ಲಿಂ ಅಂಗಡಿಗಳ ಲೂಟಿ ಮಾಡಲಾಯಿತು. ಸುಟ್ಟು ಹಾಕಲಾಯಿತು. ನಹಾರ್‌ಗಡ್‌ನಲ್ಲಿ ಒಂದು ಮಸೀದಿ ಒಡೆದು ಕೆಲವು ಮೂರ್ತಿಗಳ ಇಟ್ಟು, ಒಂದು ಭಗವಾ ಬಾವುಟ ಹಾರಿಸಿ ಅದೊಂದು ಮಂದಿರ ಎಂದು ಸಾರಲಾಯಿತು. ಮುಖ್ಯಮಂತ್ರಿಗಳೂ ಇದನ್ನು ಒಪ್ಪಿಕೊಂಡಿದ್ದಾರೆ...

ಆಸ್ಪತ್ರೆಯಲ್ಲಿ ಗುಂಡೇಟು ತಗಲಿದ ಹಿಂದೂ ಯುವಜನರೂ ಇದ್ದರು. ಅವರನ್ನು ವಿಚಾರಿಸಿದಾಗ ಹೇಗೆ ಗುಂಡೇಟು ಬಿತ್ತು ಎಂದು ಅವರು ವಿವರಿಸದಾದರು. ಒಬ್ಬ ಮಾತ್ರ ಮುಸಲ್ಮಾನರು ಹೊಡೆದರು ಎಂದ. ಐದು ವರ್ಷದ ಮನು ಘನಿ ಹಾಗೂ ಆರು ವರ್ಷದ ಬಾಲಕಿ ಶರೀಫಳನ್ನು ಸಿ.ಪಿ.ಐ. (ಎಂ) ತಂಡ ನೋಡಿತು. ಅವರನ್ನು ಅವರ ನೆರೆ ಕರೆಯವರು ಆಸ್ಪತ್ರೆಗೆ ಸೇರಿಸಿದ್ದರು. ಅವರ ತಂದೆ-ತಾಯಿ ಎಲ್ಲದ್ದಾರೋ ಪತ್ತೆಯಿಲ್ಲ. ಅವರು ರಸ್ತೆಯಲ್ಲಿ ಓಡುತ್ತಿದ್ದುದನ್ನು, ಆರ್.ಎ.ಸಿ. ಪಡೆಗಳು ಗುಂಡುಹಾರಿಸು ವುದನ್ನು ನೋಡಿದುದಾಗಿ ನೆರೆಕರೆಯವರು ತಿಳಿಸಿದರು. ಇಬ್ಬರಿಗೂ ಗುಂಡೇಟು ತಗಲಿತ್ತು. ಕಾಟೇಪುರ ಮಸೀದಿಯ ಇಮಾಂ 80 ವರ್ಷದ ಸುಲ್ತಾನ್ ಅಹ್ಮದ್ ಮೇಲೆ 25 ಮಂದಿ ಲಾಠಿ ಧಾರಿಗಳು ಆಕ್ರಮಣ ನಡೆಸಿದರು.

ಝೀನತ್ ಬಾನು ಎಂಬ 18 ವರ್ಷದ ಬಾಲಕಿ ಸಿ.ಪಿ.ಐ. (ಎಂ) ತಂಡಕ್ಕೆ ತಿಳಿಸಿದ ಘಟನೆಯಿದು-ಅಕ್ಟೋಬರ್ 24 ರಂದು 25-30 ಮಂದಿ ಆಕೆಯ ಮನೆಯ ಬಾಗಿಲು ಮುರಿದು ಒಳ ನುಗ್ಗಿದರು. ಮನೆಯ ಹೆಂಗಸರನ್ನು ಹಿಡಿದು 'ಎಲ್ಲರ ಮೇಲೂ ಅತ್ಯಾಚಾರ ನಡೆಸಿದರು. ಆ ಹುಡುಗಿ ಮನೆಯ ಮಾಡಿನಿಂದ 'ಜಿಗಿದಳು. ನಂತರ ಪ್ರಜ್ಞೆ ತಪ್ಪಿ ಹೋಯಿತು. ಈಗ ಆಕೆಯ ಎರಡು ಕಾಲುಗಳೂ ಮುರಿದು ಆಸ್ಪತ್ರೆಯಲ್ಲಿದ್ದಾಳೆ.

ಇಷ್ಟು ರಾಮನ ಹೆಸರಿನಲ್ಲಿ ನಡೆದ ರಾವಣನೂ ಮಾಡದ ಕೃತ್ಯಗಳು!

"ಮೂಲಭೂತವಾದ ಪ್ರಜಾಪ್ರಭುತ್ವ ಮುನ್ನಡೆಗೆ ಮಾರಕ"

ಕೋಮು ಸೌಹಾರ್ದಕ್ಕೆ ನಗರದ ವಿಜ್ಞಾನಿಗಳ ಮನವಿ

ಕೋಮುಸೌಹಾರ್ದ ಹಾಗೂ ಶಾಂತಿ ಕಾಪಾಡಲು ಪ್ರಯತ್ನಿಸಬೇಕೆಂದು ನಗರದ ನೂರೈವತ್ತಕ್ಕೂ ಹೆಚ್ಚು ವಿಜ್ಞಾನಿ ಗಳು ತಮ್ಮ ಸಹಯೋಗಿಗಳು ಹಾಗೂ ಎಲ್ಲಾ ಜನಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಕೋಮು ಹಿಂಸಾಚಾರ ಅಸಹನೆ, ದ್ವೇಷ ಉದ್ದೀಪಿಸುವ ಶಕ್ತಿಗಳ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕೆಂದು ಅವರು ಕೇಂದ್ರ, ರಾಜ್ಯ ಸರಕಾರಗಳಿಗೂ ಮನವಿ ಮಾಡಿಕೊಂಡಿದ್ದಾರೆ. ಧರ್ಮವನ್ನು ರಾಜಕೀಯದ ಸಾಧನವಾಗಿ ಬಳಸಬೇಡಿ ಎಂದೂ ಅವರು ಎಲ್ಲಾ ರಾಜಕೀಯ ಪಕ್ಷಗಳನ್ನು ವಿನಂತಿಸಿ ಕೊಂಡಿದ್ದಾರೆ.

ಭಾರತದ ಧಾರ್ಮಿಕ ಪರಂಪರೆ ಶತಮಾನಗಳಿಂದ ವಿವಿಧ ಮೂಲಗಳಿಂದ ಪ್ರೇರಣೆ ಪಡೆದು ಅದನ್ನು ತನ್ನದಾಗಿಸಿಕೊಂಡಿದೆ ಎಂದಿರುವ ಈ ವಿಜ್ಞಾನಿಗಳು ಮೂಲಭೂತವಾದಿಗಳು ಅಸಹನೆ ಬೋಧಿಸುತ್ತಿದ್ದಾರೆ. ದೇಶದ ಪ್ರಜಾಪ್ರಭುತ್ವ, ಜಾತ್ಯತೀತ ಆದರ್ಶಗಳಿಗೆ ಗಂಭೀರ ಬೆದರಿಕೆಯೊಡ್ಡಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಜ್ಞಾನ - ತಂತ್ರಜ್ಞಾನದ ಪ್ರಗತಿ ನಾಗಾಲೋಟ ಮಾಡುತ್ತಿರುವಾಗ, ಆಹಾರ, ಶುದ್ಧ ನೀರು ಪೂರೈಕೆ, ಮೂಲಭೂತ ಆರೋಗ ವ್ಯವಸ್ಥೆ, ವಾಸಕ್ಕೆ ಮನೆ ಮುಂತಾದ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವ ದೊಡ್ಡ ಜವಾಬ್ದಾರಿ ಮುಂದಿರುವಾಗ ಇಂತಹ ವಿವಾದಗಳಲ್ಲಿ ನಮ್ಮ ಅಮೂಲ್ಯ ಸಮಯ, ಶಕ್ತಿ ಹಾಗೂ ಸಂಪನ್ಮೂಲಗಳು ವ್ಯರ್ಥವಾಗುತ್ತವೆ ಎಂದು ಈ ವಿಜ್ಞಾನಿಗಳು ಖೇದ ವ್ಯಕ್ತಪಡಿಸಿದ್ದಾರೆ. ಧಾರ್ಮಿಕ ಮೂಲಭೂತವಾದ ತರ್ಕಬದ್ಧ ಚರ್ಚೆ ಹಾಗೂ ವಿಚಾರ - ವಿಮರ್ಶೆಯ ಬಾಗಿಲು ಮುಚ್ಚಿ ಪ್ರಜಾಸತ್ತಾತ್ಮಕ ಸಾಮಾಜಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ. ಈಗಾಗಲೇ ನಮ್ಮ ಸಾಧನೆಗಳನ್ನು ವ್ಯರ್ಥಗೊಳಿಸುತ್ತವೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ. ಸಿ.ಎನ್.ಆರ್. ರಾವ್ ರಾಷ್ಟ್ರೀಯ ವೈಮಾನಿಕ ಪ್ರಯೋಗ ಶಾಲೆಯ ನಿರ್ದೇಶಕ ಪ್ರೊ. ಆರ್. ನರಸಿಂಹ, ರಾಮನ್ ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ. ವಿ. ರಾಧಾಕೃಷ್ಣನ್, ಯೋಜನಾ ಆಯೋಗದ ಸಲಹೆಗಾರ ಪ್ರೊ. ಎ.ಕೆ.ಎನ್. ರೆಡ್ಡಿ ಮತ್ತಿತರ ಹಲವಾರು ಪ್ರಸಿದ್ಧ ವಿಜ್ಞಾನಿ ಗಳು ಈ ಮನವಿಗೆ ಸಹಿ ಹಾಕಿದ್ದಾರೆ.

ಈ ವಾರ

★ ನಮ್ಮಲ್ಲಿ ಹೆಸರಿಗೆ ಮಾತ್ರ ಒಂದು ಔಷಧ ಸಂಹಿತೆಯಿದೆ. ಔಷಧಗಳ ಗುಣಮಟ್ಟ, ಅವುಗಳ ಬಳಕೆಯ ಪರಿಣಾಮ ಮುಂತಾದ ಬಹುಮುಖ್ಯ ಅಂಶಗಳತ್ತ ಅದರ ದೃಷ್ಟಿ ಹರಿಯುವುದು ಅಪರೂಪ. ಔಷಧಗಳ ಬೆಲೆ ಅದರ ಕೇಂದ್ರ ಲಕ್ಷ್ಯ.

ಇದರ ಪರಿಣಾಮವಾಗಿ ಔಷಧ ಮಾರುಕಟ್ಟೆ ಲಾಭಬಡುಕರ ಬಿಗಿಮುಷ್ಟಿಯಲ್ಲಿ ಸಿಕ್ಕಿಬಿದ್ದಿದೆ. ನಮ್ಮದೇಶದ ಆರೋಗ್ಯದ ದೃಷ್ಟಿಯಿಂದ 116 ಔಷಧಗಳು ಸಾಕು ಎಂಬುದು ತಜ್ಞರ ಅಭಿಮತ ಆದರೀಗ ಮಾರುಕಟ್ಟೆಯಲ್ಲಿ 80,000 ಕ್ಕೂ ಮಿಕ್ಕ ಔಷಧ ನಮೂನೆಗಳು.ಕಳೆದ 4 ವರ್ಷಗಳಲ್ಲಿ ಔಷಧ ಬೆಲೆಗಳು ಶೇ 400 ರಷ್ಟು ಹೆಚ್ಚಿವೆ.

ಈಗ ನಿಷೇಧಕ್ಕೆ ಗುರಿಯಾದ ಸ್ಟೆರಾಯ್ಡ್ ಮಿಶ್ರಣ ಹಲವು ಹೆಸರುಗಳಲ್ಲಿ ಮಾರುಕಟ್ಟೆಯಲ್ಲಿ ದೊರಕುತ್ತಿದೆ. ವೈದ್ಯರೂ ಅದನ್ನು ಬಳಸುವಂತೆ ಸೂಚಿಸುತ್ತಿದ್ದಾರೆ. ಸಾವಿರಾರು ರೋಗಿಗಳು ದಿನ ನಿತ್ಯ ಇದನ್ನು ಬಳಸುತ್ತಿದ್ದಾರೆ.

– ಕನ್ನಡಪ್ರಭ ಸಂಪಾದಕೀಯ 23-10-90

★ (ಪೋಲೆಂಡ್‌ನಲ್ಲಿ) ಧಾರ್ಮಿಕ ಪ್ರಾರ್ಥನೆ ಇರುವ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಿ ಕೊಡೆವು ಎಂದು ಹಲವು ತಂದೆ ತಾಯಿಗಳು ಬಹಿರಂಗವಾಗಿಯೇ ಹೇಳಿ ಧಾರ್ಮಿಕ ಭಾವನೆಗಳ ಉದ್ದೀಪನೆಗೆ ಅವಕಾಶವಿಲ್ಲದ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತಿದ್ದಾರೆ...... ಕಮ್ಯುನಿಸ್ಟರಿಂದ ಬಿಡುಗಡೆ ಪಡೆದು ಚರ್ಚುಗಳ ಹಿಡಿತಕ್ಕೆ ಸಿಕ್ಕುವುದು ಸರಿಯಲ್ಲವೆಂದು ಬುದ್ಧಿಜೀವಿಗಳು ಜನರಿಗೆ ಕರೆ ನೀಡಿದ್ದಾರೆ.

– 'ಪ್ರಜಾವಾಣಿ' ಲೇಖನ ಅಕ್ಟೋಬರ್ 21

★ ಒಂದೊಮ್ಮೆ ಯುರೋಪ್ ಖಂಡಕ್ಕೆ (ಮತ್ತು ಇಂಗ್ಲೆಂಡ್‌ಗೆ) ಕೂಲಿಯಾಳುಗಳಾಗಿ ತರಲ್ಪಟ್ಟ ವಲಸೆಗಾರರು ಈಗ ಹೆಚ್ಚು ಜನಾಂಗವಾದದ ಅಲೆಗೆ ಸಿಲುಕಿದ್ದಾರೆ. ಸಾಹಿತ್ಯ, ಕಲೆ, ವಿಜ್ಞಾನ ಮತ್ತು ತತ್ವಜ್ಞಾನ ಕ್ಷೇತ್ರಗಳಲ್ಲಿ ಯುರೋಪ್‌ನ ಸಾಧನೆಗಳನ್ನು ಇದು ಅಣಕ ಮಾಡುತ್ತಿದೆ.

ಫ್ರಾನ್ಸ್‌ನ ರಾಷ್ಟ್ರೀಯರಂಗ ಇದಕ್ಕೊಂದು ಉದಾಹರಣೆ. ಅದು ಬಹಳ ಜನಪ್ರಿಯತೆ ಪಡೆಯುತ್ತಿದೆ. ಅದರ ನಾಯಕ ಲಿ ಪೆನ್‌ಗೆ ಯಾವುದೇ ಆರ್ಥಿಕ ಅಥವಾ ರಾಜಕೀಯ ಕಾರ್ಯಕ್ರಮಗಳಿಲ್ಲ. ವಲಸೆಗಾರರನ್ನು ಓಡಿಸಿ ಫ್ರಾನ್ಸನ್ನು ಫ್ರೆಂಚರಿಗೆ ಉಳಿಸುವುದೊಂದೇ ಅವರ ಕಾರ್ಯಕ್ರಮ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆತ ಒಬ್ಬ ಜನಾಂಗವಾದಿ. ಪರಕೀಯರ ದ್ವೇಷದ ಬಗೆಗಿನ ತನ್ನ ಮನೋಭಾವವನ್ನು ಆತ ಬಚ್ಚಿಡುವುದೂ ಇಲ್ಲ.

– 'ದಿ ಹಿಂದೂಸ್ತಾನ್ ಟೈಮ್ಸ್' ಲೇಖನದಲ್ಲಿ ಅಕ್ಟೋಬರ್ 25

★ ಈ ವಿವಾದ (ಅಯೋಧ್ಯೆ ವಿವಾದ) ಬೇಗನೆ ಪರಿಹಾರವಾದರೂ ಇನ್ನು ಇಂಥ ಇತರ ಸಮಸ್ಯೆಗಳನ್ನು ಎಬ್ಬಿಸಲಾಗುವುದೆಂದು ಧಾರ್ಮಿಕ ಮೂಲಭೂತವಾದಿಗಳು ಈಗಾಗಲೇ ಘೋಷಿಸಿದ್ದಾರೆ.

ಅದೆಷ್ಟೋ ಸಲ ದೇವಸ್ಥಾನಗಳನ್ನು ಲೂಟಿ ಮತ್ತು ನಾಶ ಮಾಡಿರುವುದು ಧಾರ್ಮಿಕ ದ್ವೇಷದಿಂದಲ್ಲ. ಪುರಾತನ ದೇವಾಲಯಗಳಲ್ಲಿ ಇರುವ ಅಪಾರ ಸಂಪತ್ತಿಗಾಗಿ, ಅಂದರೆ ಆರ್ಥಿಕ ಕಾರಣದಿಂದ ಹೀಗೆ ಮಾಡಲಾಗಿದೆ. ಕಾಶ್ಮೀರದ ಹರ್ಷ ಎಂಬ ಹಿಂದೂ ರಾಜ ಅನೇಕ ದೇವಸ್ಥಾನಗಳನ್ನು ನಾಶಮಾಡುವುದರಿಂದ ಈ ಅಂಶ ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ. ಮಾನ್ಯ ರಾಜರು ಕೂಡ ಈ ರೀತಿ ಮಾಡುವ ಅನೇಕ ಉದಾಹರಣೆಗಳಿವೆ.

ಅಭಿವೃದ್ಧಿ ದೇಶಗಳ ಪೈಕಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಲಾಗುವ ಒಂದು ದೇಶ, ಒಂದು ನಿರ್ದಿಷ್ಟ ಸ್ಥಳದಲ್ಲಿ ಮಸೀದಿ ಇರಬೇಕೋ ದೇವಾಲಯ ಇರಬೇಕೋ ಎಂಬ ಪ್ರಶ್ನೆಯಲ್ಲಿ ತೊಡಗಿಸಿಕೊಂಡಿರುವುದು ಹಾಸ್ಯಾಸ್ಪದವಲ್ಲವೆ?

– ಭರತ್ ದೋಗ್ರಾ, ಡೆಕ್ಕನ್ ಹೆರಾಲ್ಡ್' ಲೇಖನ ಅಕ್ಟೋಬರ್ 28

ಎಲ್ಲೆಡೆಯಿಂದ ಎದ್ದ ಕೂಗು.....

ಪುಟ 5 ರಿಂದ

ಅವರು ರಾಮನನ್ನು ಎತ್ತಿ ಮತಪೆಟ್ಟಿಗೆ ಯಲ್ಲಿ ಹಾಕುತ್ತಿದ್ದರೆ ರಾಮಮಂದಿರ ಹೇಗೆ ಆಗುತ್ತದೆ?

-ವಿ.ಪಿ.ಸಿಂಗ್

28-10-1990

"ಅಪಾಯಕಾರಿ ರಾಜಕೀಯ"

ಟೈಂಸ್ ಆಫ್ ಇಂಡಿಯಾ' ದಲ್ಲಿ ಓದುಗರ ಪತ್ರಕೋಮುವಾದದ ಪ್ರಚಾರಕ್ಕೆ ಕಾರಣ ತಂತಮ್ಮ ಮತಗಳ ಬಗ್ಗೆ ಅತೀವ ಶ್ರದ್ಧೆಯೆಂಬ ಭಾವನೆಯಿದೆ. ಇದು ತಪ್ಪು ಭಾವನೆ ಎಂದು ಇತಿಹಾಸವೇ ಸಿದ್ಧಪಡಿಸಿದೆ. ನಮ್ಮ ದೇಶದ ಕೋಮುವಾದೀ ಪ್ರಚಾರ ಮತ್ತು ದಂಗೆಗಳ ಬಗ್ಗೆಯೂ ಇದು ನಿಜ.

ಜಿನ್ನಾ ಒಬ್ಬ ಅತ್ಯಂತ ಧಾರ್ಮಿಕ ವ್ಯಕ್ತಿಯೇನೂ ಆಗಿರಲಿಲ್ಲ, ಮತಾಂಧ ಮುಲ್ಲಾನೂ ಆಗಿರಲಿಲ್ಲ. ಆತ ಇಸ್ಲಾಮನ್ನು ರಾಜಕೀಯ ಅಸ್ತ್ರವಾಗಿ ಬಳಸಿದರಷ್ಟೇ.....

'ಕಳೆದ ವರ್ಷ ದೇವಸ್ಥಾನ ಕಟ್ಟುವ ಕೆಲಸ ರಾಮಶಿಲಾ ಕಾರ್ಯಕ್ರಮದೊಂದಿಗೆ ಅಖಿಲ ಭಾರತ ಸ್ವರೂಪ ಕೊಟ್ಟಾಗ ಅದು ಸಾರ್ವತ್ರಿಕ ಚುನಾವಣೆಗಳಿಗೆ ನಡೆದ ಸಿದ್ಧತೆಯಾಗಿತ್ತು. ಜೂನ್ 1989 ರಲ್ಲಿ ತನ್ನ ಪಾಲಂಪುರ್ ಸಭೆಯಲ್ಲಿ ಬಿ.ಜೆ.ಪಿ ಇದನ್ನು ಪ್ರಚಾರದ ಪ್ರಮುಖ ವಿಷಯ ವಾಗಿ ಅಂಗೀಕರಿಸಿದ ಮೇಲೆ ಅದ್ವಾಣಿ ಯವರು ಬಹಿರಂಗವಾಗಿಯೇ ಹೇಳಿದ್ದರು - "ಇವು ಮತಗಳಾಗಿ ಪರಿವರ್ತನೆ ಹೊಂದುತ್ತವೆ ಎಂಬ ಭರವಸೆ ನನಗಿದೆ."

- ನಿಖಿಲ್ ಚಕ್ರವರ್ತಿ 28-11990

ಟೈಂಸ್ ಆಫ್ ಇಂಡಿಯಾ

ಟೊಯೋಟಾ ಹಿಂದೂವಾದದ ಅಲೆಗಳ ಮೇಲೆ ತೇಲುತ್ತಿರುವಾಗ, ಸುತ್ತಲಿರುವ ಜನಜಂಗುಳಿಯ ಧಾರ್ಮಿಕ ಉನ್ಮಾದದಿಂದ ಮೈಮರೆಯುವುದು ಸುಲಭ ಶ್ರೀಯುತ ಲಾಲ್‌ಕೃಷ್ಣ ಅದ್ವಾಣಿಯವರ ರಥಯಾತ್ರೆ ನಿಸ್ಸಂಶಯವಾಗಿಯೂ ಭಾರತೀಯ ಜನತಾ ಪಾರ್ಟಿ ಅಥವಾ ಅದರ ಹಿಂದಿನ ಅವತಾರ ನಡೆಸಿದ ಅತ್ಯಪೂರ್ವ.

ಅತ್ಯಂತ ದೊಡ್ಡ, ಅತ್ಯಂತ ಯಶಸ್ವಿ ದೃಶ್ಯ. ಆದ್ದರಿಂದ ರಾಮನ ಬಗ್ಗೆ ಸಾರ್ವತ್ರಿಕ ಸ್ಪಂದನ ಮತಗಳಾಗಿ ಪರಿವರ್ತನೆಯಾಗಬಹುದು ಎಂದು ಆಸೆಯಿಂದ ಬಿ.ಜೆ.ಪಿ ರಾಷ್ಟ್ರೀಯರಂಗಕ್ಕೆ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಂಡಿದೆ.

ಎಸ್.ಎಸ್.ಎ. ಅಯ್ಯರ್.

ಟೈಸ್‌ಆಫ್ ಇಂಡಿಯಾ.

24-10-1990

'ನಿಜ ಉದ್ದೇಶ'

ರಥಯಾತ್ರೆಯ ಸಂಘಟಕರು ಅದಕ್ಕೊಂದು ಪಾವಿತ್ರ ಹೊದಿಸಲು ಪ್ರಯತ್ನ ಪಟ್ಟರೂ ಅದರ ಉದ್ದೇಶ ಆರಂಭದಿಂದಲೇ ಸ್ವಯಂವೇದ್ಯವಾಗಿತ್ತು. ಸೋಮನಾಥ ದೇವಸ್ಥಾನದ ದ್ವಾರದಲ್ಲೇ ಅದ್ವಾಣಿಗೆ ಬೆಂಬಲಿಗರು ಒಂದು ದೊಡ್ಡ ಬಿಲ್ಲು ಮತ್ತು ಬತ್ತಳಿಕೆ ನೀಡಿದರು. ಗಂಟಲು ಬಿರಿದು ಕೂಗಿದ ಘೋಷಣೆ ಗಳು ಯುದ್ಧವಾತಾವರಣವನ್ನೇ ನಿರ್ಮಿಸಿದವು. ಯಾತ್ರೆ ಕೋಮು ಸೌಹಾರ್ದವನ್ನು ಹೆಚ್ಚಿಸುತ್ತದೆಯೆಂದು ಮತ್ತೆ ಮತ್ತೆ ಮಾಡಿದ ಅದ್ವಾನಿಯ ಉದ್ಗಾರ ಸುಮಾರಾಗಿ ನಗೆಗೀಡಾದ ಉದ್ಗಾರ.

...ಹಿಂದೆ ಕೋಮುವಾದಿ ಘೋಷಣೆ ಗಳನ್ನು ಕೂಗುವುದು ಅಸೂಕ್ತ ಎಂದು ಪರಿಗಣಿಸಲಾಗಿತ್ತು. ಈಗ ಅದು ಸ್ವೀಕಾರಾರ್ಹವಾಗುತ್ತಿದೆ. ಇದು ಈ ಒಟ್ಟು ವಿವಾದ ಅತ್ಯಂತ ಭಯ ಹುಟ್ಟಿಸುವ ಸಂಗತಿ.ಶಸ್ತ್ರಗಳು, ಭಾವನೆಗಳು ಉನ್ಮಾದಗಳ ಹೊಳೆ ದಂಗೆ, ತಿಕ್ಕಾಟಗಳಿಗೆ ಅನುಕೂಲವಾದ ವಾತಾವರಣ ಸೃಷ್ಟಿಸಿದೆ.

- ಇಲ್ಲಸ್ಟ್ರೇಡ್ ವೀಕ್ಲಿ 21-27 ಅಕ್ಟೋಬರ್

"ಅದ್ವಾಣಿಯ ಗುರಿ ಅಯೋಧ್ಯೆಯಲ್ಲ, ದೆಹಲಿ" ಅಯೋಧ್ಯೆಯ ಬಿ.ಜೆ.ಪಿ. ಕಾಂಗ್ರೆಸ್(ಐ) ಉದ್ದೇಶಗಳನ್ನು ಸಂಶಯ ದಿಂದಲೇನೋಡುತ್ತಿದ್ದಾರೆ. "ಅದ್ವಾಣಿಯ ರಥಯಾತ್ರೆಯ ನಿಜ ಗುರಿಯಾವುದು? ಅವರ ನಿಜಗುರಿ ದೆಹಲಿ ಅಯೋಧ್ಯೆ ಯಲ್ಲ. ತಾನು ಹೋದಲ್ಲೆಲ್ಲಾ ದಂಗೆ ಉಂಟುಮಾಡುವುದೇ ಅದರ ಏಕೈಕ ಉದ್ದೇಶವಾಗಿರುವಾಗ ಇಂತಹ ಯಾತ್ರೆಯ ಅಗತ್ಯವೇನು?" ಎಂದು ವಿಶ್ವನಾಥ್ ಪ್ರಸಾದಾಚಾರ್ಯ ಎಂಬಾತ ಪ್ರಶ್ನಿಸಿದರು. ಕಾಂಗ್ರೆಸ್ (ಐ) ನ ನಿಲುವಿನ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ರಾಜೀವ್‌ಗಾಂಧಿ ಮುಲಾಯಂಸಿಂಗ್ ಯಾದವ್‌ರ ನಿಲುವು ಬೆಂಬಲಿಸಿದರೆ ಈ ಪ್ರದೇಶ ಹಲವಾರು ಕಾಂಗ್ರೆಸ್ಸಿಗರು ವಿ.ಹೆಚ್.ಪಿ., ಬಿ.ಜೆ.ಪಿಯನ್ನು ಪರೋಕ್ಷವಾಗಿ ಬೆಂಬಲಿಸುತ್ತಿದ್ದಾರೆ.

-ದಿ ವೀಕ್ ಅಕ್ಟೋಬರ್28

"ಅಬ್ಬರದ ಸವಾರಿ....."

ಮಹಾಭಾರತ ಟಿ.ವಿ.ಯ ಧಾರವಾಹಿಯ ಅರ್ಜುನನ ರಥದಂತೆ ರಚಿಸಿದ ಏರ್-ಕಂಡೀಷನ್ಡ್ ಡಿ.ಸಿ.ಎಂ. - ಟೋಯೋಟಾ ವ್ಯಾನ್ ಹೋದಲ್ಲೆಲ್ಲಾ ದ್ವೇಷ ಹರಡುವ ಕೋಮುವಾದೀ ಘೋಷಣೆಗಳ ಸ್ವಾಗತವೇ ಕಾದಿತ್ತು " ತೇಲ್ ಲಗಾವೋ ದಾಬುರ್ ಕಾ, ನಾಮ್ ಮಿಟಾದೋ ಬಾಬರ್ ಕಾ" (ದಾಬರ್‌ರವರ ಎಣ್ಣೆ ಹಚ್ಚಿ, ಬಾಬರ್‌ನ ಹೆಸರು ಅಳಿಸಿ) ಇತ್ಯಾದಿ.

ಅದ್ವಾಣಿ ದ್ವೇಷ ಕಾರುವ ಘೋಷಣೆ ಗಳನ್ನು ಸಾರ್ವಜನಿಕವಾಗಿ ಒಪ್ಪುವುದಿಲ್ಲ ವೆಂದರೂ ಅವರ ಕೆಲವು ಭಾಷಣಗಳು ಕಮ್ಮಿಉದ್ರೇಕಕಾರಿಯೇನಾಗಿರಲಿಲ್ಲ. ಅವರ ಸಹಯೋಗಿಗಳ ಭಾಷಣಗಳು ಕೂಡಾ.

-ಇಂಡಿಯಾ ಟುಡೆ'ಯಲ್ಲಿ

ಎನ್.ಕೆ.ಸಿಂಹ

Printed and Published by P.Ramachandra Rao on behslf of Communist Party of India (Marxist) Karnataka State Committee, 9[illegible] A, 2nd cross, Muneswara Block, Palace Guttahslli, BANGALORE-3, Phone: 366489. Editor: P. Ramachandra Rao.